ಶನಿವಾರ, ಮೇ 15, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 135 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪರೀಕ್ಷೆಗಳ ಗೊಂದಲದಿಂದ ಆತಂಕ, ಖಿನ್ನತೆಗೆ ಒಳಗಾಗಿರುವ ಮಕ್ಕಳಲ್ಲಿ ಸಕಾರಾತ್ಮಕ ಮನೋಭಾವ, ಆತ್ಮಸ್ಥೈರ್ಯ ತುಂಬುವುದು ಅವಶ್ಯ



ಚರ್ಚೆ ಕೋವಿಡ್-19ರ ಎರಡನೇ ಅಲೆಯನ್ನು ಸರ್ಕಾರ ಸರಿಯಾಗಿ ನಿರ್ವಹಿಸುತ್ತಿದೆಯೇ? 7

‘ಸ್ಪುಟ್ನಿಕ್ ವಿ’: 3.6 ಕೋಟಿ ಡೋಸ್ ಶೀಘ್ರ ಲಭ್ಯ 9

ಮಾಲೂರು: ಶೀಘ್ರವೇ ಕೋವ್ಯಾಕ್ಸಿನ್ ಘಟಕ 4

ಸೆನ್ಸೆಕ್ಸ್	ನಿಫ್ಟಿ	₹/$
48,732 ▲	14,677 ▼	73.29 ▲

ಆಸ್ಪತ್ರೆಗಳ ಭಾರ ತಗ್ಗಿಸಲು ಬಿಎಂಸಿ–92 ವೈದ್ಯ ಪಡೆಯ ಹೊಸ ಮಾರ್ಗ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ರಾಜಧಾನಿಯ ವ್ಯಾಪ್ತಿಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ಆಸ್ಪತ್ರೆಗಳ ಮೇಲಿನ ಭಾರ ತಗ್ಗಿಸಲು ಕರ್ನಾಟಕ ಕೋವಿಡ್ ಸ್ವಯಂ ಸೇವಕರ ತಂಡ (ಕೆಸಿವಿಟಿ) ಮತ್ತು ಬೆಂಗಳೂರು ವೈದ್ಯಕೀಯ ಕಾಲೇಜಿನ 1992ರ ಬ್ಯಾಚ್‌ನ ಪದವೀಧರರ ಗುಂಪು (ಬಿಎಂಸಿ–92) ಸದ್ದಿಲ್ಲದೇ ಪರ್ಯಾಯ ವ್ಯವಸ್ಥೆಯೊಂದನ್ನು ಕಟ್ಟುತ್ತಿವೆ.

ಅಮೆರಿಕ, ಬ್ರಿಟನ್‌ನಲ್ಲಿರುವ ವೈದ್ಯರೂ ಕೈಜೋಡಿಸಿದ್ದು, ವಾರಾಂತ್ಯದೊಳಗೆ ನಿತ್ಯವೂ 5,000 ಸೋಂಕಿತರಿಗೆ ನೆರವು ನೀಡಲು ಶಕ್ತವಾಗಲಿದೆ ಈ ವ್ಯವಸ್ಥೆ.

ಸೋಂಕಿತರಲ್ಲಿ ಭಯ ಕಡಿಮೆ ಮಾಡಿ ಮತ್ತು ಅವರಿಗೆ ದೃಢೀಕೃತ ಮಾಹಿತಿ ರವಾನಿಸುವ ಉದ್ದೇಶದಿಂದ ಸ್ವಯಂಸೇವಕರ ಪಡೆ ಕಟ್ಟುವ ಆಲೋಚನೆಯಲ್ಲಿ ಶುರುವಾದ ಯೋಜನೆ ಈಗ, ಬಿಎಂಸಿ–92 ತಂಡದ ವೈದ್ಯರ ಸಹಾಯದಿಂದ ಆನ್‌ಲೈನ್ ಆಸ್ಪತ್ರೆಯ ಸ್ವರೂಪವನ್ನೇ ಪಡೆದುಕೊಂಡಿದೆ.

ಸೋಂಕಿತರ ಚಿಕಿತ್ಸೆಗೆ ತಜ್ಞ ವೈದ್ಯರು, ಆಪ್ತ ಸಮಾಲೋಚಕರು, ಸಹಾಯವಾಣಿ, ಆಮ್ಲಜನಕ ಸಾಂದ್ರಕಗಳು, ಪಲ್ಸ್ ಆಕ್ಸಿಮೀಟರ್‌ಗಳು ಸೇರಿದಂತೆ ಎಲ್ಲವೂ ಸಿದ್ಧವಾಗುತ್ತಿವೆ. ಕೋವಿಡ್ ರೋಗಿಗಳು ಆಮ್ಲಜನಕದ ಹಾಸಿಗೆಯವರೆಗೂ ಬರುವುದನ್ನು ತಡೆದು ಆಸ್ಪತ್ರೆಗಳ ಭಾರ ಕಡಿಮೆ ಮಾಡುವ ಗುರಿಯೊಂದಿಗೆ ಈ ತಂಡ ಸಕ್ರಿಯವಾಗಿದೆ.

9ನೇ ಪುಟ ನೋಡಿ

ಸರ್ಕಾರಿ ಆಸ್ಪತ್ರೆಗಳಿಗೆ 55 ಆಮ್ಲಜನಕ ಕಾನ್ಸನ್‌ಟ್ರೇಟರ್ ದೇಣಿಗೆ

ಒಳ್ಳೆ ಸುದ್ದಿ

ಶಿವಮೊಗ್ಗ: ಇಲ್ಲಿನ ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದಿದ್ದ ರಾಘವೇಂದ್ರ ಶೆಟ್ಟಿ ಅವರು ಅಮೆರಿಕದಲ್ಲಿರುವ ಭಾರತೀಯ ಸ್ನೇಹಿತರ ನೆರವಿನಿಂದ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ 55 ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ದೇಣಿಗೆ ಕೊಡಿಸಿದ್ದಾರೆ.

ಶಿವಮೊಗ್ಗದವರಾದ ರಾಘವೇಂದ್ರ 1993–97 ಬ್ಯಾಚ್ ವಿದ್ಯಾರ್ಥಿ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಆಮ್ಲಜನಕ ಕೊರತೆಯಿಂದ ಕೋವಿಡ್ ರೋಗಿಗಳಿಗೆ ಆಗುತ್ತಿರುವ ಸಮಸ್ಯೆ ಗಮನಿಸಿದ ಅವರು ಸ್ನೇಹಿತರ ಜತೆ ಚರ್ಚಿಸಿದ್ದಾರೆ. ಸ್ನೇಹಿತರ ಸಲಹೆಯಂತೆ ಅಮೆರಿಕದ ಒ2 ಫಾರ್ ಇಂಡಿಯಾ (O2 For India.Org) ಸಂಸ್ಥೆಗೆ ಮನವಿ ಮಾಡಿದ್ದಾರೆ. ಮನವಿಗೆ ಸ್ಪಂದಿಸಿದ ಸಂಸ್ಥೆಯ ಸಿಇಒ ಸತೀಶ್ ಅಂಬಾಟಿ, ಶ್ರೀಶಾ ಅಂಬಾಟಿ, ಒಪೆಲ್ ಕನ್ಸಲ್ಟಿಂಗ್, ಹಮ್ ಶಿವಮೊಗ್ಗ ಗೆಳೆಯರ ಸಹಕಾರದಲ್ಲಿ ಕಾನ್ಸನ್‌ಟ್ರೇಟರ್‌ಗಳನ್ನು ತರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರತಿ ಯೂನಿಟ್ ಬೆಲೆ ₹ 60 ಸಾವಿರ.

‘ರೋಗಿಗಳಿಗೆ ತುರ್ತಾಗಿ ಬಳಸಲು ಈ ಕಾನ್ಸನ್‌ಟ್ರೇಟರ್ ಸಹಕಾರಿ. ವಾತಾವರಣದಲ್ಲಿರುವ ಗಾಳಿಯನ್ನು ಹೀರಿ ಆಮ್ಲಜನಕವನ್ನು ಪ್ರತ್ಯೇಕಗೊಳಿಸುತ್ತದೆ. ಗ್ಯಾಸ್‌ಸ್ಟ್ರೀಮ್ ಮೂಲಕ ರೋಗಿಗೆ ನೀಡಬಹುದು’ ಎನ್ನುತ್ತಾರೆ ರಾಘವೇಂದ್ರ ಶೆಟ್ಟಿ.

08047166115 ಸಹಾಯವಾಣಿ

ಕೋವಿಡ್ ರೋಗಿಗಳಿಗೆ ನೆರವು ನೀಡಲು ಈ ತಂಡ 08047166115 ಸಂಖ್ಯೆಯ ಸಹಾಯವಾಣಿ ಆರಂಭಿಸಿದೆ. ಸಹಾಯವಾಣಿಗೆ ಕರೆ ಬಂದ ತಕ್ಷಣ ವಿವರ ದಾಖಲಿಸಿಕೊಂಡು, ಆಪ್ತ ಸಮಾಲೋಚಕರಿಗೆ ವರ್ಗಾಯಿಸಲಾಗುತ್ತದೆ. ಅಗತ್ಯವಿದ್ದರೆ ರೋಗಿಗಳಿಗೆ ವೈದ್ಯರು ಕರೆಮಾಡಿ, ಮಾರ್ಗದರ್ಶನ ನೀಡುತ್ತಾರೆ ಎಂದು ಡಾ.ವಾಸು ವಿವರಿಸಿದರು. ಮನೆಯಲ್ಲೇ ಪ್ರತ್ಯೇಕವಾಗಿದ್ದು, ಗುಣಮುಖರಾಗಲು ನೆರವು ಒದಗಿಸಲಾಗುವುದು. ಅಗತ್ಯ ಇರುವವರಿಗೆ ದಾನಿಗಳ ನೆರವಿನಲ್ಲಿ ಔಷಧಿ ಕಿಟ್ ಕೂಡ ತಲುಪಿಸಲಾಗುವುದು. ರೋಗಿಯೊಬ್ಬ ಕರೆಮಾಡಿದ ದಿನದಿಂದ ಸಂಪೂರ್ಣ ಗುಣಮುಖನಾಗುವವರೆಗೂ ಸಂಪರ್ಕದಲ್ಲಿ ಇದ್ದು, ನೆರವು ನೀಡಲಾಗುವುದು ಎಂದರು.

ಆಮ್ಲಜನಕ ಪೂರೈಕೆ ಅಗತ್ಯವಿರುವವರ ಚಿಕಿತ್ಸೆಗಾಗಿ ಎಚ್‌ಬಿಎಸ್ ಆಸ್ಪತ್ರೆ ಮತ್ತು ಮರ್ಸಿ ಮಿಷನ್ ಕೋವಿಡ್ ಆರೈಕೆ ಕೇಂದ್ರಗಳ ಸಹಭಾಗಿತ್ವ ಪಡೆಯಲಾಗಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಅಲ್ಲಿಗೆ ದಾಖಲಿಸಲಾಗುವುದು. ಆಮ್ಲಜನಕ ಪೂರೈಕೆ ಇರುವ ಹಾಸಿಗೆ ಸಿಗದೇ ಇದ್ದರೆ ರೋಗಿಯ ಮನೆಗೆ ಆಮ್ಲಜನಕ ಸಾಂದ್ರಕ ಒದಗಿಸಲಾಗುವುದು ಎಂದು ತಿಳಿಸಿದರು.

ಖಾಸಗಿ ಆಸ್ಪತ್ರೆಗಳಿಗೆ ಪೂರೈಕೆ ಸಮಸ್ಯೆ • ಔಷಧವಿಲ್ಲದೆ ಕೈಚೆಲ್ಲಲಾರಂಭಿಸಿದ ವೈದ್ಯರು

ಶಿಲೀಂಧ್ರ ಸೋಂಕಿಗೂ ಸಿಗದ ಔಷಧ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಪೀಡಿತರಿಗೆ ಬೇಕಾದ ರೆಮ್‌ಡಿಸಿವಿರ್, ಆಮ್ಲಜನಕ ಕೊರತೆ ಬೆನ್ನಲ್ಲೇ ಕೋವಿಡ್ ಜಯಿಸಿದವರಲ್ಲಿ ಕಾಣಿಸಿಕೊಳ್ಳುತ್ತಿರುವ ಶಿಲೀಂಧ್ರ ಸೋಂಕಿಗೂ (ಮ್ಯುಕೋರ್‌ಮೈಕೋಸಿಸ್ ಅಥವಾ ಬ್ಲ್ಯಾಕ್ ಫಂಗಸ್) ಔಷಧ ಕೊರತೆ ಬಾಧಿಸಿದೆ.

‘ಲಿಪೋಸೋಮಲ್ ಆಂಫೊಟೆರಿಸಿನ್ ಬಿ’ ಔಷಧವು ಮಾರುಕಟ್ಟೆಯಲ್ಲಿ ದೊರೆಯದ ಪರಿಣಾಮ ಖಾಸಗಿ ಆಸ್ಪತ್ರೆಗಳು ಕೈಚೆಲ್ಲಲಾರಂಭಿಸಿವೆ.

ಕೊರೊನಾ ಸೋಂಕಿತರ ಚಿಕಿತ್ಸೆಗೆ ಅಗತ್ಯವಿರುವ ‘ರೆಮ್‌ಡಿಸಿವಿರ್’ ಔಷಧ ಹಾಗೂ ಆಮ್ಲಜನಕದ ಕೊರತೆಯಿಂದ ಕೋವಿಡ್ ಚಿಕಿತ್ಸೆಯಲ್ಲಿ ವ್ಯತ್ಯಯವಾಗುತ್ತಿದೆ. ಇದರಿಂದಾಗಿ ರಾಜ್ಯದಲ್ಲಿ ಒಂದೂವರೆ ತಿಂಗಳಲ್ಲಿ 8,518 ಮರಣ ಪ್ರಕರಣಗಳು ವರದಿಯಾಗಿವೆ. ಇನ್ನೊಂದೆಡೆ ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುತ್ತಿದೆ. ಕೋವಿಡ್ ಪೂರ್ವದಲ್ಲಿ ವಿರಳವಾಗಿದ್ದ ಈ ಕಾಯಿಲೆಯು ಎರಡು ವಾರಗಳಿಂದ ಅಧಿಕ ಮಂದಿಯಲ್ಲಿ ಪತ್ತೆಯಾಗುತ್ತಿದೆ. ಆದರೆ, ಈ ಸೋಂಕಿಗೆ ಒಳಗಾದವರಿಗೆ ನೀಡಬೇಕಾದ ಔಷಧ ಪೂರೈಕೆಯಾಗುತ್ತಿಲ್ಲ.

‘ಲಿಪೋಸೋಮಲ್ ಆಂಫೊಟೆರಿಸಿನ್ ಬಿ’ ಔಷಧವನ್ನು ಸಿಪ್ಲಾ ಸೇರಿದಂತೆ ಕೆಲ ಕಂಪನಿಗಳು ಮಾತ್ರ ತಯಾರಿಸುತ್ತಿವೆ. ಆದರೆ, ಇದಕ್ಕೆ ಅಷ್ಟಾಗಿ ಬೇಡಿಕೆ ಇರದ ಕಾರಣ ಉತ್ಪಾದನೆ ತಗ್ಗಿಸಿದ್ದವು. ಈಗ ಏಕಾಏಕಿ ಈ ಔಷಧಕ್ಕೆ ಬೇಡಿಕೆ ಹೆಚ್ಚಿದೆ. ಸೋಂಕಿತ ವ್ಯಕ್ತಿಗೆ 10 ರಿಂದ 30 ದಿನಗಳವರೆಗೆ ಈ ಔಷಧ ನೀಡಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಈ ಔಷಧವನ್ನು ಒದಗಿಸದಿದ್ದಲ್ಲಿ ಸೋಂಕು ವ್ಯಕ್ತಿಯ ಮಿದುಳು ಸೇರಿ, ಜೀವಕ್ಕೆ ಅಪಾಯವನ್ನು ತಂದೊಡ್ಡಲಿದೆ ಎಂದು ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಸೋಂಕಿರ ಮಾಹಿತಿಯಿಲ್ಲ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ), ಪೀಪಲ್ ಟ್ರೀ ಆಸ್ಪತ್ರೆ, ನಾರಾಯಣ ನೇತ್ರಾಲಯ, ಕೊಲಂಬಿಯಾ ಏಷ್ಯಾ, ಟ್ರಸ್ಟ್‌ವೆಲ್ ಸೇರಿದಂತೆ ಪ್ರಮುಖ ಆಸ್ಪತ್ರೆಗಳಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ 100ಕ್ಕೂ ಅಧಿಕ ಶಿಲೀಂಧ್ರ ಸೋಂಕು ಪ್ರಕರಣಗಳು ವರದಿಯಾಗಿವೆ.

ಈ ಸೋಂಕಿಗೆ ಒಳಗಾದವರಲ್ಲಿ ಕೆಲವರು ಶಾಶ್ವತವಾಗಿ ದೃಷ್ಟಿ ಕಳೆದುಕೊಂಡಿದ್ದಾರೆ. ಬಿಎಂಸಿಆರ್‌ಐಗೆ ದಾಖಲಾದವರಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ. ಆದರೆ, ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಈ ಸೋಂಕಿಗೆ ಎಷ್ಟು ಮಂದಿ ಒಳಗಾಗಿದ್ದಾರೆ ಎಂಬ ಅಧಿಕೃತ ಮಾಹಿತಿ ಸರ್ಕಾರದ ಬಳಿಯೂ ಇಲ್ಲ.

‘ಶಿಲೀಂಧ್ರ ಸೋಂಕಿನ ನಿರ್ವಹಣೆಗೆ ಸಂಬಂಧಿಸಿದಂತೆ ಕೆಲವೊಂದು ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗುತ್ತಿದೆ. ಅನಿಯಂತ್ರಿತ ಮಧುಮೇಹ ಇರುವವರಿಗೆ ರಕ್ಷಣೆ, ಆಮ್ಲಜನಕ ನೀಡಬೇಕಾದಾಗ ವಹಿಸಬೇಕಾದ ಮುಂಜಾಗ್ರತೆ ಹಾಗೂ ಅನಿಯಂತ್ರಿತ ಸ್ಟಿರಾಯ್ಡ್ ಬಳಕೆಗೆ ಕಡಿವಾಣ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಲು ಆಸ್ಪತ್ರೆಗಳಿಗೆ ಸೂಚಿಸಲಾಗಿದೆ’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

ಜೀವ ಉಳಿಸಲು ಔಷಧ ಅಗತ್ಯ: ‘ಶಿಲೀಂಧ್ರ ಸೋಂಕಿಗೆ ಒಳಗಾಗಿ, ಚಿಕಿತ್ಸೆಗೆ ಬರುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಈಗಾಗಲೇ ನಮ್ಮಲ್ಲಿಯೇ 10ಕ್ಕೂ ಅಧಿಕ ಪ್ರಕರಣಗಳಲ್ಲಿ ಸೋಂಕು ದೃಢಪಟ್ಟಿದ್ದು, ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ. ಆದರೆ, ‘ಲಿಪೋಸೋಮಲ್ ಆಂಫೊಟೆರಿಸಿನ್ ಬಿ’ ಔಷಧವು ರಾಜ್ಯದಲ್ಲಿ ಎಲ್ಲಿಯೂ ಸಿಗುತ್ತಿಲ್ಲ’ ಎಂದು ಪೀಪಲ್ ಟ್ರೀ ಆಸ್ಪತ್ರೆಯ ಇಎನ್‌ಟಿ ಶಸ್ತ್ರಚಿಕಿತ್ಸಕ ಡಾ. ರವಿ ಸಚ್ಚಿದಾನಂದ ತಿಳಿಸಿದರು.

9ನೇ ಪುಟ ನೋಡಿ

‘ಮೈಸೂರಿನಲ್ಲಿ ಇಬ್ಬರಿಗೆ ಬ್ಲ್ಯಾಕ್ ಫಂಗಸ್’



ಮೈಸೂರು: ‘ನಗರದಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡ ಇಬ್ಬರಲ್ಲಿ ಅಪಾಯಕಾರಿ ಶಿಲೀಂಧ್ರ ಸೋಂಕು (ಬ್ಲ್ಯಾಕ್ ಫಂಗಸ್) ಕಾಣಿಸಿಕೊಂಡಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಇಬ್ಬರೂ ಕೋವಿಡ್ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲಾಗಿದ್ದರು. 15 ದಿನ ಇದ್ದ ಇವರಿಗೆ ಬ್ಲ್ಯಾಕ್ ಫಂಗಸ್ ಬಾಧಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದರು.

ಪೊಲೀಸ್ ಕಾನ್‌ಸ್ಟೆಬಲ್‌ಗೆ ಕಪ್ಪು ಶಿಲೀಂಧ್ರ ತಗುಲಿದ ಶಂಕೆ (ಕಲಬುರ್ಗಿ ವರದಿ): ಕೋವಿಡ್‌ನಿಂದ ಗುಣಮುಖರಾಗಿದ್ದ ನಗರದ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರಿಗೆ ಕೆಲವೇ ದಿನಗಳಲ್ಲಿ ದೃಷ್ಟಿದೋಷ, ಪಾರ್ಶ್ವವಾಯು ಸಮಸ್ಯೆ ಎದುರಾಗಿದೆ. ಇದು ಕಪ್ಪುಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕು ಎಂದು ಚಿಕಿತ್ಸೆ ನೀಡಿದ ವೈದ್ಯರು ಸಂದೇಹ ವ್ಯಕ್ತಪಡಿಸಿದ್ದಾರೆ.

ಪ್ರಮುಖ ಲಕ್ಷಣಗಳು

ಅತಿಯಾದ ತಲೆನೋವು, ಕಣ್ಣು ನೋವು, ಕಣ್ಣು ಕೆಂಪಾಗುವುದು, ಕಿವಿಯ ಹಿಂದೆ ಊತ, ಕಣ್ಣು ಗುಡ್ಡೆ ಮುಂದೆ ಬರುವುದು, ಕಣ್ಣಿನ ಸುತ್ತಲಿನ ಭಾಗದಲ್ಲಿ ನೋವು, ಚರ್ಮ ಕಪ್ಪಾಗುವಿಕೆ, ದವಡೆ ಭಾಗದಲ್ಲಿ ನೋವು, ಮೂಗು ಕಟ್ಟುವಿಕೆ, ಹಲ್ಲುಗಳು ಸಡಿಲಗೊಳ್ಳುವುದು, ಮೂಗಿನಲ್ಲಿ ರಕ್ತ ಸೋರುವಿಕೆ

ಶಿಲೀಂಧ್ರ ಸೋಂಕಿನ ಔಷಧ ಕೊರತೆಯಿದೆ. ಸರ್ಕಾರದಿಂದಲೇ ಔಷಧವನ್ನು ಖರೀದಿಸಲಾಗುತ್ತಿದೆ. ಅಗತ್ಯ ಆಧರಿಸಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲಾಗುತ್ತಿದೆ
ಭಾಗೋಜಿ. ಟಿ. ಖಾನಾಪುರೆ, ಔಷಧ ನಿಯಂತ್ರಕ, ಔಷಧ ನಿಯಂತ್ರಣ ಇಲಾಖೆ

ಶಿಲೀಂಧ್ರ ಸೋಂಕಿನ ಕೆಲವೊಂದು ಪ್ರಕರಣಗಳು ವರದಿಯಾಗಿವೆ. ಆ ಬಗ್ಗೆ ಮಾಹಿತಿ ಈಗ ಕಲೆ ಹಾಕಲಾಗುತ್ತಿದೆ. ಔಷಧವನ್ನೂ ಖರೀದಿ ಮಾಡಲಾಗುತ್ತಿದೆ
ಡಾ. ತ್ರಿಲೋಕ್ ಚಂದ್ರ
ಆರೋಗ್ಯ ಇಲಾಖೆ ಆಯುಕ್ತ

ಕೊರೊನಾ ಸೋಂಕು ರೋಗ ನಿರೋಧಕ ಶಕ್ತಿಯನ್ನು ಕುಂದಿಸುತ್ತದೆ. ಅತಿಯಾಗಿ ಸ್ಟಿರಾಯ್ಡ್ ಬಳಕೆ ಸೇರಿದಂತೆ ವಿವಿಧ ಕಾರಣಗಳಿಂದ ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುತ್ತಿದೆ
ಡಾ. ದೀಪಕ್ ಹಲ್ದೀಪುರ
ಮ್ಯುಕೋರ್‌ಮೈಕೋಸಿಸ್ ವಿಭಾಗದ ಮುಖ್ಯಸ್ಥ, ಟ್ರಸ್ಟ್‌ವೆಲ್ ಆಸ್ಪತ್ರೆ

ಮಹಾರಾಷ್ಟ್ರದಲ್ಲಿ ಹೆಚ್ಚು ಪ್ರಕರಣ

ಪುಣೆ (ಪಿಟಿಐ): ಅತ್ಯಂತ ವಿರಳ ಹಾಗೂ ಹೆಚ್ಚು ಅಪಾಯಕಾರಿಯಾದ ಬ್ಲ್ಯಾಕ್ ಫಂಗಸ್ ಸೋಂಕು ದೇಶದ ವಿವಿಧ ಭಾಗಗಳಲ್ಲಿ ವರದಿಯಾಗುತ್ತಿದೆ. ಕೋವಿಡ್‌ನಿಂದ ಚೇತರಿಸಿಕೊಂಡವರು ಅಥವಾ ಚೇತರಿಸಿಕೊಳ್ಳುತ್ತಿರುವವರಲ್ಲಿ ಈ ಸೋಂಕು ಪತ್ತೆಯಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದೆ. ಹಾಗಾಗಿಯೇ ಮಹಾರಾಷ್ಟ್ರ ಸರ್ಕಾರವು ಸಾಮಾನ್ಯ ಚಿಕಿತ್ಸಾ ಮಾನದಂಡವನ್ನೂ ರೂಪಿಸಿದೆ. ಪುಣೆ ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ ಈವರೆಗೆ 270 ಪ್ರಕರಣಗಳು ದೃಢಪಟ್ಟಿವೆ. ಕೋವಿಡ್ ಕಾಣಿಸಿಕೊಂಡ ನಂತರದ ದಿನಗಳಲ್ಲಿ ಈ ಸೋಂಕಿನಿಂದಾಗಿ ಮಹಾರಾಷ್ಟ್ರದಲ್ಲಿ 52 ಮಂದಿ ಮೃತಪಟ್ಟಿದ್ದಾರೆ.

ಕೋವಿಡ್‌ಗಿಂತ ಮುಂಚೆಯೂ ಬ್ಲ್ಯಾಕ್ ಫಂಗಸ್ ಪ್ರಕರಣಗಳು ಇದ್ದವು. ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ 4–5 ಪ್ರಕರಣಗಳಷ್ಟೇ ವರದಿಯಾಗಿದ್ದವು ಎಂದು ಪುಣೆಯ ನೋಬೆಲ್ ಆಸ್ಪತ್ರೆಯ ಡಾ. ಅಭಿಷೇಕ್ ಘೋಷ್ ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಸುಮಾರು 1,500 ಪ್ರಕರಣಗಳು ಪತ್ತೆಯಾಗಿವೆ ಎಂದು ಅಲ್ಲಿನ ಆರೋಗ್ಯ ಸಚಿವ ರಾಜೇಶ್ ಟೋಪೆ ಬುಧವಾರ ಹೇಳಿದ್ದರು. ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿಯೂ ಕೆಲವು ಪ್ರಕರಣಗಳು ದೃಢಪಟ್ಟಿವೆ.



ಪ್ರಕ್ಷುಬ್ಧ ಸಮುದ್ರ ‘ತೌಕ್ತೆ’ ಚಂಡಮಾರುತದ ಪರಿಣಾಮ ಕೇರಳದಲ್ಲಿ ಗಾಳಿ ಸಹಿತ ಭಾರಿ ಮಳೆಯಾಗುತ್ತಿದ್ದು, ತಿರುವನಂತಪುರದಲ್ಲಿ ಶುಕ್ರವಾರ ದೋಣಿಯೊಂದನ್ನು ಸಮುದ್ರದಿಂದ ದಡಕ್ಕೆ ಸೇರಿಸಲಾಯಿತು –ಪಿಟಿಐ ಚಿತ್ರ

ಚಂಡಮಾರುತದ ಭೀತಿ ಕರಾವಳಿಯಲ್ಲಿ ಕಡಲ್ಕೊರೆತ ತೀವ್ರ

ಪ್ರಜಾವಾಣಿ ವಾರ್ತೆ

ಮಂಗಳೂರು: ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತದಿಂದಾಗಿ ಭಾರಿ ತೆರೆಗಳು ದಡಕ್ಕೆ ಅಪ್ಪಳಿಸುತ್ತಿವೆ. ಹೀಗಾಗಿ ಉಳ್ಳಾಲದಲ್ಲಿ ಕಡಲ್ಕೊರೆತ ತೀವ್ರವಾಗಿದೆ. ಉಚ್ಚಿಲ ಬಟ್ಟಪ್ಪಾಡಿ ಭಾಗದಲ್ಲಿ 67 ಮನೆಗಳು ಅಪಾಯಕ್ಕೆ ಸಿಲುಕಿವೆ. ಸೋಮೇಶ್ವರ ಹಿಂದೂ ಸ್ಮಶಾನದ ತಡೆಗೋಡೆ ಸಮುದ್ರ ಪಾಲಾಗಿದೆ.

ಗಾಳಿ, ಮಳೆ ಹಾಗೂ ಕಡಲ್ಕೊರೆತ ಅಧಿಕವಾದಲ್ಲಿ ಸ್ಥಳೀಯರಿಗೆ ತುರ್ತಾಗಿ ತಂಗಲು ಉಳ್ಳಾಲದಲ್ಲಿ ಮೂರು ಹಾಗೂ ಸೋಮೇಶ್ವರದಲ್ಲಿ ಒಂದು ಕಾಳಜಿ ಕೇಂದ್ರ ತೆರೆಯಲಾಗಿದೆ.

‘ಉಳ್ಳಾಲ, ಸೋಮೇಶ್ವರ ಭಾಗದಲ್ಲಿ ಈಗಾಗಲೇ ಸಹಾಯವಾಣಿ ಆರಂಭಿಸಲಾಗಿದೆ. ಯಾವುದೇ ಪರಿಸ್ಥಿತಿ ಎದುರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಮಂಗಳೂರು ತಹಶೀಲ್ದಾರ್ ಗುರುಪ್ರಸಾದ್ ತಿಳಿಸಿದ್ದಾರೆ.

ಉಡುಪಿ ಜಿಲ್ಲೆಯ ಮರವಂತೆಯಲ್ಲೂ ಕಡಲ್ಕೊರೆತದಿಂದ ಮೂರು ದಿನಗಳಿಂದ ತೊಂದರೆಯಾಗಿದೆ. ಅಲೆಗಳ ಅಬ್ಬರದಿಂದ 100ಕ್ಕೂ ಅಧಿಕ ತೆಂಗಿನ ಮರಗಳು ಉರುಳಿವೆ. ರಸ್ತೆ ಕೊಚ್ಚಿ ಹೋದರೆ ಮೀನುಗಾರರ 25 ಮನೆಗಳಿಗೆ ಅಪಾಯವಾಗುವ ಸಾಧ್ಯತೆ ಇದೆ. ಕಾಪು ತಾಲ್ಲೂಕಿನ ಪಡುಬಿದ್ರಿ, ಹೆಜಮಾಡಿ, ಬಡಾ, ಮೂಳೂರು, ತೆಂಕದಲ್ಲಿ ಅಲೆಗಳ ಅಬ್ಬರ ಹೆಚ್ಚಾಗಿದೆ.

ಮಳೆ: ಗುರುವಾರ ರಾತ್ರಿ ದಕ್ಷಿಣ ಕನ್ನಡ ಜಿಲ್ಲೆಯ ದಿಡುಪೆ, ಚಾರ್ಮಾಡಿ, ಮುಂಡಾಜೆ, ನೇತ್ರಾವತಿ ನದಿ ಪಾತ್ರದ ಪ್ರದೇಶಗಳಲ್ಲಿ ಜಡಿ ಮಳೆಯಾಗಿದೆ. ನದಿ, ತೊರೆಗಳು ತುಂಬಿ ಹರಿಯುತ್ತಿವೆ. ತೋಟಗಳಿಗೆ ನೀರು ನುಗ್ಗಿದ್ದು, ಕೃಷಿಗೆ ಹಾನಿಯಾಗಿದೆ.

ಇನ್ನೊಂದು ಸುದ್ದಿ 8

ರಾಜ್ಯ ಕೋವಿಡ್ ಅಂಕಿ–ಅಂಶ

21,30,267 ▲	ಒಟ್ಟು ಸೋಂಕಿತರು (20,88,488 ನಿನ್ನೆಯ ವಿವರ)
5,98,605 ▲	ಸಕ್ರಿಯ ಪ್ರಕರಣಗಳು
15,10,557 ▲	ಗುಣಮುಖರಾದವರು
21,085 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	41,779 ▲
ಗುಣಮುಖ	35,879 ▲
ಸಾವು	373 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮೇ 31ರವರೆಗೂ ಲಾಕ್‌ಡೌನ್ ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಲಾಕ್‌ಡೌನ್ ವಿಧಿಸಿದ್ದರೂ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಯದ ಕಾರಣ ಮೇ ಅಂತ್ಯದವರೆಗೂ ಲಾಕ್‌ಡೌನ್ ಮುಂದುವರಿಸಲು ಸರ್ಕಾರ ಚಿಂತನೆ ನಡೆಸಿದೆ.

ಮೇ 10ರಿಂದ ಜಾರಿಯಲ್ಲಿರುವ ಲಾಕ್‌ಡೌನ್ ಮೇ 24ರ ಮುಂಜಾನೆಗೆ ಕೊನೆಯಾಗಲಿದೆ. ಇದನ್ನು ಮೇ 31ರವರೆಗೂ ವಿಸ್ತರಿಸಬೇಕು ಎಂಬ ಚರ್ಚೆ ಶುರುವಾಗಿದೆ.

ಏತನ್ಮಧ್ಯೆ, ಹಲವು ಸಚಿವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಲಾಕ್‌ಡೌನ್ ಅನ್ನು ಮುಂದುವರಿಸಲು ಒತ್ತಡ ಹೇರಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಯಡಿಯೂರಪ್ಪ ಅವರು ಮೇ 24ಕ್ಕೆ ಮೂರು ದಿನ ಮೊದಲು ಸಭೆ ಸೇರಿ ಸೂಕ್ತ ನಿರ್ಧಾರ ತೆಗೆದುಕೊಳ್ಳೋಣ ಎಂದು ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು, ಮತ್ತಿತರ ನಗರಗಳಿಂದ ಹಳ್ಳಿಗಳಿಗೆ ಜನ ವಲಸೆ ಹೋಗಿದ್ದಾರೆ. ಅಲ್ಲೂ ಸೋಂಕು ವ್ಯಾಪಿಸುವ ಸಾಧ್ಯತೆ ಇದೆ. ಆದ್ದರಿಂದ, ಲಾಕ್‌ಡೌನ್ ವಿಸ್ತರಿಸಬೇಕು. ಲಾಕ್‌ಡೌನ್ ತೆರವು ಮಾಡಿದರೆ ಮರುದಿನವೇ ಜನರು ಬೀದಿಗೆ ಬಂದು ಮೊದಲಿನಂತೆ ವರ್ತಿಸುತ್ತಾರೆ. ಇದರಿಂದ ಕೋವಿಡ್ ಮತ್ತಷ್ಟು ಉಲ್ಬಣಿಸುತ್ತದೆ ಎಂದು ತಜ್ಞರೂ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಸಚಿವ ಅಶೋಕ ಪ್ರತಿಪಾದನೆ



ಮೇ 24 ರ ಬಳಿಕ ಲಾಕ್‌ಡೌನ್ ವಿಸ್ತರಿಸಬೇಕು ಎಂದು ಕಂದಾಯ ಸಚಿವ ಆರ್.ಅಶೋಕ ಬಲವಾಗಿ ಪ್ರತಿಪಾದಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರ ಮನವೊಲಿಸುವುದಾಗಿ ಅವರು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

‘ಇನ್ನೂ ಕೆಲವು ದಿನ ಲಾಕ್‌ಡೌನ್ ಮುಂದುವರಿಸುವುದರಿಂದ ಕೊರೊನಾ ಹರಡುವಿಕೆಯನ್ನು ನಿಯಂತ್ರಣಕ್ಕೆ ತರಲು ಸಾಧ್ಯ. ಬೆಂಗಳೂರಿನ ಒಬ್ಬ ಸಾಮಾನ್ಯ ಪ್ರಜೆಯಾಗಿ ಈ ಮಾತು ಹೇಳುತ್ತಿದ್ದೇನೆ. ಈಗಿನ ಲಾಕ್‌ಡೌನ್ ಮುಗಿಯುವುದಕ್ಕೆ 3–4 ದಿನ ಮೊದಲು ಮುಖ್ಯಮಂತ್ರಿಯವರು ಸಭೆ ಕರೆಯಲಿದ್ದಾರೆ, ಅಲ್ಲಿ ನನ್ನ ಅಭಿಪ್ರಾಯ ತಿಳಿಸುತ್ತೇನೆ’ ಎಂದು ಹೇಳಿದರು.

ರಾಜೀವ್ ತಾರಾನಾಥ್, ಕಸ್ತೂರಿ ರಂಗನ್‌ಗೆ ‘ಬಸವಶ್ರೀ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠ ಪ್ರದಾನ ಮಾಡುವ ಪ್ರತಿಷ್ಠಿತ ‘ಬಸವಶ್ರೀ’ ಪ್ರಶಸ್ತಿಗೆ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಹಾಗೂ ಬಾಹ್ಯಾಕಾಶ ವಿಜ್ಞಾನಿ ಕೆ.ಕಸ್ತೂರಿ ರಂಗನ್ ಅವರನ್ನು ಆಯ್ಕೆ ಮಾಡಲಾಗಿದೆ.

‘2019ನೇ ಸಾಲಿನ ಪ್ರಶಸ್ತಿಗೆ ರಾಜೀವ್ ತಾರಾನಾಥ್ ಹಾಗೂ 2020ನೇ ಸಾಲಿಗೆ ಕಸ್ತೂರಿ ರಂಗನ್ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ₹ 5 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ಕೊರೊನಾ ಸೋಂಕಿನ ತೀವ್ರತೆ ಕಡಿಮೆಯಾದ ಬಳಿಕ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಶಿವಮೂರ್ತಿ ಮುರುಘಾ ಶರಣರು ಶುಕ್ರವಾರ ಪ್ರಕಟಿಸಿದರು.



ರಾಜೀವ್ ತಾರಾನಾಥ್



ಡಾ.ಕೆ.ಕಸ್ತೂರಿ ರಂಗನ್

‘ಸರೋದ್ ವಾದಕರಲ್ಲಿ ರಾಜೀವ್ ತಾರಾನಾಥ್ ಅವರು ಅಗ್ರಗಣ್ಯರು. ಸಾಂಪ್ರದಾಯಿಕ ಹಿಂದೂಸ್ತಾನಿ ಸಂಗೀತದಲ್ಲಿನ ಆಳ ಹಾಗೂ ಭಾವನಾ ಲೋಕದ ತೀಕ್ಷ್ಣತೆಯನ್ನು ತಮ್ಮ ವಾದನದಲ್ಲಿ ಸಮ್ಮಿಶ್ರಗೊಳಿಸುವ ಸಾಧಕ’ ಎಂದು ಬಣ್ಣಿಸಿದರು.

‘ಕಸ್ತೂರಿ ರಂಗನ್ ಅವರು ಒಂಬತ್ತಕ್ಕೂ ಹೆಚ್ಚು ವರ್ಷ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ನೇತೃತ್ವ ವಹಿಸಿದ್ದರು. ಯೋಜನಾ ಆಯೋಗದ ಸದಸ್ಯರಾಗಿದ್ದವರು. ಇವರ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತಿ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕೋವಿಶೀಲ್ಡ್: 12 ವಾರದ ಬಳಿಕ ಎರಡನೇ ಡೋಸ್

ಬೆಂಗಳೂರು: ರಾಜ್ಯದಲ್ಲಿ ‘ಕೋವಿಶೀಲ್ಡ್’ ಲಸಿಕೆಯ ಮೊದಲ ಮತ್ತು ಎರಡನೇ ಡೋಸ್ ನಡುವಿನ ಅಂತರವನ್ನು 12ರಿಂದ 16 ವಾರಗಳಿಗೆ ವಿಸ್ತರಿಸಲಾಗಿದೆ.



ಮೊದಲ ಡೋಸ್ ಪಡೆದವರಿಗೆ 45 ದಿನದ ಬಳಿಕ ಎರಡನೇ ಡೋಸ್ ಪಡೆಯಲು ಬನ್ನಿ ಎಂದು ತಿಳಿಸಲಾಗಿತ್ತು. ಈಗ ಈ ಅವಧಿಯಲ್ಲಿ ಬರುವುದು ಬೇಡ, 12 ವಾರಗಳ ಬಳಿಕವಷ್ಟೇ ಲಸಿಕಾ ಕೇಂದ್ರಗಳಿಗೆ ಬನ್ನಿ ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಸದ್ಯ 6 ರಿಂದ 8 ವಾರಗಳ ಅಂತರದಲ್ಲಿ ಎರಡನೇ ಡೋಸ್ ನೀಡಲಾಗುತ್ತಿತ್ತು. ‘ಕೋವ್ಯಾಕ್ಸಿನ್’ ಲಸಿಕೆಯನ್ನು 4ರಿಂದ 6 ವಾರಗಳ ಅಂತರದಲ್ಲಿ ಒದಗಿಸಲಾಗುತ್ತಿದೆ.

9ನೇ ಪುಟ ನೋಡಿ

ವೈದ್ಯಕೀಯ ಪರಿಕರಗಳ ಮೂಲ ಕೇಳಿದ ಪೊಲೀಸರು

ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಪೀಡಿತರಿಗೆ ನೆರವು ನೀಡುವ ಕಾರ್ಯದಲ್ಲಿ ತೊಡಗಿರುವ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಘಟಕದ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಹಾಗೂ ಕಾರ್ಯಕರ್ತರನ್ನು ದೆಹಲಿ ಹೈಕೋರ್ಟ್ ನಿರ್ದೇಶನದ ಮೇರೆಗೆ ಪೊಲೀಸರು ಶುಕ್ರವಾರ ವಿಚಾರಣೆಗೆ ಒಳಪಡಿಸಿದ್ದಾರೆ.

‘ಮಾನವೀಯ ನೆರವಿನ ನೆಪದಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದು, ಆಮ್ಲಜನಕ ಸಿಲಿಂಡರ್‌ಗಳು ಮತ್ತು ಚಿಕಿತ್ಸಾ ಪರಿಕರಗಳನ್ನು ಕೋವಿಡ್ ಪೀಡಿತರಿಗೆ ನೀಡಲಾಗುತ್ತಿದೆ. ಜನಸಾಮಾನ್ಯರಿಗೆ ನೇರವಾಗಿ ದೊರೆಯದ ಈ ಪರಿಕರಗಳು ನಿಮಗೆ ಎಲ್ಲಿಂದ ಸಿಗುತ್ತಿವೆ’ ಎಂದು ಪೊಲೀಸರು ವಿಚಾರಣೆ ವೇಳೆ ಪ್ರಶ್ನಿಸಿದ್ದಾರೆ.

‘ರಾಜಕಾರಣಿಗಳು ಕೋವಿಡ್ ಪೀಡಿತರಿಗೆ ಔಷಧಿ ಹಾಗೂ ಇತರ ವಸ್ತುಗಳನ್ನು ಅಕ್ರಮವಾಗಿ ವಿತರಿಸುವ ಕಾರ್ಯದಲ್ಲಿ ತೊಡಗಿದ್ದಾರೆ’ ಎಂದು ಆರೋಪಿಸಿ ಡಾ.ದೀಪಕ್ ಸಿಂಗ್ ಎಂಬುವವರು ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಕಾಂಗ್ರೆಸ್ ಮುಖಂಡರಾದ ಪ್ರಿಯಾಂಕಾ ಗಾಂಧಿ, ಶ್ರೀನಿವಾಸ್ ಅವರ ಹೆಸರನ್ನು ಪ್ರಸ್ತಾಪಿಸಿದ್ದರು.

ವಿಚಾರಣೆ ನಡೆಸಿದ್ದ ಹೈಕೋರ್ಟ್, ಈ ಸಂಬಂಧ ವರದಿ ನೀಡುವಂತೆ ಪೊಲೀಸರಿಗೆ ಸೂಚಿಸಿತ್ತು.

ಆಮ್ ಆದ್ಮಿ ಪಕ್ಷ (ಎಎಪಿ)ದ ಶಾಸಕ ದಿಲೀಪ್ ಪಾಂಡೆ, ಬಿಜೆಪಿಯ ದೆಹಲಿ ಘಟಕದ ವಕ್ತಾರ ಹರೀಶ್ ಖುರಾನಾ ಅವರನ್ನೂ ಈ ಮೊದಲು ವಿಚಾರಣೆಗೆ ಒಳಪಡಿಸಿದ್ದ ಪೊಲೀಸರು, ವೈದ್ಯಕೀಯ ಪರಿಕರಗಳ ಮೂಲವನ್ನು ಪ್ರಶ್ನಿಸಿದ್ದರು.

ತಮ್ಮ ಪತ್ನಿಯ ಚಿಕಿತ್ಸೆಗಾಗಿ ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ಹಾಗೂ ದೆಹಲಿಯ ಮಾಜಿ ಶಾಸಕ ಮುಖೇಶ್ ಶರ್ಮಾ ಅವರ ನೆರವಿನಿಂದ ರೆಮ್‌ಡಿಸಿವಿರ್ ಚುಚ್ಚುಮದ್ದು ಪಡೆದಿದ್ದ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ)ದ ಮಾಜಿ ಸಂಸದ ಶಾಹಿದ್ ಸಿದ್ದಿಕ್ ಅವರೂ ಪೊಲೀಸರ ವಿಚಾರಣೆ ಎದುರಿಸಿದ್ದಾರೆ.

‘ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ಅಪರಾಧ ದಳದ ಪೊಲೀಸ್ ಸಿಬ್ಬಂದಿ ನನ್ನಿಂದ ಕೆಲವು ವಿವರ ಪಡೆದಿದ್ದಾರೆ. ಸಾಮಾಜಿಕ ಕಾರ್ಯ ಮಾಡುತ್ತಿರುವ ನಮಗೆ ಭಯವಿಲ್ಲ. ನಮ್ಮ ಮಾನವೀಯ ಕಾರ್ಯ ನಿಲ್ಲುವುದೂ ಇಲ್ಲ’ ಎಂದು ಕನ್ನಡಿಗ, ಭದ್ರಾವತಿ ಮೂಲದ ಬಿ.ವಿ. ಶ್ರೀನಿವಾಸ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪೊಲೀಸರ ಮೂಲಕ ಬೆದರಿಕೆ ಒಡ್ಡಿ, ಮಾನವೀಯ ಸೇವೆಯಲ್ಲಿ ತೊಡಗಿರುವ ಕಾಂಗ್ರೆಸ್‌ನ ಯುವ ಕಾರ್ಯಕರ್ತರನ್ನು ತಡೆಯಲಾಗದು ಎಂದು ಪಕ್ಷದ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಶಾಸಕರ ನಿಧಿಯ ₹ 100 ಕೋಟಿ ಲಸಿಕೆಗೆ: ಕಾಂಗ್ರೆಸ್ ನಿರ್ಧಾರ

ಬೆಂಗಳೂರು: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ತಲಾ ₹ 1 ಕೋಟಿ ಸೇರಿದಂತೆ ₹ 100 ಕೋಟಿಯನ್ನು ರಾಜ್ಯದ ಜನರಿಗೆ ಕೋವಿಡ್ ಲಸಿಕೆ ನೀಡುವ ಯೋಜನೆಗೆ ವಿನಿಯೋಗಿಸಲು ಕಾಂಗ್ರೆಸ್ ನಿರ್ಧರಿಸಿದೆ.

ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘₹ 90ಕೋಟಿಯನ್ನು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಬಿಟ್ಟು ಕೊಡಲಾಗುವುದು. ₹ 10 ಕೋಟಿ ದೇಣಿಗೆಯನ್ನು ಕೆಪಿಸಿಸಿ ನೀಡಲಿದೆ’ ಎಂದರು.

9 ನೇ ಪುಟ ನೋಡಿ

ಪಿಎಂ ಕಿಸಾನ್ ಯೋಜನೆ ರಾಜ್ಯಕ್ಕೆ ₹985.61 ಕೋಟಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ರಾಜ್ಯದ 53.36 ಲಕ್ಷ ರೈತರ ಖಾತೆಗಳಿಗೆ ಒಟ್ಟು ₹ 985.61 ಕೋಟಿ ಬಿಡುಗಡೆ ಆಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಕಿಸಾನ್ ಸಮ್ಮಾನ್ ಯೋಜನೆಯಡಿಯ 8 ನೇ ಕಂತಿನ ಹಣವನ್ನು ಶುಕ್ರವಾರ ಬಿಡುಗಡೆ ಮಾಡಿದರು. ಈ ಯೋಜನೆಯಡಿ ಕೇಂದ್ರ ಸರ್ಕಾರ ವರ್ಷಕ್ಕೆ ₹6 ಸಾವಿರ ಮೊತ್ತವನ್ನು ರೈತರ ಖಾತೆಗಳಿಗೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ಜಮೆ ಮಾಡುತ್ತದೆ.

2019 ರಿಂದ 2021ರ ಮಾರ್ಚ್‌ವರೆಗೆ ರಾಜ್ಯದ 55.06 ಲಕ್ಷ ರೈತ ಕುಟುಂಬಗಳಿಗೆ ಕೇಂದ್ರ ಸರ್ಕಾರ ಒಟ್ಟು ₹6936. 98 ಕೋಟಿ ಜಮೆ ಮಾಡಿದೆ.

ಕೇಂದ್ರ ಸರ್ಕಾರ ‘ಕಿಸಾನ್ ಸಮ್ಮಾನ್’ ಯೋಜನೆಯಡಿ ಒಬ್ಬ ರೈತರಿಗೆ ₹6 ಸಾವಿರ ನೀಡುವ ಜತೆಗೆ ರಾಜ್ಯ ಸರ್ಕಾರವೂ ವರ್ಷಕ್ಕೆ ಪ್ರತಿ ರೈತನಿಗೆ ತಲಾ ₹ 4 ಸಾವಿರ ನೀಡುತ್ತಿದೆ. ಹೀಗಾಗಿ, ಕರ್ನಾಟಕದ ರೈತರಿಗೆ ₹10 ಸಾವಿರ ಸಿಗುತ್ತಿದೆ.

ಇಲ್ಲಿಯವರೆಗೆ ₹2,891.70 ಕೋಟಿಯನ್ನು ರೈತರ ಖಾತೆ ನೇರವಾಗಿ ವರ್ಗಾವಣೆ ಮಾಡಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ಒಕ್ಕಲಿಗರ ಸಂಘದ ಆಸ್ಪತ್ರೆ ಬಳಸಿಕೊಳ್ಳಲು ಮನವಿ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘವು ಶ್ರೀಗಂಧ ಕಾವಲಿನಲ್ಲಿ ನಿರ್ಮಾಣ ಮಾಡಿರುವ 300 ಬೆಡ್‌ಗಳ ಆಸ್ಪತ್ರೆಯನ್ನು ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಬಳಸಿಕೊಳ್ಳಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಮಾಜಿ ಕಾರ್ಯಾಧ್ಯಕ್ಷ ಎಂ.ಎ. ಆನಂದ್ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಉಪ ಮುಖ್ಯಮಂತ್ರಿ, ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಪತ್ರ ಬರೆದಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘ ಶ್ರೀಗಂಧಕಾವಲಿನಲ್ಲಿ 2015-16ರಲ್ಲಿ 300 ಬೆಡ್‌ಗಳ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಮಾಡಿದೆ. ಆದರೆ, ಕಾರಣಾಂತರಗಳಿಂದ ಈ ಆಸ್ಪತ್ರೆ ಕಾರ್ಯಾರಂಭ ಮಾಡಿಲ್ಲ. ಈಗ ಕೋವಿಡ್ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಗೆ ಈ ಆಸ್ಪತ್ರೆಯನ್ನು ಬಳಕೆ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ.

ರಾಜ್ಯ ಮತ್ತು ಬೆಂಗಳೂರಿನಲ್ಲಿ ಕೊರೊನಾ ತೀವ್ರಗತಿಯಲ್ಲಿ ಹಬ್ಬುತ್ತಿದ್ದು, ಆಸ್ಪತ್ರೆಗಳ ಕೊರತೆ ಉಂಟಾಗಿದೆ. ಸುಮಾರು 24 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿರುವ ಈ ಆಸ್ಪತ್ರೆಯಲ್ಲಿ ಶೇ80ರಷ್ಟು ಮೂಲಸೌಲಭ್ಯಗಳಿದ್ದು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಬಹುದು. ವೆಂಟಿಲೇಟರ್, ಆಕ್ಸಿಜನ್, ಐಸಿಯು ಮೊದಲಾದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲೂ ಸಹ ವ್ಯವಸ್ಥೆಯಿದ್ದು, ಕೋವಿಡ್ ರೋಗಿಗಳಿಗೆ ಸಹಾಯವಾಗುತ್ತದೆ ಎಂದಿದ್ದಾರೆ.

ಕೋವಿಡ್ ಎರಡನೇ ಅಲೆ: ಎಲ್ಲ ತರಗತಿಗಳಿಗೆ ಆನ್‌ಲೈನ್ ಮೂಲಕವೇ ಬೋಧನೆ

ಖಾಸಗಿ ಶಾಲೆಗಳು ಜೂನ್‌ನಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಅಧಿಕವಾಗಿದ್ದು, ಮೂರನೇ ಅಲೆ ಅಕ್ಟೋಬರ್ ವೇಳೆಗೆ ಬರುವ ಸಾಧ್ಯತೆ ಇರುವುದರಿಂದ ಖಾಸಗಿ ಶಾಲೆಗಳು 2021–22 ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಜೂನ್– ಜುಲೈನಿಂದ ಆರಂಭಿಸಲು ನಿರ್ಧರಿಸಿವೆ.



ಎಲ್ಲ ತರಗತಿಗಳು ಆನ್‌ಲೈನ್ ಮೂಲಕವೇ ಆರಂಭವಾಗಲಿವೆ.

ಸಿಬಿಎಸ್‌ಇ ಮತ್ತು ಐಸಿಎಸ್‌ಇ ಮಾನ್ಯತೆ ಹೊಂದಿರುವ ಖಾಸಗಿ ಶಾಲೆಗಳು ಈ ಸಂಬಂಧ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ವಿಸ್ತೃತ ವೇಳಾ ಪಟ್ಟಿಯನ್ನು ಕಳುಹಿಸಿದ್ದು, ಜೂನ್ ಮೊದಲ ವಾರದಲ್ಲಿ ತರಗತಿಗಳು ಆರಂಭಗೊಳ್ಳಲಿವೆ. ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ಶಾಲೆಗಳ ಹೊಸ ಶೈಕ್ಷಣಿಕ ವರ್ಷ ಜುಲೈ 15 ರಿಂದ ಆರಂಭವಾಗಲಿದೆ.

ಒಂದನೇ ಮತ್ತು ಮೇಲ್ಪಟ್ಟ ತರಗತಿಗಳಿಗೆ ಜೂನ್ 7 ರಿಂದ ಆನ್‌ಲೈನ್ ತರಗತಿಗಳು ಆರಂಭವಾಗಲಿದೆ.

ಶಾಲೆಗಳು ಮೇಲ್ ಮೂಲಕ ಪೋಷಕರಿಗೆ ಸಂದೇಶವನ್ನು ಕಳುಹಿಸಿವೆ. ಮೇ 30 ರಂದು ಪೋಷಕರ ವರ್ಚುವಲ್ ಸಭೆಯನ್ನೂ ಕರೆಯಲಾಗಿದೆ ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಪ್ರತಿನಿಧಿಯೊಬ್ಬರು ಹೇಳಿದರು.

‘ಈ ಸಾಂಕ್ರಾಮಿಕ ಸಂದರ್ಭದಲ್ಲಿ ಆನ್‌ಲೈನ್ ಕಲಿಕೆಯೇ ಅತ್ಯುತ್ತಮ ಮಾರ್ಗ. ಇದಕ್ಕಾಗಿ ಹೈಬ್ರಿಡ್ ಕಲಿಕಾ ವ್ಯವಸ್ಥೆಯ ಮೇಲೆ ಹೂಡಿಕೆ ಮಾಡಲಿದ್ದೇವೆ. ಬೋಧಕ ಸಿಬ್ಬಂದಿಗೆ ಸೋಮವಾರದಿಂದ ಮತ್ತು ವಿದ್ಯಾರ್ಥಿಗಳಿಗೆ ಅತಿಶೀಘ್ರವೇ ಶೈಕ್ಷಣಿಕ ವರ್ಷ ಆರಂಭಿಸಲಾಗುವುದು. ಕ್ಯಾಂಪಸ್ ಕಲಿಕೆಗಿಂತ ಆನ್‌ಲೈನ್ ಕಲಿಕೆಗೆ ಉತ್ತಮ ರೇಟಿಂಗ್ ಸಿಕ್ಕಿತ್ತು’ ಎಂದು ಇನ್‌ವೆಂಚರ್ ಅಕಾಡೆಮಿಯ ಸಿಇಒ ನೂರಾನಿ ಫಝುಲ್ ಅವರು ಹೇಳಿದರು.

ಅಂಗವಿಕಲ, ಅಂಧ ನೌಕರರಿಗೆ ವಿನಾಯಿತಿ

ಬೆಂಗಳೂರು: ಎಲ್ಲಾ ಜಿಲ್ಲಾ ನ್ಯಾಯಾಲಯಗಳಲ್ಲಿ ಇರುವ ಅಂಗವಿಕಲ ಮತ್ತು ಅಂಧ ನೌಕರರು ಲಾಕ್‌ಡೌನ್ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗುವುದಕ್ಕೆ ವಿನಾಯಿತಿ ನೀಡಲಾಗಿದೆ.

ಲಾಕ್‌ಡೌನ್ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಅಂಗವಿಕಲರಿಗೆ ಮತ್ತು ಅಂಧರಿಗೆ ಕಷ್ಟವಾಗಲಿದೆ ಎಂಬ ಮನವಿ ಅಧರಿಸಿ ಮುಖ್ಯ ನ್ಯಾಯಮೂರ್ತಿ ಎಸ್.ಎಸ್. ಓಕಾ ಅವರ ಸೂಚನೆ ಮೇರೆಗೆ ಹೈಕೋರ್ಟ್ ರಿಜಿಸ್ಟ್ರಾರ್ ಈ ಆದೇಶ ಹೊರಡಿಸಿದ್ದಾರೆ.



ಮರಳಿ ಊರಿಗೆ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಲು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶುಕ್ರವಾರ ಕಾಯುತ್ತಿದ್ದರು – ಪ್ರಜಾವಾಣಿ ಚಿತ್ರ

‘ಕೋವಿಡ್: ₹ 25 ಸಾವಿರ ಪರಿಹಾರ ಒದಗಿಸಿ’

ಬೆಂಗಳೂರು: ‘ಕೊರೊನಾ ಸೋಂಕಿತರಾದ ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ₹ 25 ಸಾವಿರ ಪರಿಹಾರ ನೀಡಬೇಕು. ವಿಶೇಷ ಪ್ರೋತ್ಸಾಹ ಧನ ಮತ್ತು ಗೌರವಧನವನ್ನು ಕೂಡಲೇ ಒದಗಿಸಬೇಕು’ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿದೆ.

ಈ ಸಂಬಂಧ ಸಂಘವು ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ‘ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡಿರುವ ಈ ಸಂದರ್ಭದಲ್ಲಿ ರಾಜ್ಯದಾದ್ಯಂತ ಸಾವಿರಾರು ಆಶಾ ಕಾರ್ಯಕರ್ತೆಯರು ತಮ್ಮ ಜೀವವನ್ನೇ ಪಣಕಿಟ್ಟು ಕಾರ್ಯನಿರ್ವಹಿಸುತ್ತಿದ್ದಾರೆ. ಮುಖಗವಸು, ಸೋಂಕು ನಿವಾರಕ ದ್ರಾವಣ, ಕೈಗವಸು ಸೇರಿದಂತೆ ವಿವಿಧ ಸುರಕ್ಷಾ ಸಾಧನಗಳನ್ನು ಒದಗಿಸದೆಯೇ ಕೋವಿಡ್ ನಿರ್ವಹಣೆಗೆ ಸೂಚಿಸಲಾಗುತ್ತಿದೆ. ಪರಿಣಾಮ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಸಾವಿರಕ್ಕೂ ಅಧಿಕ ಆಶಾ ಕಾರ್ಯಕರ್ತೆಯರು ಸೋಂಕಿತರಾಗಿದ್ದಾರೆ’ ಎಂದು ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ತಿಳಿಸಿದ್ದಾರೆ.

‘ಕಳೆದ 15 ದಿನಗಳಲ್ಲಿ 5 ಆಶಾ ಕಾರ್ಯಕರ್ತೆಯರು ಮೃತಪಟ್ಟಿದ್ದಾರೆ. ಸೋಂಕಿತರಾದವರು ಹಾಗೂ ಸೋಂಕಿನಿಂದ ಸಾವಿಗೀಡಾದವರಿಗೆ ಪರಿಹಾರ ಒದಗಿಸಬೇಕು. ಅಗತ್ಯವಿರುವಷ್ಟು ಸುರಕ್ಷಣಾ ಸಾಮಾಗ್ರಿಗಳನ್ನು ಒದಗಿಸಬೇಕು. ಕೋವಿಡ್ ಯೋಧರಿಗೆ ನೀಡುವ ವಿಶೇಷ ಗೌರವಧನ ₹ 5 ಸಾವಿರವನ್ನು ಆಶಾ ಕಾರ್ಯಕರ್ತೆಯರಿಗೆ ಕೂಡ ನೀಡಬೇಕು. ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಗೌರವಧನ ಇನ್ನೂ ಬಿಡುಗಡೆಯಾಗಿಲ್ಲ. ಈ ನಿಟ್ಟಿನಲ್ಲಿ ಕ್ರಮ ಕೈಗೊಂಡು, ಗೌರವಧನವನ್ನು ಕೂಡಲೇ ಒದಗಿಸಬೇಕು’ ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಬಸವ ಜಯಂತಿ ಆಚರಣೆ

ಮಾಗಡಿ: ‘ಬಸವಾದಿ ಶರಣರು ಕಂಡ ಕಲ್ಯಾಣ ಕರ್ನಾಟಕದ ಕನಸು ನನಸಾಗಬೇಕಿದೆ’ ಎಂದು ಗುಮ್ಮಸಂದ್ರ ಮಠದ ಮಠಾಧ್ಯಕ್ಷ ಚಂದ್ರಶೇಖರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಗುಮ್ಮಸಂದ್ರ ಮಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸುದ್ದಿ 2 ನಿಮಿಷ

‘ಲಸಿಕೆ ಹಂಚಿಕೆಯಲ್ಲಿ ತಾರತಮ್ಯ: ಸಿ.ಎಂ ಕಚೇರಿ ಎದುರು ಧರಣಿ’

ಬೆಂಗಳೂರು: ‘ಲಸಿಕೆ ಹಂಚಿಕೆಯಲ್ಲೂ ರಾಜ್ಯ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದ್ದು, ಈ ಧೋರಣೆ ಖಂಡಿಸಿ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾ ಎದುರು ಸೋಮವಾರ ಅಥವಾ ಮಂಗಳವಾರ ಧರಣಿ ನಡೆಸುತ್ತೇನೆ’ ಎಂದು ಶಾಸಕ ಆರ್.ಮಂಜುನಾಥ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ’3–4 ಲಕ್ಷ ಜನಸಂಖ್ಯೆ ಇರುವ ಕ್ಷೇತ್ರಗಳಿಗೆ ನಿತ್ಯ 3 ಸಾವಿರದಿಂದ 4 ಸಾವಿರ ಡೋಸ್ ಹಂಚಿಕೆ ಮಾಡಲಾಗುತ್ತಿದೆ. ದಾಸರಹಳ್ಳಿ ಕ್ಷೇತ್ರದಲ್ಲಿ 8 ಲಕ್ಷ ಜನರು ಇದ್ದು, 700–800 ಡೋಸ್ ಮಾತ್ರ ನೀಡಲಾಗುತ್ತಿದೆ‘ ಎಂದು ದೂರಿದರು.



‘ಈ ಹಿಂದೆ ಅನುದಾನ ಹಂಚಿಕೆಯಲ್ಲೂ ತಾರತಮ್ಯ ಮಾಡಿದ್ದರು. ಆಹಾರ ಕಿಟ್ ವಿತರಣೆಯಲ್ಲಿ ಸಹ ರಾಜಕಾರಣ ಮಾಡಿದ್ದರು. 110 ಹಳ್ಳಿಗಳ ಅಭಿವೃದ್ಧಿಗೆ ₹1000 ಕೋಟಿ ಮೀಸಲಿಡಲಾಗಿದ್ದು, ನನ್ನ ಕ್ಷೇತ್ರಕ್ಕೆ ₹25 ಕೋಟಿ ಮಾತ್ರ ಹಂಚಿಕೆ ಮಾಡಲಾಗಿದೆ. ನನ್ನ ಕ್ಷೇತ್ರ ಪಾಕಿಸ್ತಾನದಲ್ಲಿ ಇದೆಯಾ’ ಎಂದು ಅವರು ಪ್ರಶ್ನಿಸಿದರು.

’ಕೋವಿಡ್ ರೋಗಿಗಳ ಸಂಖ್ಯೆ ಕಡಿಮೆ ತೋರಿಸಲು ಪರೀಕ್ಷೆಗಳ ಸಂಖ್ಯೆಯನ್ನು ಸರ್ಕಾರ ಕಡಿಮೆ ಮಾಡುತ್ತಿದೆ. ಆ್ಯಂಟಿಜೆನ್ ಪರೀಕ್ಷೆಯನ್ನೇ ನಡೆಸುತ್ತಿಲ್ಲ. ಆರ್‌ಟಿಪಿಸಿಆರ್ ಪರೀಕ್ಷಾ ವರದಿ ಬರಲು 3–4 ದಿನಗಳು ಬೇಕು. ಇದರಿಂದಾಗಿ, ಸಕಾಲಕ್ಕೆ ಚಿಕಿತ್ಸೆ ಸಿಗದೆ ರೋಗಿಗಳು ಸಾಯುತ್ತಿದ್ದಾರೆ‘ ಎಂದರು.

ಈ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ’ಕೋವಿಡ್ ರೋಗಿಗಳಿಗೆ ನೆರವು ನೀಡುವ ಹಾಗೂ ಲಸಿಕೆ ವಿಚಾರದಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಶಾಸಕರು ಆಧಾರರಹಿತ ಆರೋಪ ಮಾಡಿದ್ದಾರೆ‘ ಎಂದು ಸ್ಪಷ್ಟಪಡಿಸಿದರು.

ಸದಾನಂದಗೌಡ, ಸಿ.ಟಿ.ರವಿ ಹೇಳಿಕೆಗೆ ಸಿಪಿಐ ಖಂಡನೆ

ಬೆಂಗಳೂರು: ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ನೀಡುತ್ತಿರುವ ಆದೇಶಗಳಿಗೆ ಸಂಬಂಧಿಸಿ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೀಡಿರುವ ಹೇಳಿಕೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ ಕರ್ನಾಟಕ ರಾಜ್ಯ ಮಂಡಳಿಯು ಖಂಡಿಸಿದೆ.

‘ಕಂಪನಿಗಳು ಲಸಿಕೆ ತಯಾರಿಸದಿದ್ದರೆ ನಾವು ನೇಣು ಹಾಕಿಕೊಳ್ಳಲು ಆಗುತ್ತದೆಯೇ’ ಎಂದು ಸದಾನಂದಗೌಡ ಪ್ರಶ್ನಿಸಿದ್ದರು. ‘ನ್ಯಾಯಾಧೀಶರೇನು ಸರ್ವಜ್ಞರಲ್ಲ’ ಎಂದು ಸಿ.ಟಿ. ರವಿ ಹೇಳಿದ್ದರು.

‘ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ವಿಫಲವಾಗಿವೆ. ಸರ್ಕಾರ ನಡೆಸುವ ಬಹಳಷ್ಟು ನಾಯಕರು ಬೇಜವಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಈ ವೇಳೆ ನ್ಯಾಯಾಂಗ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲ’ ಎಂದು ಮಂಡಳಿಯ ಕಾರ್ಯದರ್ಶಿ ಸಾಥಿ ಸುಂದರೇಶ್ ತಿಳಿಸಿದ್ದಾರೆ.

‘ಸಿ.ಟಿ. ರವಿ ಅವರ ಹೇಳಿಕೆ ಅಹಂಕಾರದ ಪರಮಾವಧಿ. ಅದೇ ರೀತಿ, ಸದಾನಂದಗೌಡ ಅವರು ಬೇಜವಾಬ್ದಾರಿಯ ಹೇಳಿಕೆ ನೀಡಿದ್ದಾರೆ. ಯಾವುದೇ ಸಂವೇದನೆ ಇಲ್ಲದವರು ಬಾಯಿಮುಚ್ಚಿ ಕುಳಿತರೆ ಒಳ್ಳೆಯದು. ಜನರಿಗೆ ತಮ್ಮ ಕೆಲಸ ಮಾಡಿಸಿಕೊಳ್ಳುವುದು ಗೊತ್ತಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.



ಲಾಕ್‌ಡೌನ್ ಕಾರಣ ಬಿಕೋ ಎನ್ನುತ್ತಿರುವ ನಗರದ ರಾಜಭವನ ಬಳಿಯ ರಸ್ತೆ ಬದಿ ಅರಳಿ ನಿಂತ ಗುಲ್‌ಮೊಹರ್ – ಪ್ರಜಾವಾಣಿ ಚಿತ್ರ

ಟ್ವೀಟ್‌ಗೆ ಸೀಮಿತರಾದ ಸಿದ್ದರಾಮಯ್ಯ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ ವಿರುದ್ಧ ಪ್ರತಿದಿನ ಟೀಕೆ ಮಾಡುತ್ತಿರುವ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜನರ ಮಧ್ಯೆ ಹೋಗಿ, ಕಷ್ಟ– ಸುಖ ಆಲಿಸುತ್ತಿದ್ದಾರೆಯೇ? ನಾವು ಜನರ ಮಧ್ಯೆ ಓಡಾಡಿ 24 ಗಂಟೆ ಕೆಲಸ ಮಾಡುತ್ತಿದ್ದೇವೆ. ಅವರು ಮನೆಯಲ್ಲಿ ಕುಳಿತು ಟ್ವೀಟ್ ಮಾಡುವುದಕ್ಕೆ ಸೀಮಿತರಾಗಿದ್ದಾರೆ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

‘ಮೋದಿ ಎಲ್ಲಿದ್ದು ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ಜನರಿಗೆ ಗೊತ್ತು. ಸಿದ್ದರಾಮಯ್ಯ ಎಲ್ಲಿದ್ದಾರೆ ಎಂದರೆ ಟ್ವೀಟರ್‌ನಲ್ಲಿದ್ದಾರೆ ಎಂಬುದೂ ಜನರಿಗೆ ಗೊತ್ತಿದೆ. ಆದ್ದರಿಂದ, ವೃಥಾ ರಾಜಕೀಯ ಮಾಡುವುದನ್ನು ಬಿಟ್ಟು ಸರ್ಕಾರಕ್ಕೆ ಉಪಯುಕ್ತ ಸಲಹೆಗಳನ್ನು ನೀಡಲಿ’ ಎಂದು ತಿಳಿಸಿದರು.

ರಾಜಾರಾಮ್‌ಗೆ ನುಡಿನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ನಿಧನರಾದ ಹಿರಿಯ ಕಲಾವಿದ ಆರ್.ಎಸ್. ರಾಜಾರಾಮ್ ಅವರ ಬಹುಮುಖ ವ್ಯಕ್ತಿತ್ವವನ್ನು ಸ್ಮರಿಸುವ ಮೂಲಕ ಒಡನಾಡಿಗಳು ಮತ್ತು ರಂಗಭೂಮಿ ಹಾಗೂ ಸಿನಿಮಾ ರಂಗದ ಗಣ್ಯರು ಅವರಿಗೆ ನುಡಿನಮನ ಸಲ್ಲಿಸಿದರು.

ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರವು ಆನ್‌ಲೈನ್ ವೇದಿಕೆಯಲ್ಲಿ ಆಯೋಜಿಸಿದ ನುಡಿನಮನ ಸಭೆಯಲ್ಲಿ ಕಲಾ ಪ್ರಪಂಚಕ್ಕೆ ರಾಜಾರಾಮ್ ಅವರು ನೀಡಿದ ಕೊಡುಗೆಯ ಬಗ್ಗೆ ಮೆಚ್ಚುಗೆಯ ಮಾತುಗಳು ವ್ಯಕ್ತವಾದವು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಮಾತನಾಡಿ, ‘ಹಿರಿಯರಾದ ರಾಜಾರಾಮ್ ಅವರನ್ನು ಏಕವಚನದಲ್ಲಿ ಮಾತನಾಡಿಸಿ, ತಮಾಷೆ ಮಾಡುವ ಸಲುಗೆ ನನ್ನಲ್ಲಿತ್ತು. ಅವರ ಸಾವಿನ ಸುದ್ದಿ ಕೇಳಿ ಗರ ಬಡಿದಂತಾಗಿತ್ತು’ ಎಂದರು.

ಹಿರಿಯ ರಂಗಕರ್ಮಿ ಚಂದ್ರಕುಮಾರ್ ಸಿಂಗ್, ‘ರಾಜಾರಾಮ್ ಅವರು ಸಾಂಸ್ಕೃತಿಕ ಕ್ಷೇತ್ರದ ಯಾವುದೇ ರಾಜಕೀಯವನ್ನು ಮೈಗಂಟಿಸಿಕೊಳ್ಳಲಿಲ್ಲ. ಅರ್ಥಪೂರ್ಣ ಕಲಾವಿದನ ಬದುಕನ್ನು ಅವರು ಬದುಕಿದರು’ ಎಂದು ಹೇಳಿದರು.

ಹಿರಿಯ ರಾಜಕಾರಣಿ ಪಿ.ಜಿ. ಆರ್. ಸಿಂಧ್ಯ, ರಂಗಕರ್ಮಿ ಬಿ.ವಿ. ರಾಜಾರಾಮ್, ಕಲಾವಿದ ಮಂಡ್ಯ ರಮೇಶ್, ಹಿರಿಯ ರಂಗಕರ್ಮಿ ಎಲ್. ಕೃಷ್ಣಪ್ಪ, ಎಲ್.ಎನ್. ಮುಕುಂದರಾಜ್, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಸಿ.ಕೆ. ಗುಂಡಣ್ಣ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.


ಸಂಕ್ಷಿಪ್ತ ಸುದ್ದಿ

ಅಸ್ಪೃಶ್ಯತೆ: ವರದಿ ಕೇಳಿದ ಆಯೋಗ

ಬೆಂಗಳೂರು: ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕಿನ ಕುಂದ್ರಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಕಾಲೊನಿ ನಿವಾಸಿಗಳಿಗೆ ಕೂದಲು ಕತ್ತರಿಸಲು ನಿರಾಕರಿಸಿದ ಘಟನೆ ಬಗ್ಗೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಿಂದ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗ ವರದಿ ಕೇಳಿದೆ.

ಈ ಕುರಿತು 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾದ ಬಳಿಕ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆದು ತನಿಖೆ ನಡೆಸಿ ವರದಿ ನೀಡುವಂತೆ ಸೂಚಿಸಲಾಗಿದೆ. ವರದಿ ಬಂದ ಬಳಿಕ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಲಾಗುವುದು' ಎಂದು ಆಯೋಗದ ಸದಸ್ಯ ಎಚ್. ವೆಂಕಟೇಶ್ ದೊಡ್ಡೇರಿ ತಿಳಿಸಿದ್ದಾರೆ.

ಮದ್ಯ ಎರಚಿ ಹಲ್ಲೆ; ನಟಿ ಸಂಜನಾ ವಿರುದ್ಧ ಪ್ರಕರಣ



ಬೆಂಗಳೂರು: ನಿರ್ಮಾಪಕಿ ವಂದನಾ ಜೈನ್ ಮೇಲೆ ಮದ್ಯ ಎರಚಿ ಹಲ್ಲೆ ಮಾಡಿದ್ದ ಆರೋಪದಡಿ ನಟಿ ಸಂಜನಾ ಗರ್ಲಾನಿ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'2019ರ ಡಿಸೆಂಬರ್‌ನಲ್ಲಿ ನಡೆದಿದ್ದ ಘಟನೆ ಸಂಬಂಧ ವಂದನಾ ಜೈನ್ ಅವರು ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ನ್ಯಾಯಾಲಯ ನೀಡಿರುವ ಆದೇಶದನ್ವಯ ಸಂಜನಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕ್ಲಬ್‌ವೊಂದರಲ್ಲಿ ಸಂಜನಾ ಹಾಗೂ ವಂದನಾ ಭೇಟಿಯಾಗಿದ್ದರು. ಅವರಿಬ್ಬರ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ಗಲಾಟೆ ನಡೆದಿತ್ತು. ಇದೇ ಸಂದರ್ಭದಲ್ಲೇ ಸಂಜನಾ ಅವರು ವಂದನಾ ಮೇಲೆ ಹಲ್ಲೆ ಮಾಡಿರುವ ಆರೋಪವಿದೆ. ತನಿಖೆಯಿಂದಲೇ ನಿಖರ ಮಾಹಿತಿ ತಿಳಿಯಬೇಕಿದೆ' ಎಂದೂ ತಿಳಿಸಿವೆ.

ಏಪ್ರಿಲ್ ತಿಂಗಳ ವೇತನಕ್ಕಾಗಿ ಅನುದಾನ ಕೋರಿದ ಇಲಾಖೆ

ಸಾರಿಗೆ ನೌಕರರಿಗಿಲ್ಲ ಸಂಬಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸಾರಿಗೆ ನಿಗಮಗಳ ನೌಕರರಿಗೆ ಇದುವರೆಗೂ ಏಪ್ರಿಲ್ ತಿಂಗಳ ಸಂಬಳ ಪಾವತಿಯಾಗಿಲ್ಲ. ಈ ಬಗ್ಗೆ ನೌಕರರು ಪ್ರಶ್ನಿಸಿದರೆ, 'ಸಂಬಳ ನೀಡಲು ಅನುದಾನ ನೀಡುವಂತೆ ರಾಜ್ಯ ಸರ್ಕಾರಕ್ಕೆ ಕೋರಲಾಗಿದೆ' ಎಂದು ಸಾರಿಗೆ ಇಲಾಖೆ ಉತ್ತರಿಸುತ್ತಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಹಾಗೂ ಈಶಾನ್ಯ ಸಾರಿಗೆ ನಿಗಮಗಳ ಸುಮಾರು 1.25 ಲಕ್ಷ ನೌಕರರು ಏಪ್ರಿಲ್ 7ರಿಂದ 21ರವರೆಗೆ ಕೆಲಸ ಬಹಿಷ್ಕರಿಸಿ ಮುಷ್ಕರ ನಡೆಸಿದ್ದರು. ಸರ್ಕಾರ ನೀಡಿದ ಭರವಸೆ ನಂಬಿ ಪ್ರತಿಭಟನೆ ಕೈಬಿಟ್ಟಿದ್ದ ನೌಕರರು, ಕೋವಿಡ್ ಪರೀಕ್ಷೆ ಮಾಡಿಸಿ ಸೇವೆಗೆ ಹಾಜರಾಗಿದ್ದರು.



ಇದರ ನಡುವೆಯೇ ರಾಜ್ಯದಾದ್ಯಂತ ಲಾಕ್‌ಡೌನ್ ಜಾರಿಯಾಗಿದ್ದು, ಬಸ್‌ಗಳು ಆಯಾ ಡಿಪೊಗಳಲ್ಲೇ ನಿಂತಿವೆ. ಏಪ್ರಿಲ್ ಸಂಬಳಕ್ಕಾಗಿ ಕಾಯುತ್ತಿದ್ದ ನೌಕರರಿಗೆ, ಹಣವಿಲ್ಲವೆಂಬ ಸಾರಿಗೆ ಇಲಾಖೆಯ ಉತ್ತರ ನಿರಾಶೆಯನ್ನುಂಟು ಮಾಡಿದೆ.

'ಮುಷ್ಕರ ಹೊರತುಪಡಿಸಿ ಏಪ್ರಿಲ್ 1ರಿಂದ 6ರವರೆಗೆ ಹಾಗೂ ಏಪ್ರಿಲ್ 22ರಿಂದ 30ರವರೆಗೆ ಬಹುತೇಕ ನೌಕರರು ಕೆಲಸ ಮಾಡಿದ್ದಾರೆ. ಆದರೆ, ನೌಕರರಿಗೆ ಇದುವರೆಗೂ ಇಲಾಖೆ ಸಂಬಳ ನೀಡಿಲ್ಲ. ಲಾಕ್‌ಡೌನ್ ಸಮಯದಲ್ಲಿ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ಕಾರ್ಯದರ್ಶಿ ಆನಂದ್ ಹೇಳಿದರು.

ಸಂಬಳದ ಬಗ್ಗೆ ಪ್ರತಿಕ್ರಿಯಿಸಿರುವ ಸಾರಿಗೆ ಇಲಾಖೆ ಮೂಲಗಳು, 'ಆದಾಯದಲ್ಲಿ ಸಾಕಷ್ಟು ನಷ್ಟವಾಗಿದೆ. ಪ್ರತಿ ತಿಂಗಳು ಸಂಬಳ ನೀಡಲು ₹ 325 ಕೋಟಿ ಬೇಕು. ಮುಂದಿನ ಮೂರು ತಿಂಗಳು ಸಂಬಳ ನೀಡುವುದಕ್ಕಾಗಿ ಅನುದಾನ ನೀಡುವಂತೆ ಸರ್ಕಾರವನ್ನು ಕೋರಲಾಗಿದೆ. ಅನುದಾನ ಬರುತ್ತಿದ್ದಂತೆ ಸಂಬಳ ಬಿಡುಗಡೆ ಮಾಡಲಾಗುವುದು' ಎಂದಿದೆ.

'ಮುಷ್ಕರದಲ್ಲಿ ಪಾಲ್ಗೊಂಡಿದ್ದ 18 ಸಾವಿರ ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ, ತರಬೇತಿನಿರತ 3 ಸಾವಿರ ನೌಕರರನ್ನು ಸೇವೆಯಿಂದ ವಜಾ ಮಾಡಲಾಗಿದೆ' ಎಂದೂ ಮೂಲಗಳು ಹೇಳಿವೆ.

ಹೊಸಕೆರೆಹಳ್ಳಿಯಲ್ಲಿ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ಪದ್ಮನಾಭನಗರ ಕ್ಷೇತ್ರದ ಹೊಸಕೆರೆಹಳ್ಳಿ ರೆಫರಲ್ ಆಸ್ಪತ್ರೆಯಲ್ಲಿ ಸಿದ್ಧಗೊಂಡಿರುವ ನೂತನ ಕೋವಿಡ್ ಆರೈಕೆ ಕೇಂದ್ರವನ್ನು ಕಂದಾಯ ಸಚಿವ ಆರ್. ಅಶೋಕ ಶುಕ್ರವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ದಕ್ಷಿಣ ಬೆಂಗಳೂರಿನ ಜನರಿಗೆ ಈ ಆಸ್ಪತ್ರೆಯು ಹೆಚ್ಚು ಉಪಯುಕ್ತವಾಗಲಿದ್ದು, ಇಲ್ಲಿ ಉನ್ನತ ದರ್ಜೆಯ ವ್ಯವಸ್ಥೆಗಳನ್ನು ರೂಪಿಸಲಾಗಿದೆ. 40 ಹಾಸಿಗೆಯುಳ್ಳ ಈ ಆಸ್ಪತ್ರೆಯ ಪ್ರತಿ ಹಾಸಿಗೆಗೂ ಆಕ್ಸಿಜನ್ ಕಾನ್ಸಂಟ್ರೇಟರ್ ಅಳವಡಿಸಲಾಗಿದ್ದು, ಜೊತೆಗೆ ಹೈ ಫ್ಲೋ ಆಕ್ಸಿಜೆನ್ ವ್ಯವಸ್ಥೆ ಕೂಡ ದೊರೆಯಲಿದೆ. ತಜ್ಞ ವೈದ್ಯರು ಈ ಆಸ್ಪತ್ರೆಯಲ್ಲಿ ಲಭ್ಯವಿದ್ದಾರೆ' ಎಂದು ತಿಳಿಸಿದರು.



ಕೋವಿಡ್ ಆರೈಕೆ ಕೇಂದ್ರದ ಸೌಲಭ್ಯವನ್ನು ಆರ್.ಅಶೋಕ ಪರಿಶೀಲಿಸಿದರು.

'ಮೂರು ತಿಂಗಳಲ್ಲಿ ಮೂರನೇ ಅಲೆ ಬರುತ್ತದೆ ಎಂಬ ಅಭಿಪ್ರಾಯವಿದೆ. ಆ ವೇಳೆ ಮಕ್ಕಳು ಹೆಚ್ಚು ಅಪಾಯಕ್ಕೆ ಈಡಾಗಬಹುದು ಎಂದು ತಜ್ಞರು ಹೇಳುತ್ತಿರುವುದರಿಂದ ಆ ನಿಟ್ಟಿನಲ್ಲಿ ಇಲ್ಲಿ ನಿರ್ಮಾಣ ಹಂತದಲ್ಲಿದ್ದ ಸಮುದಾಯ ಭವನವನ್ನು 50 ಹಾಸಿಗೆಗಳ ಮಕ್ಕಳ ಆಸ್ಪತ್ರೆಯಾಗಿ ಬದಲಾವಣೆ ಮಾಡಲು ಸೂಚಿಸಿದ್ದೇನೆ. ಹಾಗೆಯೇ ಆ ಮಕ್ಕಳ ಪಾಲಕರು ಉಳಿದುಕೊಳ್ಳಲು ಹತ್ತಿರದಲ್ಲೇ ಕಲ್ಯಾಣ ಮಂಟಪವನ್ನು ಗುರುತಿಸಲಾಗಿದೆ' ಎಂದರು.

ಮಹಾರಾಜ ಅಗ್ರಸೇನಾ ಆಸ್ಪತ್ರೆಯಲ್ಲಿ ಸೋಂಕಿತರಿಗೆ ತುರ್ತು ಆಮ್ಲಜನಕ ಸೌಲಭ್ಯ ಒದಗಿಸುವ ಆಮ್ಲಜನಕ ಆನ್ ವ್ಹೀಲ್ಸ್ ಬಸ್ ಉದ್ಘಾಟಿಸಿದರು. ಈ ಬಸ್‌ನ 15 ಆಸನಗಳಿಗೆ ಆಮ್ಲಜನಕ ವ್ಯವಸ್ಥೆ ಕಲ್ಪಿಸಲಾಗಿದ್ದು, ಆಸ್ಪತ್ರೆಯಲ್ಲಿ ಕೂಡಲೇ ಬೆಡ್ ಸಿಗದ ಸೋಂಕಿತರಿಗೆ ಇಲ್ಲಿ ತಾತ್ಕಾಲಿಕ ವ್ಯವಸ್ಥೆ ಒದಗಿಸಲಾಗುತ್ತದೆ.



ಪ್ರತಿಮೆ ಅನಾವರಣ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಎಂ.ಸಿ. ಬಡಾವಣೆಯಲ್ಲಿನ ಬಾಲಗಂಗಾಧರನಾಥ ಸ್ವಾಮಿಜಿ ಆಟದ ಮೈದಾನದಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ಕಂಚಿನ ಪ್ರತಿಮೆಯನ್ನು ವಸತಿ ಸಚಿವ ವಿ. ಸೋಮಣ್ಣ ಅನಾವರಣಗೊಳಿಸಿದರು. ಆದಿಚುಂಚನಗಿರಿ ವಿಜಯನಗರ ಶಾಖೆಯ ಸೌಮ್ಯನಾಥ ಸ್ವಾಮೀಜಿ, ಬಿಜೆಪಿ ಗೋವಿಂದರಾಜನಗರ ಮಂಡಲದ ಅಧ್ಯಕ್ಷ ವಿಶ್ವನಾಥಗೌಡ, ಬಿಬಿಎಂಪಿ ಮಾಜಿ ಸದಸ್ಯ ಉಮೇಶ್ ಶೆಟ್ಟಿ, ರಾಮಪ್ಪ, ರಾಮಚಂದ್ರ, ಶಕುಂತಲಾ ದೊಡ್ಡಲಕ್ಕಪ್ಪ, ವಾಗೀಶ್, ಉಮಾಶಂಕರ್ ಇದ್ದರು

'ವೈದ್ಯಕೀಯ ಉಪಕರಣ: ಬೆಲೆಗೆ ಕಡಿವಾಣ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಲ್ಸ್ ಆಕ್ಸಿಮೀಟರ್ ಸೇರಿದಂತೆ ವಿವಿಧ ವೈದ್ಯಕೀಯ ಉಪಕರಣಗಳನ್ನು ಅಧಿಕ ಬೆಲೆಗೆ ಮಾರಾಟ ಮಾಡುತ್ತಿರುವವರ ಮೇಲೆ ಕಾನೂನು ಅಡಿ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಕಾನೂನು ಮಾಪನಶಾಸ್ತ್ರ ನಿರೀಕ್ಷಕರ ಸಂಘ ಆಗ್ರಹಿಸಿದೆ.

'ರಕ್ತದಲ್ಲಿನ ಆಮ್ಲಜನಕ ಪ್ರಮಾಣವನ್ನು ಪರಿಶೀಲಿಸುವ ಪಲ್ಸ್ ಆಕ್ಸಿಮೀಟರ್ ಕಳೆದ ವರ್ಷ ಕೇವಲ ₹ 800ಗೆ ಸಿಗುತ್ತಿತ್ತು. ನೇರವಾಗಿ ಆಮದುದಾರರು ಮತ್ತು ತಯಾರಿಸುವವರಿಂದ ಖರೀದಿಸಿದಲ್ಲಿ ₹ 400ರಿಂದ ₹ 600ಗೆ ದೊರೆಯುತ್ತಿತ್ತು. ಆದರೆ, ಈಗ ಉಪಕರಣಗಳ ಗರಿಷ್ಠ ಚಿಲ್ಲರೆ ಮಾರಾಟ ದರವನ್ನು (ಎಂಆರ್‌ಪಿ) ₹ 3,999ರವರೆಗೂ ಏರಿಕೆ ಮಾಡಲಾಗಿದೆ. ಕೆಲವರು ಈ ದರಕ್ಕಿಂತ ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿದ್ದಾರೆ. ಹಾಗಾಗಿ, ಕಾನೂನಿನ ಅಡಿಯಲ್ಲಿ ಸುಲಿಗೆ ಮಾಡುತ್ತಿರುವವರ ವೇಲೆ ಕ್ರಮ ಕೈಗೊಳ್ಳಬೇಕು' ಎಂದು ಸಂಘದ ಕಾರ್ಯಾಧ್ಯಕ್ಷ ಸುಧಾಕರ್ ಎಸ್.ಬಿ. ಅವರು ಆಗ್ರಹಿಸಿದ್ದಾರೆ.

ನಿಯಮ ಉಲ್ಲಂಘನೆ: 1.34 ಲಕ್ಷ ಪ್ರಕರಣ– ₹ 3.26 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸ್ಕ್ ಹಾಕಿಕೊಳ್ಳದ ಹಾಗೂ ಅಂತರ ಕಾಯ್ದುಕೊಳ್ಳದವರ ವಿರುದ್ಧ ನಗರದ ಪೊಲೀಸರು 1.34 ಲಕ್ಷ ಪ್ರಕರಣ ದಾಖಲಿಸಿಕೊಂಡಿದ್ದು, ₹ 3.26 ಕೋಟಿ ದಂಡ ಸಂಗ್ರಹಿಸಿದ್ದಾರೆ.

'ಕೊರೊನಾ ಸೋಂಕು ತಡೆಗಾಗಿ ಸರ್ಕಾರ ಕಠಿಣ ನಿಯಮಗಳನ್ನು ಜಾರಿಗೊಳಿಸಿದೆ. ಅದನ್ನು ಉಲ್ಲಂಘಿಸಿದವರನ್ನು ಪತ್ತೆ ಮಾಡಿ ದಂಡ ವಿಧಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆಯಾ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಮಾರುಕಟ್ಟೆ, ಬಸ್ ತಂಗುದಾಣ, ಚೆಕ್‌ಪೋಸ್ಟ್ ಹಾಗೂ ಇತರೆಡೆಗಳಲ್ಲಿ ಸಿಬ್ಬಂದಿ ಸಂಚರಿಸುತ್ತಿದ್ದಾರೆ' ಎಂದೂ ತಿಳಿಸಿದರು.

'ವಿಪತ್ತು ನಿರ್ವಹಣಾ ಕಾಯ್ದೆಯಡಿ ಕೆಲವರ ವಿರುದ್ಧ ಪ್ರಕರಣವನ್ನೂ ದಾಖಲಿಸಿಕೊಳ್ಳಲಾಗಿದೆ' ಎಂದೂ ಅವರು ಹೇಳಿದರು.

19.505 ವಾಹನ ಜಪ್ತಿ: ನಗರದಲ್ಲಿ ಅನಗತ್ಯವಾಗಿ ಸಂಚರಿಸುತ್ತಿದ್ದವರ 19,505 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ಅಗತ್ಯ ವಸ್ತುಗಳ ಖರೀದಿ ಹಾಗೂ ತುರ್ತು ಸೇವೆಗಳಿಗೆ ಮಾತ್ರ ವಾಹನ ಬಳಸಲು ಅವಕಾಶವಿದೆ. ಅದನ್ನು ಹೊರತುಪಡಿಸಿ ಅನಗತ್ಯವಾಗಿ ಸಂಚರಿಸುವವರ ವಾಹನ ತಡೆದು ಜಪ್ತಿ ಮಾಡಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಇದುವರೆಗೂ 17,696 ದ್ವಿಚಕ್ರ ವಾಹನ, 869 ಆಟೊ ಹಾಗೂ 940 ಕಾರುಗಳನ್ನು ಜಪ್ತಿ ಮಾಡಲಾಗಿದೆ. ಠಾಣೆ ವ್ಯಾಪ್ತಿಯಲ್ಲೇ ಅವುಗಳನ್ನು ನಿಲುಗಡೆ ಮಾಡಲಾಗಿದೆ. ನ್ಯಾಯಾಲಯದ ಮೂಲಕವೇ ವಾಹನಗಳನ್ನು ಬಿಡಿಸಿಕೊಳ್ಳಬೇಕು' ಎಂದೂ ಅಧಿಕಾರಿ ಮಾಹಿತಿ ನೀಡಿದರು.

ಲಸಿಕೆ ಕೇಂದ್ರಕ್ಕಾಗಿ ಕಲ್ಯಾಣ ಮಂಟಪ ಬಳಕೆ

ಹರಪನಹಳ್ಳಿ: ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಮಠದ ಸುಪರ್ದಿಯಲ್ಲಿರುವ ಪಟ್ಟಣದ ಹೊಸಪೇಟೆ ರಸ್ತೆ ತರಳಬಾಳು ಕಲ್ಯಾಣ ಮಂಟಪವನ್ನು ಲಸಿಕೆ ಕೇಂದ್ರಕ್ಕೆ ಉಚಿತವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಬಿಟ್ಟುಕೊಟ್ಟಿದ್ದಾರೆ ಎಂದು ಮುಖಂಡ ಪಿ. ಮಹಾಬಲೇಶ್ವರ ಗೌಡ ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿತರು ಮತ್ತು ಜನರಿಗೆ ಲಸಿಕೆ ಹಾಕಲು ಸ್ಥಳಾವಕಾಶದ ಕೊರತೆಯಾದ ಕಾರಣ, ಜನಸಾಮಾನ್ಯರ ಆರೋಗ್ಯದ ಸುರಕ್ಷತೆ ದೃಷ್ಟಿಯಿಂದ ಮಂಟಪವನ್ನು ಬಿಟ್ಟುಕೊಟ್ಟಿದ್ದಾರೆ. ಅಲ್ಲಿ ಮೂರು ದಿನದಿಂದ ಲಸಿಕೆ ಅಭಿಯಾನ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸಿದ್ಧಾರ್ಥ ಕಾಲೇಜಿನಲ್ಲಿ ಕೋವಿಡ್ ಚಿಕಿತ್ಸೆ

ನೆಲಮಂಗಲ: ಟಿ.ಬೇಗೂರಿನಲ್ಲಿರುವ ಸಿದ್ಧಾರ್ಥ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರದಲ್ಲಿ 200 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಲಾಗಿದೆ ಎಂದು ಪ್ರಾಂಶುಪಾಲ ಡಿ.ಎಸ್.ವಾಸುದೇವ ತಿಳಿಸಿದ್ದಾರೆ.

ಸಿದ್ಧಾರ್ಥ ವೈದ್ಯಕೀಯ ಕಾಲೇಜಿನಲ್ಲಿ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ, ವೈದ್ಯರು ಗೈರಾಗಿದ್ದಾರೆ ಎಂದು ಸಾರ್ವಜನಿಕರು ದೂರಿದ್ದರು. ಸಚಿವ ಆರ್.ಅಶೋಕ ಅವರು ನೆಲಮಂಗಲಕ್ಕೆ ಭೇಟಿ ನೀಡಿದ್ದಾಗಲೂ ಕಾಲೇಜಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದರು.

'ನಮ್ಮ ಎರಡು ಆರ್‌ಟಿಪಿಸಿಆರ್ ಪ್ರಯೋಗಾಲಯದ ಮೂಲಕ ದಿನಕ್ಕೆ 600 ರಿಂದ 1000 ಪರೀಕ್ಷೆಗಳನ್ನು ಮಾಡುತ್ತಿದ್ದೇವೆ. 3 ವೈದ್ಯರು ಹಾಗೂ 4 ಶುಶ್ರೂಷಕರು 24 ಗಂಟೆಯೂ ಸೇವೆಗೆ ಲಭ್ಯವಿದ್ದು ಆಸ್ಪತ್ರೆಯಲ್ಲಿ ವಾಸ್ತವ್ಯ ಹೂಡಿದ್ದಾರೆ' ಎಂದು ಆಡಳಿತಾಧಿಕಾರಿ ಡಾ.ಸುದೀಪ್ ತಿಳಿಸಿದರು.



ಕೋವಿಡ್ ರೋಗಿಗಳಿಗೆ ವೈದ್ಯರು ಚಿಕಿತ್ಸೆ ನೀಡುತ್ತಿರುವುದು

'ಕೋವಿಡ್ ಮೊದಲನೇ ಅಲೆಯಲ್ಲಿ 624 ರೋಗಿಗಳು ಚಿಕಿತ್ಸೆ ಪಡೆದಿದ್ದು ಯಾವುದೇ ಸಾವು ಸಂಭವಿಸಿಲ್ಲ. ಎರಡನೇ ಅಲೆಯಲ್ಲಿ 326 ರೋಗಿಗಳು ಗುಣಮುಖರಾಗಿದ್ದಾರೆ. ಲಭ್ಯ ಆಮ್ಲಜನಕ ಸಹಿತ ಚಿಕಿತ್ಸೆ ನೀಡುತ್ತಿದ್ದೇವೆ' ಎಂದರು.

ಅಸ್ಥಿ ವಿಸರ್ಜನೆಗೆ ಅವಕಾಶ ಕಲ್ಪಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೃತ ವ್ಯಕ್ತಿಗಳ ಅಂತ್ಯಕ್ರಿಯೆಯ ಅಸ್ಥಿ ವಿಸರ್ಜನೆಗೆ ಹೋಗಿ ಬರಲು ತೊಂದರೆಯಾಗುತ್ತಿದ್ದು, ಅಸ್ಥಿ ವಿಸರ್ಜನೆಗೆ ಅನುಕೂಲವಾಗುವ ನಿಯಮಗಳನ್ನು ರೂಪಿಸಿ ಅವಕಾಶ ಕಲ್ಪಿಸಬೇಕು' ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪದಾಧಿಕಾರಿಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಾ. ಕೆ.ಎಸ್.ಎನ್. ದೀಕ್ಷಿತ್, 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ಕಂದಾಯ ಸಚಿವ ಆರ್.ಅಶೋಕ ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

ಚಿತ್ರಾವಳಿ



ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ರಾಜರಾಜೇಶ್ವರಿ ನಗರದ ಬಿ.ಇ.ಟಿ. ಕಾನ್ವೆಂಟ್ ಮುಂದೆ ಸೇರಿದ್ದ ಜನ –ಪ್ರಜಾವಾಣಿ ಚಿತ್ರ



ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಯುವಕರಿಬ್ಬರು ಭರ್ತಿಯಾಗಿದ್ದ ಆಮ್ಲಜನಕ ಸಿಲಿಂಡರ್ ಹೊತ್ತು ಸಾಗಿದರು – ಪ್ರಜಾವಾಣಿ ಚಿತ್ರ

‘ರೋಟರಿ ವಾರ್‌ರೂಮ್’ ಪ್ರತಿದಿನ 2 ಸಾವಿರ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಿಗೆ ಸೂಕ್ತ ಸಮಯದಲ್ಲಿ ನೆರವು ನೀಡಲು ಹಾಗೂ ಅವರ ಕುಟುಂಬದವರಿಗೆ ಧೈರ್ಯ ತುಂಬಲು ರೋಟರಿ (ಡಿಸ್ಟ್ರಿಕ್ಟ್ 3190) ವತಿಯಿಂದ ವಾರ್‌ರೂಮ್ ತೆರೆಯಲಾಗಿದ್ದು, ನಿತ್ಯವೂ ಸುಮಾರು 2,000 ಮಂದಿ ಕರೆ ಮಾಡುತ್ತಿದ್ದಾರೆ.

ರೋಟರಿ ಗವರ್ನರ್ ಬಿ.ಎಲ್. ನಾಗೇಂದ್ರ ಪ್ರಸಾದ್ ಅವರು ದಿನದ 24 ಗಂಟೆಯೂ ವಾರ್‌ರೂಮ್ ಕೆಲಸ ಮಾಡುವಂತೆ ನೋಡಿಕೊಳ್ಳುತ್ತಿದ್ದಾರೆ. 250ಕ್ಕೂ ಹೆಚ್ಚು ಸ್ವಯಂಸೇವಕರು ವಾರ್‌ರೂಮ್‌ಗಾಗಿ ಕೆಲಸ ಮಾಡುತ್ತಿದ್ದಾರೆ.

‘ಎರಡನೇ ಅಲೆಯ ಪರಿಣಾಮ ಹೆಚ್ಚಾಗಿದ್ದು, ಇಂಥ ಸಂದರ್ಭದಲ್ಲಿ ಜನರಿಗೆ ಸಹಾಯ ಮಾಡಲು ವಾರ್‌ರೂಮ್ ತೆರೆಯಲಾಗಿದೆ. ಅಮೆರಿಕದ ವೈದ್ಯರ ಜೊತೆಯೂ ಸಂಪರ್ಕವಿಟ್ಟುಕೊಳ್ಳಲಾಗಿದೆ. ಅವರ ಮೂಲಕವೂ ಜನರಿಗೆ ಸಲಹೆ ಕೊಡಿಸಲಾಗುತ್ತಿದೆ’ ಎಂದು ನಾಗೇಂದ್ರ ಪ್ರಸಾದ್ ಹೇಳಿದರು.

‘ವಾರ್‌ರೂಮ್‌ಗೆ ಕರೆ ಮಾಡುತ್ತಿದ್ದಂತೆ ಇಂಗ್ಲಿಷ್ ಹಾಗೂ ಕನ್ನಡ ಆಯ್ಕೆ ನೀಡಲಾಗಿದೆ. ಭಾಷೆ ಆಯ್ಕೆ ಮಾಡಿಕೊಂಡರೆ, ಬಿಡುವಿರುವ ಸ್ವಯಂಸೇವಕರಿಗೆ ಕರೆ ಹೋಗಲಿದೆ. ಅವರೇ ಜನರ ಸಮಸ್ಯೆಯನ್ನು ಆಲಿಸಿ ಸಹಾಯ ಮಾಡಲಿದ್ದಾರೆ’ ಎಂದೂ ತಿಳಿಸಿದರು.

ರೋಟರಿ ಸಂಘಟನಾ ಕಾರ್ಯದರ್ಶಿ ಎಲಿಜಬೆತ್ ಚೆರಿಯನ್ ಪರಮೇಶ್, ‘ವಾರ್‌ರೂಮ್‌ಗೆ ಬಿಬಿಎಂಪಿ ಕಡೆಯಿಂದಲೂ ಪ್ರಶಂಸೆ ಸಿಕ್ಕಿದೆ’ ಎಂದರು.

‘ಮೊದಲ ಅಲೆಯಲ್ಲೂ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಸಿಬ್ಬಂದಿಗಾಗಿ ಬಸವೇಶ್ವರ ನಗರದಲ್ಲಿ ಕೋವಿಡ್ ಆಸ್ಪತ್ರೆ ತೆರೆಯಲಾಗಿತ್ತು. ಇದೀಗ ವಾರ್‌ರೂಮ್ ಮೂಲಕ ಸಹಾಯ ಮಾಡುತ್ತಿದ್ದು, ಎಲ್ಲರ ಸಹಕಾರ ನಮ್ಮ ಕೆಲಸಕ್ಕಿದೆ’ ಎಂದೂ ತಿಳಿಸಿದರು.

100 ಹಾಸಿಗೆಗಳ ಎರಡು ಆಸ್ಪತ್ರೆ: ‘ದೂರವಾಣಿ ನಗರ ಹಾಗೂ ಮಲ್ಲೇಶ್ವರದಲ್ಲಿ ತಲಾ 100 ಹಾಸಿಗೆಗಳ ಆಸ್ಪತ್ರೆ ಆರಂಭಿಸುವ ಪ್ರಕ್ರಿಯೆಯೂ ನಡೆದಿದೆ’ ಎಂದು ನಾಗೇಂದ್ರ ಪ್ರಸಾದ್ ಹೇಳಿದರು.

ವಾರ್ ರೂಮ್ ಕೆಲಸ

- ಸೋಂಕಿತರು ಹಾಗೂ ಅವರ ಕುಟುಂಬದವರಿಗೆ ಆಪ್ತ ಸಮಾಲೋಚನೆ
- ಹಾಸಿಗೆ, ಪ್ಲಾಸ್ಮಾ ದಾನ, ಆಂಬುಲೆನ್ಸ್, ಆಮ್ಲಜನಕ ಹಾಗೂ ಔಷಧಿ ಬಗ್ಗೆ ಮಾಹಿತಿ

ವಾರ್ ರೂಮ್ ಸಂಪರ್ಕಕ್ಕೆ;

98118 04401 ಅಥವಾ ಇ-ಮೇಲ್: 3190covidwarroom@gmail.com

ಜಾಲತಾಣ: covid19.rotarydistrict3190.org

ಸುದ್ದಿ 2 ನಿಮಿಷ

ಆಂಧ್ರ: ಸಂಸದ ರಾಜು ಬಂಧನ

ಅಮರಾವತಿ: ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸಂಸದ ಕೆ. ರಘು ರಾಮಕೃಷ್ಣ ರಾಜು ಅವರನ್ನು ದೇಶದ್ರೋಹ ಸೇರಿದಂತೆ ವಿವಿಧ ಆರೋಪಗಳ ಅಡಿಯಲ್ಲಿ ಶುಕ್ರವಾರ ಬಂಧಿಸಲಾಗಿದೆ.

ಕೆಲ ಸಮುದಾಯಗಳ ವಿರುದ್ಧ ದ್ವೇಷ ಭಾಷಣ ಮತ್ತು ಸರ್ಕಾರದ ವಿರುದ್ಧ ಅತೃಪ್ತಿ ವ್ಯಕ್ತಪಡಿಸಿದ ಆರೋಪವನ್ನು ರಾಜು ವಿರುದ್ಧ ಹೊರಿಸಲಾಗಿದೆ ಎಂದು ಆಂಧ್ರಪ್ರದೇಶದ ಅಪರಾಧ ತನಿಖಾ ವಿಭಾಗದ ಪೊಲೀಸರು ತಿಳಿಸಿದ್ದಾರೆ.

‘ಸಿಐಡಿ ಹೆಚ್ಚುವರಿ ಮಹಾ ನಿರ್ದೇಶಕ ಪಿ.ವಿ. ಸುನೀಲ್ ಕುಮಾರ್ ಅವರು ಪ್ರಾಥಮಿಕ ತನಿಖೆಗೆ ಆದೇಶ ನೀಡಿದ್ದರು. ರಾಜು ಅವರು ವ್ಯವಸ್ಥಿತವಾಗಿ ಸಮುದಾಯಗಳ ನಡುವೆ ಉದ್ವಿಗ್ನ ಪರಿಸ್ಥಿತಿ ಸೃಷ್ಟಿಸುವುದರಲ್ಲಿ ತೊಡಗಿರುವುದು ಮತ್ತು ಸರ್ಕಾರದ ಪ್ರತಿನಿಧಿಗಳನ್ನು ಟೀಕಿಸುತ್ತಿದ್ದರು. ಇದರಿಂದ, ಸರ್ಕಾರದ ಮೇಲಿನ ವಿಶ್ವಾಸಕ್ಕೆ ಧಕ್ಕೆಯಾಗುತ್ತಿರುವುದು ತನಿಖೆಯಿಂದ ತಿಳಿದು ಬಂದಿದೆ’ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

‘ಹೀಗಾಗಿ, ಸಂಸದರ ವಿರುದ್ಧ 124ಎ (ದೇಶದ್ರೋಹ), 153ಎ (ವಿವಿಧ ಗುಂಪುಗಳ ನಡುವೆ ದ್ವೇಷ ಬಿತ್ತುವುದು, 505 (ಕಿಡಿಗೇಡಿತನಕ್ಕೆ ಪ್ರಚೋದನೆ ನೀಡುವ ಹೇಳಿಕೆಗಳು), 120ಬಿ (ಸಂಚು) ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸಿಐಡಿ ಹೆಚ್ಚುವರಿ ಮಹಾನಿರ್ದೇಶಕರ ಆದೇಶದ ಅನ್ವಯ ಈ ಕ್ರಮಕೈಗೊಳ್ಳಲಾಗಿದೆ’ ಎಂದು ತಿಳಿಸಿದೆ.

ಶುಶ್ರೂಷಕರಿಗೆ ಕಿಟ್ ವಿತರಣೆ



ಬೆಂಗಳೂರು: ಅಂತರರಾಷ್ಟ್ರೀಯ ದಾದಿಯರ ದಿನದ ಪ್ರಯುಕ್ತ ಕೃಷ್ಣರಾಜಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಶುಶ್ರೂಷಕರಿಗೆ ಕೇಂಬ್ರಿಡ್ಜ್ ಸಮೂಹ ವಿದ್ಯಾಸಂಸ್ಥೆಯು ಆಹಾರವನ್ನು ಕೊಂಡೊಯ್ಯುವ ಕಿಟ್‌ಗಳನ್ನು ವಿತರಿಸಿದೆ.

ಸುಮಾರು 40 ಶುಶ್ರೂಷಕರಿಗೆ ಕಿಟ್‌ಗಳನ್ನು ನೀಡಿ ಗೌರವಿಸಿದ ಸಂಸ್ಥೆಯ ಅಧ್ಯಕ್ಷ ಡಿ.ಕೆ. ಮೋಹನ್, ‘ಕೋವಿಡ್ ಕಾಯಿಲೆಯು ಇಡೀ ವಿಶ್ವವನ್ನು ಆವರಿಸಿಕೊಂಡಿದೆ. ಈ ಸಂದರ್ಭದಲ್ಲಿ ಮುಂಚೂಣಿಯಲ್ಲಿ ನಿಂತು ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ಶುಶ್ರೂಷಕರು ಹೆಚ್ಚು ಒತ್ತಡದಲ್ಲಿದ್ದಾರೆ. ಶುಶ್ರೂಷಕರು ಹಗಲಿರುಳು ಕೋವಿಡ್ ನಿಯಂತ್ರಣಕ್ಕೆ ಶ್ರಮಿಸುತ್ತಿದ್ದಾರೆ. ಅವರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅವರ ಸೇವೆಯನ್ನು ಗುರುತಿಸಿ ಗೌರವಿಸುವುದು ಹಾಗೂ ಬೆನ್ನುತಟ್ಟಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯ’ ಎಂದು ಹೇಳಿದರು.

‘ಕೃಷ್ಣರಾಜಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರ ಮಕ್ಕಳು ಕೇಂಬ್ರಿಡ್ಜ್ ವಿದ್ಯಾಸಂಸ್ಥೆಯಲ್ಲಿ ಓದಲು ಇಚ್ಛಿಸಿದಲ್ಲಿ ವಿಶೇಷ ಪ್ರೋತ್ಸಾಹ ನೀಡಲಾಗುತ್ತದೆ. ತಲಾ ₹ 10 ಸಾವಿರ ವಿದ್ಯಾರ್ಥಿ ವೇತನ ನೀಡಲಾಗುತ್ತದೆ’ ಎಂದು ಘೋಷಿಸಿದರು.

ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಮಹೇಂದ್ರ ಬಾಬು, ಆಡಳಿತಾಧಿಕಾರಿ ಡಾ. ಲೀಲಾ ಹಾಗೂ ಸಿಬ್ಬಂದಿ ಇದ್ದರು.

ಕಾಳಸಂತೆಯಲ್ಲಿ ಆಮ್ಲಜನಕ ಸಿಲಿಂಡರ್ ಮಾರಾಟ; ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ಲಜನಕ ಸಿಲಿಂಡರ್ ಹಾಗೂ ಆಮ್ಲಜನಕ ಸಾಂದ್ರೀಕರಣ ಸಾಧನವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಎಸ್.ಬಿ. ಮಂಜುನಾಥ್ (27), ರಾಜ್‌ಕುಮಾರ್ (30) ಹಾಗೂ ಅನಿಲ್ ಕುಮಾರ್ (39) ಬಂಧಿತರು. ಅವರಿಂದ ₹5 ಲಕ್ಷ ಮೌಲ್ಯದ 2 ಆಮ್ಲಜನಕ ಸಿಲಿಂಡರ್, 1 ಆಮ್ಲಜನಕ ಸಾಂದ್ರೀಕರಣ ಸಾಧನ, ಮೂರು ಮೊಬೈಲ್ ಹಾಗೂ ಕಾರು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಚಾಮರಾಜಪೇಟೆಯಲ್ಲಿರುವ ಸಿಗಾ ಗ್ಯಾಸ್ ಕಂಪನಿ ಸಿಬ್ಬಂದಿ ನವೀನ್ ಎಂಬಾತನ ಜೊತೆ ಒಡನಾಟ ಹೊಂದಿದ್ದ ಆರೋಪಿಗಳು, ಆತನ ಮೂಲಕ ಆಮ್ಲಜನಕ ಖರೀದಿಸುತ್ತಿದ್ದರು. ಅದನ್ನು ಕೊರೊನಾ ಸೋಂಕಿತರಿಗೆ ಹಾಗೂ ಅವರ ಸಂಬಂಧಿಕರಿಗೆ ದುಬಾರಿ ಬೆಲೆಗೆ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅವರ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ತಿಳಿಸಿದರು.



ಜಪ್ತಿ ಮಾಡಲಾದ ಆಮ್ಲಜನಕ ಸಿಲಿಂಡರ್ ಜೊತೆ ಆರೋಪಿಗಳು

ಖಾಲಿ ಬಾಟಲಿಯಲ್ಲಿ ಎನ್‌.ಎಸ್‌. ದ್ರಾವಣ ತುಂಬಿ ವಂಚನೆ

‘ನಕಲಿ ರೆಮ್‌ಡಿಸಿವಿರ್’ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು; ರೆಮ್‌ಡಿಸಿವಿರ್ ಚುಚ್ಚುಮದ್ದಿನ ಖಾಲಿ ಬಾಟಲಿಗಳಲ್ಲಿ ಎನ್.ಎಸ್. ದ್ರಾವಣ ತುಂಬಿಸಿ ‘ನಕಲಿ ರೆಮ್‌ಡಿಸಿವಿರ್’ ಮಾರಾಟ ಮಾಡುತ್ತಿದ್ದ ಆರೋಪದಡಿ ಮೂವರನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

‘ಮೈಸೂರು ರಸ್ತೆಯ ಎಸ್. ರವಿಕುಮಾರ್ (36), ನಾಗವಾರ ಮುಖ್ಯರಸ್ತೆಯ ಎನ್. ಮುನಿರಾಜು (30) ಹಾಗೂ ಕಾಮಾಕ್ಷಿಪಾಳ್ಯದ ಕೃಷ್ಣ (31) ಬಂಧಿತರು. ಅವರಿಂದ 9 ನಕಲಿ ರೆಮ್‌ಡಿಸಿವಿರ್ ಬಾಟಲಿ ಹಾಗೂ ₹ 55 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೊಸೂರು ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ಆಸ್ಪತ್ರೆ ಹಾಗೂ ಕೂಡ್ಲುವಿನಲ್ಲಿರುವ ಮಾತೃ ಆಸ್ಪತ್ರೆಯ ಹೌಸ್ ಕೀಪಿಂಗ್ ವ್ಯವಸ್ಥಾಪಕನಾಗಿದ್ದ ಕೃಷ್ಣ ಜೊತೆ ರವಿಕುಮಾರ್ ಹಾಗೂ ಮುನಿರಾಜು ಒಡನಾಟ ಹೊಂದಿದ್ದರು. ಆಸ್ಪತ್ರೆಯಲ್ಲಿ ಬಳಸಿ ಎಸೆಯುತ್ತಿದ್ದ ರೆಮ್‌ಡಿಸಿವಿರ್ ಬಾಟಲಿಗಳನ್ನು ಕೃಷ್ಣ ಮೂಲಕ ಆರೋಪಿಗಳು ಪಡೆಯುತ್ತಿದ್ದರು.’

’ಅದೇ ಬಾಟಲಿಗಳಲ್ಲಿ ಎನ್.ಎಸ್. ದ್ರಾವಣವನ್ನು ತುಂಬುತ್ತಿದ್ದರು. ಕೊರೊನಾ ಸೋಂಕಿತರು ಹಾಗೂ ಅವರ ಸಂಬಂಧಿಕರಿಗೆ, ಅಸಲಿ ರೆಮ್‌ಡಿಸಿವಿರ್ ಎಂದು ಹೇಳಿ ದುಬಾರಿಗೆ ಬೆಲೆಗೆ ನಕಲಿ ಚುಚ್ಚುಮದ್ದು ಮಾರುತ್ತಿದ್ದರು’ ಎಂದೂ ತಿಳಿಸಿದರು.

ಆಸ್ಪತ್ರೆಯಲ್ಲಿ ಕೆಲಸ: ‘ಬಂಧಿತ ಆರೋಪಿ ರವಿಕುಮಾರ್, ಈ ಹಿಂದೆ ವಿಕ್ಟೋರಿಯಾ, ಅಪೊಲೊ, ರಾಮಕೃಷ್ಣ ಹಾಗೂ ಶ್ರೀ ವೆಂಕಟೇಶ್ವರ ಆಸ್ಪತ್ರೆಯಲ್ಲಿ ವಾರ್ಡ್ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಆರೋಪಿ ಮುನಿರಾಜು, ಓವಮ್ ವುಮೆನ್ ಮತ್ತು ಚೈಲ್ಡ್ ಕೇರ್ ಆಸ್ಪತ್ರೆಯ ಮಾರ್ಕೆಟಿಂಗ್ ವ್ಯವಸ್ಥಾಪಕನಾಗಿದ್ದ’ ಎಂದು ಪೊಲೀಸರು ಹೇಳಿದರು.

‘ನಕಲಿ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಆರೋಪಿಗಳು ಹಲವರಿಗೆ ನೀಡಿದ್ದಾರೆ. ಕೆಲ ಸೋಂಕಿತರ ಚಿಕಿತ್ಸೆಗೆ ಅದನ್ನೇ ಬಳಸಿರುವ ಮಾಹಿತಿಯೂ ಇದೆ’ ಎಂದೂ ತಿಳಿಸಿದರು.

ರೆಮ್‌ಡಿಸಿವಿರ್ ಜಪ್ತಿ; ವೈದ್ಯ ಸೇರಿ ಇಬ್ಬರ ಬಂಧನ

ಕೊರೊನಾ ಸೋಂಕಿತರಿಗಾಗಿ ಸರ್ಕಾರ ನೀಡಿದ್ದ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಸಂಗ್ರಹಿಸಿಟ್ಟುಕೊಂಡು ದುಬಾರಿಗೆ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪದಡಿ ವೈದ್ಯ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಮಾತೃ ಆಸ್ಪತ್ರೆಯ ವೈದ್ಯ ಡಾ. ಸಿ.ಜಿ.ಸಾಗರ್ (38) ಹಾಗೂ ಹೊಸೂರು ರಸ್ತೆಯ ಮಾತೃ ಮತ್ತು ವೆಂಕಟೇಶ್ವರ ಆಸ್ಪತ್ರೆಯ ಹೌಸ್ ಕೀಪಿಂಗ್ ವ್ಯವಸ್ಥಾಪಕ ಕೃಷ್ಣ ಬಂಧಿತರು. ಅವರಿಂದ ಚುಚ್ಚುಮದ್ದಿನ 2 ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸೋಂಕಿತರಿಗೆ ನೀಡಲು ಸರ್ಕಾರದಿಂದ ಚುಚ್ಚುಮದ್ದು ಕೊಡಲಾಗಿತ್ತು. ಅದನ್ನು ಸೋಂಕಿತರಿಗೆ ನೀಡದೇ ತಮ್ಮ ಬಳಿಯೇ ಉಳಿಸಿಕೊಂಡಿದ್ದ ಆರೋಪಿಗಳು, ದುಬಾರಿ ಬೆಲೆಗೆ ಮಾರುತ್ತಿದ್ದರು’ ಎಂದೂ ತಿಳಿಸಿದರು.

ಸೋಂಕಿತರಿಗೆ ಹೋಳಿಗೆ ಊಟ ಬಡಿಸಿದ ರೇಣುಕಾಚಾರ್ಯ

ಹೊನ್ನಾಳಿ: ‘ಕೋವಿಡ್ ಸೋಂಕಿತರ ನೋವಿನಲ್ಲಿ ಭಾಗಿಯಾಗುವುದು ನನ್ನ ಕರ್ತವ್ಯ. ಹೀಗಾಗಿ ಬಸವ ಜಯಂತಿ ಅಂಗವಾಗಿ ಸೋಂಕಿತರಿಗೂ ಹೋಳಿಗೆ ಊಟ ನೀಡುವ ಮೂಲಕ ಅವರ ನೋವಿನಲ್ಲಿ ಭಾಗಿಯಾಗಿದ್ದೇವೆ’ ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಕೋವಿಡ್ ಸೋಂಕಿತರು, ನ್ಯಾಮತಿ ತಾಲ್ಲೂಕಿನ ಮಾದನಬಾವಿಯ ಕೋವಿಡ್ ಕೇರ್ ಸೆಂಟರ್‌ನಲ್ಲಿರುವ ಸೋಂಕಿತರು, ಅವಳಿ ತಾಲ್ಲೂಕಿನ ಕರೊನಾ ವಾರಿಯರ್‌ಗಳು, ಪೊಲೀಸ್ ಸಿಬ್ಬಂದಿ, ವೈದ್ಯರು, ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿ, ಪೌರಕಾರ್ಮಿಕರು, ತಾಲ್ಲೂಕು ಆಡಳಿತ ಹಾಗೂ ಅವಳಿ ತಾಲ್ಲೂಕಿನ ಚೆಕ್ ಪೋಸ್ಟ್‌ನಲ್ಲಿರುವ ಎಲ್ಲಾ ಸಿಬ್ಬಂದಿಗೆ ತಮ್ಮ ಮನೆಯಲ್ಲಿಯೇ ತಯಾರಿಸಿದ ಹೋಳಿಗೆ ಊಟವನ್ನು ವಿತರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ನೂರಾರು ಜನರಿಗೆ ಲಸಿಕೆ: ನಗರದ ಅಂಬೇಡ್ಕರ್ ಭವನದಲ್ಲಿರುವ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕರು, 45 ವರ್ಷ ಮೇಲ್ಪಟ್ಟವರಿಗೆ ಎರಡನೇ ಹಂತದ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯನ್ನು ಖುದ್ದು ನಿಂತು ಕೊಡಿಸಿದರು.

ಯಲಹಂಕ: ಸರ್ಕಾರಿ ಆಸ್ಪತ್ರೆಗೆ ಸಲಕರಣೆ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಯಲಹಂಕ: ಮಧುರಮಿಲನ ಸಮೂಹದ ಅಧ್ಯಕ್ಷ ವೈ.ಕೆ.ಸುರೇಶ್ ಕುಮಾರ್ ಮತ್ತು ಕುಟುಂಬದವರು ಕಾಕೋಳು ಕೆಂಪಣ್ಣನವರ ಸ್ಮರಣಾರ್ಥವಾಗಿ ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ಸುಮಾರು ₹1 ಲಕ್ಷ ವೆಚ್ಚದ ಸಲಕರಣೆಗಳನ್ನು ದಾನವಾಗಿ ನೀಡಿದರು.

ಆಸ್ಪತ್ರೆಗೆ ಅಗತ್ಯವಿದ್ದ ಹಾಸಿಗೆ, ಮಂಚ, ವೀಲ್‌ಚೇರ್ ಹಾಗೂ ಸ್ಟ್ರೆಚರ್‌ಗಳನ್ನು ಶಾಸಕ ಎಸ್.ಆರ್.ವಿಶ್ವನಾಥ್ ಮೂಲಕ ಆಸ್ಪತ್ರೆಯ ವೈದ್ಯರಿಗೆ ಹಸ್ತಾಂತರಿಸಲಾಯಿತು.

ಈ ವೇಳೆ ಮಾತನಾಡಿದ ವಿಶ್ವನಾಥ್, ’ಆಸ್ಪತ್ರೆಗೆ ಅವಶ್ಯಕತೆಯಿದ್ದ ಕೆಲವು ಸಲಕರಣೆಗಳನ್ನು ನೀಡಬೇಕೆಂದು ಕೇಳಿದ ತಕ್ಷಣ ಸುರೇಶ್ ಮತ್ತು ಕುಟುಂಬದವರು, ಸಂಕಷ್ಟಕಾಲದಲ್ಲಿ ಸಲಕರಣೆಗಳನ್ನು ದಾನವಾಗಿ ನೀಡಿರುವುದು ಶ್ಲಾಘನೀಯ ಕಾರ್ಯ‘ ಎಂದರು.

ಆಸ್ಪತ್ರೆಯಲ್ಲಿ 14 ಐಸಿಯು ಬೆಡ್‌ಗಳ ಸಾಮರ್ಥ್ಯವುಳ್ಳ ವಾರ್ಡ್ ನಿರ್ಮಾಣ ಕಾರ್ಯವನ್ನು ಪರಿಶೀಲಿಸಿದ ವಿಶ್ವನಾಥ್, ’ಈಗಾಗಲೇ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸುವ ಕಾರ್ಯ ಪೂರ್ಣಗೊಂಡಿದೆ. ವೆಂಟಿಲೇಟರ್‌ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇನ್ನೊಂದು ವಾರದಲ್ಲಿ ರೋಗಿಗಳ ಚಿಕಿತ್ಸೆಗೆ ಐಸಿಯು ವಾರ್ಡ್ ಸಿದ್ಧವಾಗಲಿದೆ‘ ಎಂದು ತಿಳಿಸಿದರು.

ದಾನಿ ವೈ.ಕೆ.ಸುರೇಶ್ ಕುಮಾರ್, ಆಸ್ಪತ್ರೆಯ ಪ್ರಭಾರಿ ಆಡಳಿತ ವೈದ್ಯಾಧಿಕಾರಿ ಡಾ.ಚೇತನ್ ಕುಮಾರ್ ಕೆ. ಮತ್ತಿತರರು ಉಪಸ್ಥಿತರಿದ್ದರು.



ಶಾಸಕ ವಿಶ್ವನಾಥ್ ಅವರು ಸಲಕರಣೆಗಳನ್ನು ಆಸ್ಪತ್ರೆಯ ವೈದ್ಯರಿಗೆ ಹಸ್ತಾಂತರಿಸಿದರು. ದಾನಿ ವೈ.ಕೆ.ಸುರೇಶ್ ಕುಮಾರ್, ಆಸ್ಪತ್ರೆಯ ಪ್ರಭಾರಿ ಆಡಳಿತ ವೈದ್ಯಾಧಿಕಾರಿ ಡಾ.ಚೇತನ್ ಕುಮಾರ್ ಕೆ. ಇತರರು ಇದ್ದರು.

ಈದ್ ಉಲ್ ಫಿತ್ರ್ ಸರಳ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್ ಉಲ್ ಫಿತ್ರ್ ಎಂದರೆ ಗಿಜಿಗುಡುತ್ತಿದ್ದ ಈದ್ಗಾ ಮೈದಾನಗಳು, ಮಸೀದಿಗಳು ಈ ವರ್ಷ ಬಿಕೋ ಎನ್ನುತ್ತಿದ್ದವು. ಲಾಕ್‌ಡೌನ್ ಇರುವ ಕಾರಣ ಸಾಮೂಹಿಕ ಪ್ರಾರ್ಥನೆ ಇಲ್ಲದೆ ಸರಳವಾಗಿ ಮನೆ-ಮನೆಗಳಲ್ಲೇ ಈದ್ ಉಲ್ ಫಿತ್ರ್ ಆಚರಿಸಲಾಯಿತು.

ಪ್ರತಿ ಬಾರಿಯ ಈದ್ ಉಲ್ ಫಿತ್ರ್ ಸಂದರ್ಭದಲ್ಲಿ ಈದ್ಗಾ ಮೈದಾನಗಳು ತುಂಬಿ ತುಳುಕುತ್ತಿದ್ದವು. ಚಾಮರಾಜಪೇಟೆಯ ಈದ್ಗಾ ಮೈದಾನ, ವಿಲ್ಸನ್ ಗಾರ್ಡನ್‌ನ ರೆಡ್ ಫೋರ್ಟ್ ಮೈದಾನ, ಶಿವಾಜಿನಗರ, ಮಿನರ್ವ ವೃತ್ತ, ಮೈಸೂರು ರಸ್ತೆ ಹಾಗೂ ಮತ್ತಿತರ ಮಸೀದಿಗಳಲ್ಲಿ ಕಿಕ್ಕಿರಿದು ನೆರೆದು ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಗುತ್ತಿತ್ತು.

ಕೋವಿಡ್ ಕಾರಣ ಸಾಮೂಹಿಕ ಪ್ರಾರ್ಥನೆ ನಿಷೇಧಿಸಲಾಗಿತ್ತು. ಲಾಕ್‌ಡೌನ್ ಇರುವುದರಿಂದ ಯಾವುದೇ ಪ್ರಾರ್ಥನಾ ಮಂದಿರಗಳಿಗೆ ಜನರಿಗೆ ಪ್ರವೇಶ ಇರಲಿಲ್ಲ. ಮಸೀದಿಗಳಲ್ಲಿ ಇರುವ ಮೌಲ್ವಿಗಳು ಸೇರಿ ನಾಲ್ಕೈದು ಮಂದಿ ಮಾತ್ರ ಅಲ್ಲಿ ಪ್ರಾರ್ಥನೆ ಸಲ್ಲಿಸಿದರೆ, ಉಳಿದವರು ಮನೆಯಲ್ಲೇ, ಮನೆಗಳ ಮಹಡಿಗಳ ಮೇಲೆ ಕುಟುಂಬ ಸದಸ್ಯರ ಜತೆ ಸೇರಿ ಪ್ರಾರ್ಥನೆ ಸಲ್ಲಿಸಿದರು. ಹೊಸ ಬಟ್ಟೆಗಳನ್ನು ಧರಿಸಿ ಶುಭಾಶಯ ವಿನಿಯಮ ಮಾಡಿಕೊಂಡರು.

ಬಿರಿಯಾನಿ, ಹಲೀಮ್, ಕಬಾಬ್, ಕೀಮಾ ಸಮೋಸ, ಶೀರ್ ಕುರ್ಮಾ, ಫ್ರುಟ್ ಸಲಾಡ್ ಹಾಗೂ ಇತರ ತಿನಿಸುಗಳನ್ನು ಮಾಡಿಕೊಂಡು ಮನೆಯಲ್ಲೇ ಸವಿದರು. ಸ್ನೇಹಿತರು, ಸಂಬಂಧಿಕರನ್ನು ಕರೆಯುವುದು ಕಡಿಮೆಯಾಗಿತ್ತು. ಆದರೂ, ಅತೀ ಹತ್ತಿರದವರನ್ನು ಮನೆಗೆ ಕರೆದು ಒಟ್ಟಿಗೆ ಕುಳಿತು ಊಟ ಮಾಡಿದರು. ಸಾಮಾಜಿಕ ಜಾಲತಾಣಗಳ ಮೂಲಕ ದೂರದ ಸಂಬಂಧಿಕರನ್ನು ಸಂಪರ್ಕಿಸಿ ಶುಭಾಶಯ ವಿನಿಮಯ ಮಾಡಿಕೊಂಡರು.

‘ಲಾಕ್‌ಡೌನ್ ಇರುವುದರಿಂದ ಮಸೀದಿ, ಈದ್ಗಾಗಳಿಗೆ ತೆರಳದೆ ಮನೆಯಲ್ಲೇ ಕುಟುಂಬ ಸದಸ್ಯರು ಸೇರಿ ಹಬ್ಬ ಆಚರಿಸಲಾಯಿತು’ ಎಂದು ಬಿಬಿಎಂಪಿ ಮಾಜಿ ಸದಸ್ಯ ಅಬ್ದುಲ್ ವಾಜಿದ್ ತಿಳಿಸಿದರು.



ನಗರದ ರೋಷನ್ ಮಸೀದಿ ಹಾಗೂ ದರ್ಗಾ ಹಜರತ್ ಸಾದಿಕ್ ಅಲಿ ಷಾ ಧಾರ್ಮಿಕ ಕೇಂದ್ರದಲ್ಲಿ ಶುಕ್ರವಾರ ಪ್ರಾರ್ಥನೆ ನಡೆಯಿತು

ಉಪಕರಣಗಳ ದರ ಸ್ಥಿರತೆ: ಮಧ್ಯಪ್ರವೇಶಕ್ಕೆ ಚೀನಾ ನಕಾರ

ನವದೆಹಲಿ: ವೆಂಟಿಲೇಟರ್, ಆಮ್ಲಜನಕ ಸಾಂದ್ರಕಗಳು ಮತ್ತು ಇತರ ವೈದ್ಯಕೀಯ ಉಪಕರಣಗಳ ಬೆಲೆಗಳ ಸ್ಥಿರತೆ ಕಾಪಾಡಲು ಮಧ್ಯಪ್ರವೇಶಿಸಬೇಕು ಎನ್ನುವ ಭಾರತದ ಕೋರಿಕೆಯನ್ನು ಚೀನಾ ತಳ್ಳಿ ಹಾಕಿದೆ.

ಮಾರುಕಟ್ಟೆ ಮೇಲೆ ಬೆಲೆಗಳು ಅವಲಂಬನೆಯಾಗಿವೆ. ಬೇಡಿಕೆ ಮತ್ತು ಪೂರೈಕೆಯು ಉತ್ಪನ್ನಗಳ ಬೆಲೆಗಳನ್ನು ನಿರ್ಧರಿಸುತ್ತವೆ ಎಂದು ಚೀನಾ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವೈದ್ಯಕೀಯ ಉಪಕರಣಗಳ ಬೆಲೆಗಳು ಹೆಚ್ಚುತ್ತಿವೆ. ಹೀಗಾಗಿ, ಚೀನಾ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಹಾಂಗ್‌ಕಾಂಗ್‌ನಲ್ಲಿನ ಭಾರತದ ಕಾನ್ಸುಲ್ ಜನರಲ್ ಪ್ರಿಯಾಂಕ್ ಚೌಹಾಣ್ ಅವರು ಕೋರಿದ್ದರು.

‘ಆಮ್ಲಜನಕ ಸಾಂದ್ರಕಗಳಿಗೆ ಬೇಡಿಕೆ ಹೆಚ್ಚಾಗಿದೆ. ಇದೇ ರೀತಿ ಕೋವಿಡ್–19ಗೆ ಸಂಬಂಧಿಸಿದಂತೆ ಇತರ ವೈದ್ಯಕೀಯ ಉಪಕರಣಗಳ ಬೆಲೆಗಳು ಹೆಚ್ಚಾಗಿವೆ. ಜತೆಗೆ, ಯುರೋಪ್‌ನಿಂದ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಆದರೆ, ಈ ಕಚ್ಚಾ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಹೀಗಾಗಿ, ಚೀನಾದಲ್ಲಿ ವೈದ್ಯಕೀಯ ಉಪಕರಣಗಳ ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ’ ಎಂದು ಚೀನಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರಾದ ಹುವಾ ಚುನ್ಯಿಂಗ್ ತಿಳಿಸಿದ್ದಾರೆ.



ಕಾನ್‌ಸ್ಟೆಬಲ್ ಮೇಲೆ ಹಲ್ಲೆ: 21 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಮಖಂಡಿ ನಗರದಲ್ಲಿ ಶುಕ್ರವಾರ ರಂಜಾನ್ ಆಚರಣೆ ವೇಳೆ ಕೋವಿಡ್ ನಿಯಮಾವಳಿ ಉಲ್ಲಂಘಿಸಿ ಒಂದೇ ಕಡೆ ಗುಂಪು ಸೇರಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ವಿಡಿಯೊ ಮಾಡಲು ಮುಂದಾದ ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆದಿದೆ.

ನಗರದ ಹನುಮಾನ್ ಚೌಕದ ಬಳಿ ಬೆಳಿಗ್ಗೆ ಮುಸ್ಲಿಮರು ಗುಂಪು ಸೇರಿದ್ದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಕಾನ್‌ಸ್ಟೆಬಲ್ ವಿಡಿಯೊ ಮಾಡಲು ಮುಂದಾಗಿದ್ದಾರೆ. ಈ ವೇಳೆ ಗುಂಪಿನಲ್ಲಿದ್ದ ಕೆಲವರು ಕಾನ್‌ಸ್ಟೆಬಲ್ ಅವರನ್ನು ಬೆನ್ನಟ್ಟಿ ಹೋಗಿ ಮೊಬೈಲ್‌ಫೋನ್ ಕಸಿದು ಹಲ್ಲೆ ನಡೆಸಿದ್ದಾರೆ. ಸ್ಥಳಕ್ಕೆ ಬಂದ ಇನ್ನಷ್ಟು ಪೊಲೀಸರು ಹಾಗೂ ಸ್ಥಳದಲ್ಲಿದ್ದ ಮುಸ್ಲಿಮ್ ಸಮಾಜದ ಹಿರಿಯರು ಪರಿಸ್ಥಿತಿ ತಹಬಂದಿಗೆ ತಂದಿದ್ದಾರೆ.

ಕಾನ್‌ಸ್ಟೆಬಲ್ ಅವರನ್ನು ಬೆನ್ನಟ್ಟಿ ಗುಂಪು ಹೊರಟಿರುವ ವಿಡಿಯೊ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

21 ಮಂದಿ ಬಂಧನ: ‘ಪ್ರಕರಣಕ್ಕೆ ಸಂಬಂಧಿಸಿದಂತೆ 21 ಮಂದಿಯನ್ನು ಬಂಧಿಸಲಾಗಿದೆ. ಹಲ್ಲೆ ಘಟನೆಯ ವಿಡಿಯೊ ಪರಿಶೀಲಿಸಿ ಇನ್ನಷ್ಟು ಮಂದಿಯ ಬಂಧನ ಕಾರ್ಯಾಚರಣೆ ಮುಂದುವರಿದಿದೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿ, ದೊಂಬಿ ಹಾಗೂ ಹಲ್ಲೆ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ್ ತಿಳಿಸಿದ್ದಾರೆ.

ಮಾರಾಟ ಮಾಡಲು ಸಾಧ್ಯವಾಗದೆ ಹೆಣಗಾಡುತ್ತಿರುವ ವರ್ತಕರು

ಎಪಿಎಂಸಿಯಲ್ಲಿ ಕೊಳೆಯುತ್ತಿರುವ ಆಲೂಗಡ್ಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಕಾರಣದಿಂದ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ(ಎಪಿಎಂಸಿ) ಆಲೂಗಡ್ಡೆ ಮಾರಾಟವಾಗದೆ ಕೊಳೆಯಲಾರಂಭಿಸಿದೆ.

ಲಾಕ್‌ಡೌನ್ ಆರಂಭವಾದ ಬಳಿಕ ಈರುಳ್ಳಿ ಮತ್ತು ಆಲೂಗಡ್ಡೆ ವಹಿವಾಟನ್ನು ದಾಸನಪುರ ಎಪಿಎಂಸಿಗೆ ಸ್ಥಳಾಂತರ ಮಾಡಲಾಗಿದೆ. ಬೆಳಿಗ್ಗೆ 6ರಿಂದ 10ರ ತನಕ ಮಾತ್ರ ವಹಿವಾಟಿಗೆ ಅವಕಾಶ ಕಲ್ಪಿಸಲಾಗಿದೆ. ಈ ಸಂದರ್ಭದಲ್ಲಿ ಆಲೂಗಡ್ಡೆ ಮಾರಾಟವಾಗದೆ ಕೊಳೆಯುತ್ತಿದೆ.

ಎಪಿಎಂಸಿ ಮಾರುಕಟ್ಟೆಯಲ್ಲಿ ದಾಸ್ತಾನು ಮಳಿಗೆ ಹೊಂದಿರುವ ವರ್ತಕರು ದಾಸನಪುರಕ್ಕೆ ಕೊಂಡೊಯ್ದು ಮಾರಾಟ ಮಾಡಲು ಸಾಧ್ಯವಾಗದೆ ಹೆಣಗಾಡುತ್ತಿದ್ದಾರೆ. ಮಹೇಶ್ ಎಂಬ ವರ್ತಕರ 60 ಚೀಲದಷ್ಟು ಆಲೂಗಡ್ಡೆ ಕೊಳೆತು ಹೋಗಿದ್ದು, ಅಳಿದುಳಿದ ಆಲೂಗಡ್ಡೆ ಬೇರ್ಪಡಿಸುವ ಕಾರ್ಯದಲ್ಲಿ ಶುಕ್ರವಾರ ನಿರತರಾಗಿದ್ದರು.

‘ಮಾರುಕಟ್ಟೆ ಸ್ಥಳಾಂತರ, ಲಾಕ್‌ಡೌನ್ ಕಾರಣದಿಂದ ಹೋಟೆಲ್‌ಗಳು, ಚಿಪ್ಸ್ ಅಂಗಡಿಗಳು, ಶುಭ ಕಾರ್ಯಗಳು ಬಂದ್ ಆಗಿವೆ. ಇನ್ನೊಂದೆಡೆ, ಆಲೂಗಡ್ಡೆಯನ್ನು ಆಹಾರಕ್ಕೆ ಹೆಚ್ಚಾಗಿ ಬಳಕೆ ಮಾಡುವ ಉತ್ತರ ಭಾರತದ ಕಾರ್ಮಿಕರು ತಮ್ಮೂರಿಗೆ ತೆರಳಿದ್ದಾರೆ. ಈ ಎಲ್ಲ ಕಾರಣಗಳಿಂದ ಆಲೂಗಡ್ಡೆ ಮಾರಾಟವಾಗದೆ ಉಳಿಯುತ್ತಿದೆ’ ಎಂದು ಮಹೇಶ್ ಹೇಳಿದರು.

‘ಆಲೂಗಡ್ಡೆ ಮತ್ತು ಈರುಳ್ಳಿ ವರ್ತಕರನ್ನು ಮೂಲೆಗುಂಪು ಮಾಡುವ ಪ್ರಯತ್ನ ನಡೆಯುತ್ತಿದೆ. ಅಕ್ಕಿ-ಬೇಳೆ ಸೇರಿ ದಿನಸಿ ಅಂಗಡಿಗಳಿಗೆ ಯಶವಂತಪುರದಲ್ಲೇ ಅವಕಾಶ ಕಲ್ಪಿಸಲಾಗಿದೆ. ದಿನಸಿ ಖರೀದಿಗೆ ಬರುವವರು ಪಕ್ಕದಲ್ಲೇ ಆಲೂಗೆಡ್ಡೆ, ಈರುಳ್ಳಿ ಸಿಕ್ಕರೆ ಕೊಂಡೊಯ್ಯುತ್ತಾರೆ. ದಾಸನಪುರಕ್ಕೆ ಬಂದು ಹೋಗುವುದು ಖರೀದಿ ಮಾಡುವವರಿಗೂ ತೊಂದರೆಯಾಗಿದೆ. ಪರಿಣಾಮವಾಗಿ ಆಲೂಗಡ್ಡೆ ಮಾರಾಟವಾಗದೆ ಉಳಿಯುತ್ತಿದೆ’ ಎಂದು ಈರುಳ್ಳಿ, ಆಲೂಗಡ್ಡೆ ವರ್ತಕರ ಸಂಘದ ಕಾರ್ಯದರ್ಶಿ ಉದಯಶಂಕರ್ ತಿಳಿಸಿದರು.



ಯಶವಂತಪುರ ಎಪಿಎಂಸಿ ಆವರಣದಲ್ಲಿ ಕೊಳೆಯುತ್ತಿರುವ ಆಲೂಗಡ್ಡೆಯನ್ನು ಬೇರ್ಪಡಿಸಿ ಒಣಗಿಸುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ



ಬಿಬಿಎಂಪಿ: ಯುವಜನರು, ಮಧ್ಯ ವಯಸ್ಕರ ಬದುಕಿಗೆ ಕೊಳ್ಳಿ ಇಡುತ್ತಿರುವ ಕೊರೊನಾ

ಸತ್ತವರಲ್ಲಿ ಶೇ20 ಮಂದಿ 50 ವರ್ಷ ಒಳಗಿನವರು

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಆ ಯುವತಿಯ ವಯಸ್ಸು ಕೇವಲ 26. ಹೆಸರು ನಾಗವೇಣಿ. ಮದುವೆಯಾಗಿ ಒಂದೂವರೆ ವರ್ಷಗಳಾಗಿವೆ ಅಷ್ಟೇ. ಬದುಕಿನ ಬಗ್ಗೆ ಬಣ್ಣ ಬಣ್ಣದ ಕನಸು ಕಂಡಿದ್ದ ಹುಡುಗಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಮುದ್ದಿನ ಮಡದಿಯನ್ನು ಉಳಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದ ಬಳಿಕ ಪತಿ ರವಿ ಕುಮಾರ್ ಹತಾಶರಾಗಿ ಕುಳಿತಿದ್ದಾರೆ... ಯಲಹಂಕದ ಕುಟುಂಬವೊಂದರ ಕರುಣಾಜನಕ ಪರಿಸ್ಥಿತಿ ಇದು.

'ರವಿ ಅವರಂತೂ ಪತ್ನಿಯನ್ನು ಉಳಿಸಿಕೊಳ್ಳಲು ನಾಲ್ಕೈದು ದಿನ ನಿದ್ದೆ ಬಿಟ್ಟು ಒದ್ದಾಡಿದ್ದಾರೆ. ಆಸ್ಪತ್ರೆಗೆ ದಾಖಲಿಸಿದ ಬಳಿಕವೂ ಆ ಹುಡುಗಿಯ ಆರೋಗ್ಯ ಹದಗೆಡುತ್ತಲೇ ಹೋಯಿತು. ಅದರೆ, ಆಕೆಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರು ತಿಳಿಸಿದರು. ಹೆಣಗಾಡಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಐಸಿಯು ಹಾಸಿಗೆ ಸಿಕ್ಕಿತು. ಅಲ್ಲೂ ಚಿಕಿತ್ಸೆಗೆ ಆಕೆ ಸ್ಪಂದಿಸಲಿಲ್ಲ. ವೆಂಟಿಲೇಟರ್ ಇರುವ ಐಸಿಯು ಅಗತ್ಯವಿದೆ ಎಂದು ವೈದ್ಯರು ಹೇಳಿದರು. ಸಾಕಷ್ಟು ಹುಡುಕಾಡಿದ ಬಳಿಕ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ವೆಂಟಿಲೇಟರ್ ಇರುವ ಹಾಸಿಗೆ ಸಿಕ್ಕಿತು. ಆದರೆ, ಆಕೆಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಪ್ರಕ್ರಿಯೆಗೆ ಮೂರು ತಾಸು ಬೇಕಾಯಿತು. ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ಕರೆದೊಯ್ದಾಗ ಆಕೆಯ ಪ್ರಾಣ ಪಕ್ಷಿಯೇ ಹಾರಿ ಹೋಗಿತ್ತು' ಎಂದು ದಂಪತಿಯ ಬಂಧುವೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಇದು ಕೇವಲ ನಾಗವೇಣಿಯೊಬ್ಬರ ಕತೆಯಲ್ಲ. ಆಕೆಯಂತಹ ಸಾವಿರಾರು ಜೀವಗಳು ಅಕಾಲಿಕ ಇಹಯಾತ್ರೆಯನ್ನು ಅರ್ಧದಲ್ಲೇ ಮುಗಿಸಿವೆ. ನಗರದಲ್ಲಿ ಶುಕ್ರವಾರದವರೆಗೆ (ಮೇ 14) ಕೋವಿಡ್‌ನಿಂದ 9,247 ಮಂದಿ ಕೊನೆಯುಸಿರೆಳೆದಿದ್ದಾರೆ. ಇವರಲ್ಲಿ ಶೇ 33ರಷ್ಟು ಮಂದಿ ಮಾತ್ರ 70 ವರ್ಷ (ಭಾರತೀಯರ ಸರಾಸರಿ ವಯಸ್ಸು) ಮೀರಿದವರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು ಕೋವಿಡ್ ಸಾವುಗಳಲ್ಲಿ 1,819 ಮಂದಿಯ ವಯಸ್ಸು 50 ದಾಟಿಲ್ಲ. 700 ಮಂದಿಯ ವಯಸ್ಸು 40 ಮೀರಿಲ್ಲ. 214 ಮಂದಿ ವಯಸ್ಸು 30ರ ಗಡಿ ದಾಡುವ ಮುನ್ನವೇ ಬದುಕಿಗೆ ವಿದಾಯ ಹೇಳಿದ್ದಾರೆ. 38 ಮಂದಿ ಹದಿಹರೆಯ ದಾಡುವ ಮುನ್ನವೇ ಇಹಲೋಕ ತ್ಯಜಿಸಿದ್ದಾರೆ. ಇನ್ನೂ ಆಡುವ ವಯಸ್ಸಿನಲ್ಲೇ ಬದುಕಿನ ಆಟ ಮುಗಿಸಿದ ಮಕ್ಕಳ ಸಂಖ್ಯೆ 19.

'ಕೋವಿಡ್ ಎರಡನೇ ಅಲೆ ಸಾಯುವ ವಯಸ್ಸೇ ಅಲ್ಲದವರನ್ನೂ ಸಾಕಷ್ಟು ಸಂಖ್ಯೆಯಲ್ಲಿ ಬಲಿ ಪಡೆದಿದೆ. ಮೊದಲ ಅಲೆಯಲ್ಲಿ ಸತ್ತವರಲ್ಲಿ ಯುವಕ ಯುವತಿಯರ ಸಂಖ್ಯೆ ತೀರಾ ಕಡಿಮೆ ಇತ್ತು, ನಡು ವಯಸ್ಕರು ಹಾಗೂ 60 ಮೀರಿದವರೇ ಹೆಚ್ಚಿನ ಸಂಖ್ಯೆಯಲ್ಲಿ ಸತ್ತಿದ್ದರು. ಆದರೆ, ಎರಡನೇ ಅಲೆಯಲ್ಲಿ ಕೋವಿಡ್‌ನಿಂದ ಸತ್ತವರಲ್ಲಿ ಶೇ 20ರಷ್ಟು ಮಂದಿ 50 ವರ್ಷ ಮೀರದವರು. ಅವರನ್ನು ಉಳಿಸಿಕೊಳ್ಳಲಾಗಲಿಲ್ಲವಲ್ಲ ಎಂಬುದು ತೀರಾ ಬೇಸರದ ಸಂಗತಿ' ಎಂದು ಬಿಬಿಎಂಪಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅಂಕಿ ಅಂಶ

10.29 ಲಕ್ಷ — ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ದೃಢಪಟ್ಟವರು

6.59 ಲಕ್ಷ — ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡವರು

64.04% ಲಕ್ಷ — ಕೋವಿಡ್‌ನಿಂದ ವಾಸಿಯಾಗುತ್ತಿರುವವರ ಪ್ರಮಾಣ

ಕೋವಿಡ್‌ನಿಂದ ಸತ್ತವರ ಲಿಂಗ/ವಯಸ್ಸಿನ ವಿವರ

ವಯಸ್ಸು	ಹೆಣ್ಣು	ಗಂಡು
9 ಮೇಲ್ಪಟ್ಟವರು	6	13
10-19	5	14
20-29	62	114
30-39	157	329
40-49	355	764
50-59	739	1,218
60-69	880	1,544
70ಕ್ಕಿಂತ ಹೆಚ್ಚು	1013	2030

'ಯುವಜನರ ಸಾವಿಗೆ 'ಹ್ಯಾಪಿ ಹೈಪೋಕ್ಸಿಯ' ಕಾರಣ'

'ಕೋವಿಡ್ ಎರಡನೇ ಅಲೆಯಲ್ಲಿ ಯುವಜನರೂ ಸಾಕಷ್ಟು ಸಂಖ್ಯೆಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ರಕ್ತದಲ್ಲಿ ಆಮ್ಲಜನಕ ಪ್ರಮಾಣ ಶೇ 80ರವರೆಗೆ ಇಳಿಕೆ ಕಂಡರೂ ಯುವಜನರಿಗೆ ಪಕ್ಕ ಗೊತ್ತಾಗುವುದಿಲ್ಲ. ಹಾಗಾಗಿ ಅವರು ತಮಗೇನೂ ಆಗಿಲ್ಲ ಎಂದು ನಿರಾತಂಕದಿಂದ ಇರುತ್ತಾರೆ. ಈ ಲಕ್ಷಣವನ್ನು 'ಹ್ಯಾಪಿ ಹೈಪೋಕ್ಸಿಯ' ಎನ್ನುತ್ತಾರೆ. ರಕ್ತದಲ್ಲಿ ಆಮ್ಲಜನಕ ಪ್ರಮಾಣ ದಿಢೀರ್ ಇಳಿಕೆ ಕಂಡಾಗ ತುರ್ತಾಗಿ ತೀವ್ರ ನಿಗಾ ವಹಿಸುವ ಅಗತ್ಯ ಇರುತ್ತದೆ. ಆದರೆ, ತುರ್ತಾಗಿ ಐಸಿಯು ಹಾಸಿಗೆ ಸಿಗದೇ ಹೋದರೆ ಸಾವು ಖಚಿತ' ಎಂದು ಬಿಬಿಎಂಪಿ ಅಧಿಕಾರಿ ವಿವರಿಸಿದರು.

'ಸಾವಿನ ದರ ಇಳಿಯಲಿದೆ'

'ನಗರದಲ್ಲಿ ಈಗಲೂ ಕೋವಿಡ್ ದೃಢಪಟ್ಟರ ಸಾವಿನ ದರ ಶೇ 1.07 ರಷ್ಟಿದೆ. ಇದು ಕಳೆದ ಜುಲೈನಲ್ಲಿ ಶೇ 1.84ರಷ್ಟಿತ್ತು. ಕಳೆದ ಎರಡು ದಿನಗಳಲ್ಲಿ ಸೋಂಕು ಪತ್ತೆಯಾದವರಿಗಿಂತ ರೋಗದಿಂದ ಚೇತರಿಸಿಕೊಂಡವರೇ ಹೆಚ್ಚು ಇತ್ತು. ಬುಧವಾರ 16,286 ಮಂದಿಯಲ್ಲಿ ಸೋಂಕು ಪತ್ತೆಯಾಗಿದ್ದರೆ 18,089 ಮಂದಿ ಗುಣಮುಖರಾಗಿದ್ದರು. ಗುರುವಾರ 15,191 ಮಂದಿಯಲ್ಲಿ ಸೋಂಕು ಪತ್ತೆಯಾಗಿದ್ದರೆ 16,084 ಮಂದಿಯಲ್ಲಿ ರೋಗ ವಾಸಿಯಾಗಿತ್ತು. ಸೋಂಕು ಪತ್ತೆ ಪ್ರಮಾಣವೂ ಐದು ದಿನಗಳಿಂದ ಕಡಿಮೆಯಾಗುತ್ತಿದೆ. ಇದು ಎರಡನೇ ಅಲೆಯ ತೀವ್ರತೆ ಕಡಿಮೆಯಾಗುವುದರ ಸೂಚನೆ. ಕ್ರಮೇಣ ಸಾವಿನ ದರವೂ ಇಳಿಯಲಿದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಆಶಾವಾದ ವ್ಯಕ್ತಪಡಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	16.23 ಕೋಟಿ ▲	2.43 ಕೋಟಿ ▲
ಸಕ್ರಿಯ ಪ್ರಕರಣ	1.86 ಕೋಟಿ ▲	36.72 ಲಕ್ಷ ▼
ಗುಣಮುಖ	14.01 ಕೋಟಿ ▲	2.04 ಕೋಟಿ ▲
ಸಾವು	33.65 ಲಕ್ಷ ▲	2.66 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.46 ಲಕ್ಷ ▼	3.22 ಲಕ್ಷ ▲
ಗುಣಮುಖ	8.11 ಲಕ್ಷ ▼	3.45 ಲಕ್ಷ ▲
ಸಾವು	13,427	3,800 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

75,151 ▲ ಬ್ರೆಜಿಲ್; 39,825 ▲ ಅಮೆರಿಕ; 19,416 ▲ ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

63.60 ▼ ಅಮೆರಿಕ; 10.26 ▲ ಬ್ರೆಜಿಲ್; 7.34 ▼ ಫ್ರಾನ್ಸ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

79,552 ▲ ಮಹಾರಾಷ್ಟ್ರ; 17,056 ▲ ತಮಿಳುನಾಡು; 20,907 ▲ ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

53.09 ಮಹಾರಾಷ್ಟ್ರ ▲; 20.85 ಕೇರಳ ▲; 15.96 ಉತ್ತರ ಪ್ರದೇಶ ▲

ಪ್ರಜಾವಾಣಿ ಗ್ರಾಫಿಕ್ಸ್

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಹಾಸಿಗೆ ಹಂಚಿಕೆಗೆ ಕೋವಿಡ್ ಸೋಂಕಿತರ ಭೌತಿಕ ಪರೀಕ್ಷೆ : ಗೌರವ್ ಗುಪ್ತ

ಚಿಕಿತ್ಸೆ ನಿರ್ಧಾರ ಕೇಂದ್ರಗಳ ಸಂಖ್ಯೆ 60ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಬಳಲುವವರಿಗೆ ಯಾವ ರೀತಿಯ ಚಿಕಿತ್ಸೆ ಅಗತ್ಯವಿದೆ ಎಂಬುದನ್ನು ನಿರ್ಧರಿಸಲು ನಗರದ 26 ಕಡೆ ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು ಆರಂಭಿಸಲಾಗಿದೆ. ಈ ಕೇಂದ್ರಗಳ ವೈದ್ಯರು ರೋಗಿಗಳನ್ನು ಭೌತಿಕವಾಗಿ ತಪಾಸಣೆ ಮಾಡಿ ಆಸ್ಪತ್ರೆಗಳಲ್ಲಿ ಸೂಕ್ತ ಹಾಸಿಗೆ ಸೌಲಭ್ಯ ಒದಗಿಸಲು ಶಿಫಾರಸು ಮಾಡಲಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಇಲ್ಲಿ ಮಾತನಾಡಿದ ಅವರು, 'ಮೊದಲ ಹಂತದಲ್ಲಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಿರ್ಧಾರ ಕೇಂದ್ರಗಳನ್ನು ಆರಂಭಿಸಿದ್ದೇವೆ. ಚಿಕಿತ್ಸೆ ನಿರ್ಧಾರ ಕೇಂದ್ರಗಳ ಸಂಖ್ಯೆಯನ್ನು ಶೀಘ್ರವೇ 60ಕ್ಕೆ ಹೆಚ್ಚಿಸಲಾಗುತ್ತದೆ. ಪ್ರತಿ ವಾರ್ಡ್‌ನಲ್ಲೂ ಇಂತಹ ಕೇಂದ್ರಗಳನ್ನು ಆರಂಭಿಸುವ ಚಿಂತನೆ ಹೊಂದಿದ್ದೇವೆ' ಎಂದು ತಿಳಿಸಿದರು.

'ನಾಗರಿಕರು ಕೊರೊನಾ ಸೋಂಕಿತರನ್ನು ಪಾಲಿಕೆಯ ಸಹಾಯವಾಣಿಗೆ ಕರೆ ಮಾಡದೆಯೇ ನೇರವಾಗಿ ಚಿಕಿತ್ಸೆ ನಿರ್ಧಾರ ಕೇಂದ್ರಗಳಿಗೆ ಕರೆದೊಯ್ಯಬಹುದು. ಸೋಂಕಿತರ ಆರೋಗ್ಯ ಸ್ಥಿತಿಯನ್ನು ಅವಲೋಕಿಸಿ ವೈದ್ಯರು ಅಗತ್ಯ ಸಲಹೆ ನೀಡಲಿದ್ದಾರೆ. ಅವರು ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದು ಆರೈಕೆ ಪಡೆಯಬೇಕೇ, ಕೋವಿಡ್ ಆರೈಕೆ ಕೇಂದ್ರದಲ್ಲಿ ಅಥವಾ ಹೆರಿಗೆ ಆಸ್ಪತ್ರೆಗಳಲ್ಲಿ ಸ್ಥಾಪಿಸಿರುವ ಸ್ಥಿರೀಕರಣ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯಬೇಕೇ ಎಂದು ಶಿಫಾರಸು ಮಾಡಲಿದ್ದಾರೆ. ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದರೆ ಆಸ್ಪತ್ರೆಗೆ ದಾಖಲಿಸುವುದಕ್ಕೂ ವ್ಯವಸ್ಥೆ ಕಲ್ಪಿಸಲಿದ್ದಾರೆ' ಎಂದರು.

'ಚಿಕಿತ್ಸೆ ನಿರ್ಧಾರ ಕೇಂದ್ರಗಳಲ್ಲಿ ಹಾಸಿಗೆಗಳು ಹಾಗೂ ಆಮ್ಲಜನಕ ಪೂರೈಕೆ ವ್ಯವಸ್ಥೆ ಕಲ್ಪಿಸಲಾಗಿದೆ. ತುರ್ತು ಸೇವೆಗೆ ವೈದ್ಯರನ್ನು, ಶುಶ್ರೂಷಕರನ್ನೂ ನಿಯೋಜಿಸಲಾಗಿದೆ. ವೈದ್ಯಕೀಯ ತಪಾಸಣೆಗಾಗಿ ಉಷ್ಣತಾ ಮಾಪಕ, ಪಲ್ಸ್ ಆಕ್ಸಿಮೀಟರ್ ಹಾಗೂ ಅವಶ್ಯಕ ಔಷಧ ಪೂರೈಸಲಾಗಿದೆ. ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುವ ಪ್ರತ್ಯೇಕ ದೂರವಾಣಿ ಸಂಪರ್ಕ ಸಂಖ್ಯೆಯನ್ನು ಒದಗಿಸಲಾಗಿದೆ' ಎಂದರು.


ವಿಶೇಷ ಆಯುಕ್ತ ರಂದೀಪ್, 'ಇದುವರೆಗೂ ಕೋವಿಡ್ ಸೋಂಕಿತರಿಗೆ ಹಾಸಿಗೆ ಕಾಯ್ದಿರಿಸುವ ಬಗ್ಗೆ ವಾರ್ ರೂಂನ ಸಹಾಯವಾಣಿ ಮೂಲಕ ದೂರವಾಣಿ ಕರೆ ಆಧರಿಸಿ ವೈದ್ಯರ ತಂಡವು ನಿರ್ಧರಿಸುತ್ತಿತ್ತು. ಆದರೆ, ಇನ್ನು ಚಿಕಿತ್ಸೆ ನಿರ್ಧಾರ ಕೇಂದ್ರಗಳಲ್ಲಿ ಭೌತಿಕವಾಗಿ ತಪಾಸಣೆ ನಡೆಸಿದ ಬಳಿಕವೇ ಈ ಕುರಿತ ನಿರ್ಧಾರ ಕೈಗೊಳ್ಳಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

'ಚಿಕಿತ್ಸಾ ನಿರ್ಧಾರ ಕೇಂದ್ರಗಳು ಕೋವಿಡ್ ಆರೈಕೆ ಕೇಂದ್ರಗಳೊಂದಿಗೆ ಜೋಡಣೆಗೊಂಡಿವೆ. ಇಲ್ಲಿ ಆಮ್ಲಜನಕ ಸಾಂದ್ರಕಗಳು, ಆಮ್ಲಜನಕ ಪೂರೈಕೆ ವ್ಯವಸ್ಥೆ ಇರಲಿದೆ. ರೋಗಿಯ ರಕ್ತದಲ್ಲಿ ಆಮ್ಲಜನಕ ಮಟ್ಟ 85ರವರೆಗೆ ಇಳಿದಿದ್ದರೂ ಈ ಕೇಂದ್ರಗಳಲ್ಲೇ ಆಮ್ಲಜನಕ ಪೂರೈಕೆ ಮಾಡುವ ಮೂಲಕ ಸ್ಥಿರೀಕರಿಸಬಹುದು. ಸೋಂಕಿತರಿಗೆ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆಯಿದ್ದರೆ ವಾರ್ ರೂಂಗೆ ಕರೆ ಮಾಡಿ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲು ವ್ಯವಸ್ಥೆ ಕಲ್ಪಿಸಲಾಗುತ್ತದೆ' ಎಂದು ಅವರು ವಿವರಿಸಿದರು.

'ಯಾವುದೇ ರೋಗಿಗೆ ಉನ್ನತ ಚಿಕಿತ್ಸೆಯ ಅಗತ್ಯವನ್ನು ತ್ವರಿತವಾಗಿ ಪತ್ತೆ ಹಚ್ಚುವುದು ನಮ್ಮ ಉದ್ದೇಶ. ತೀವ್ರ ಅವಲಂಬನೆಯ ಘಟಕ (ಎಚ್‌ಡಿಯು) ಅಥವಾ ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆ ಲಭ್ಯವಾದ ತಕ್ಷಣ ರೋಗಿಗಳನ್ನು ಆದ್ಯತೆ ಆಧಾರದಲ್ಲಿ ಅಲ್ಲಿಗೆ ವರ್ಗಾಯಿಸಲಾಗುತ್ತದೆ. ಆಯುಷ್ ಆಸ್ಪತ್ರೆಗಳನ್ನು ಹಾಗೂ ಹಾಸಿಗೆ ಸೌಲಭ್ಯ ಇರುವ ಆಸ್ಪತ್ರೆಗಳನ್ನೂ ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುತ್ತದೆ' ಎಂದರು.

ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, 'ಚಿಕಿತ್ಸೆ ನಿರ್ಧಾರ ಕೇಂದ್ರದಲ್ಲಿ ತಲಾ ಮೂವರು ವೈದ್ಯರು ಹಾಗೂ ಶುಶ್ರೂಷಕರು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದ್ದಾರೆ. 256 ವೈದ್ಯರು ಮತ್ತು ಶುಶ್ರೂಷಕರನ್ನು ನಿಯೋಜಿಸಲಾಗಿದೆ. ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳನ್ನೇ ಚಿಕಿತ್ಸಾ ನಿರ್ಧಾರ ಕೇಂದ್ರಗಳ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಮನೆಯಲ್ಲೇ ಆರೈಕೆ ಪಡೆಯುವವರಿಗೆ ಈ ಕೇಂದ್ರಗಳಲ್ಲೇ ಔಷಧ ಕಿಟ್ ಒದಗಿಸಲಾಗುತ್ತದೆ' ಎಂದು ತಿಳಿಸಿದರು.

ಜಂಟಿ ಆಯುಕ್ತ ಸರ್ಫರಾಜ್ ಖಾನ್, ಮುಖ್ಯ ಆರೋಗ್ಯಾಧಿಕಾರಿಗಳಾದ ಡಾ.ಬಿ.ಕೆ.ವಿಜಯೇಂದ್ರ (ಸಾರ್ವಜನಿಕ ಆರೋಗ್ಯ), ಡಾ.ನಿರ್ಮಲಾ ಬುಗ್ಗಿ (ಕ್ಲಿನಿಕಲ್) ಉಪಸ್ಥಿತರಿದ್ದರು.



ಉಸಿರಾಟ ಸಮಸ್ಯೆಯಿಂದ ಬಳಲುತ್ತಿರುವ ಸೋಂಕಿತರಿಗಾಗಿ ಇಂಡಿಯಾ ಫೌಂಡೇಷನ್ ವತಿಯಿಂದ ಬಿಎಂಟಿಸಿ ಸಿಬ್ಬಂದಿ ಸಹಕಾರದೊಂದಿಗೆ 'ದಿ ಆಕ್ಸಿಜನ್ ಆನ್ ವ್ಹೀಲ್ಸ್' ಬಸ್ ವ್ಯವಸ್ಥೆ ಮಾಡಲಾಗಿದ್ದು, ಕೆಲ ಸೋಂಕಿತರು ಪುರಭವನ ಎದುರು ಶುಕ್ರವಾರ ಬಸ್ಸಿನಲ್ಲಿ ಆಮ್ಲಜನಕ ಪಡೆದುಕೊಂಡರು – ಪ್ರಜಾವಾಣಿ ಚಿತ್ರ

ನಗರದ ಕೋವಿಡ್ ಅಂಕಿ–ಅಂಶ

10,29,312 ▲ ಒಟ್ಟು ಪ್ರಕರಣಗಳು (10,14,996 ನಿನ್ನೆಯ ವಿವರ)

3,60,862 ▲ ಸಕ್ರಿಯ ಪ್ರಕರಣಗಳು

6,59,203 ▲ ಗುಣಮುಖರಾದವರು

9,246 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	14,316	▼
ಗುಣಮುಖ	12,898	▼
ಸಾವು	121	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಂದೇ ದಿನ 54 ಪೊಲೀಸರಿಗೆ ಸೋಂಕು

ಬೆಂಗಳೂರು: ನಗರದ ಪೊಲೀಸರಲ್ಲೂ ಕೊರೊನಾ ಸೋಂಕು ಹೆಚ್ಚಾಗುತ್ತಿದ್ದು, ಗುರುವಾರ ಒಂದೇ ದಿನದಲ್ಲಿ 54 ಪೊಲೀಸರಿಗೆ ಸೋಂಕು ತಗುಲಿರುವುದು ಪರೀಕ್ಷೆಯಿಂದ ದೃಢಪಟ್ಟಿದೆ.

ಕರ್ಫ್ಯೂ ಹಾಗೂ ಲಾಕ್‌ಡೌನ್ ಜಾರಿಯಾದಾಗಿನಿಂದಲೂ ಪೊಲೀಸರು ಹಗಲಿರುಳು ಕೆಲಸ ಮಾಡುತ್ತಿದ್ದಾರೆ. ಠಾಣೆ ಹಾಗೂ ಕಚೇರಿಗಳಲ್ಲಿ ಕೊರೊನಾ ಸೋಂಕಿತರು ಕಂಡುಬರುತ್ತಿದ್ದಂತೆ, ಸಾಮೂಹಿಕವಾಗಿ ಸೋಂಕಿನ ಪರೀಕ್ಷೆ ನಡೆಸಲಾಗುತ್ತಿದೆ.

'ಗುರುವಾರ ಬಂದ ವರದಿಯಲ್ಲಿ 54 ಪೊಲೀಸರಿಗೆ ಸೋಂಕು ಇರುವುದು ಗೊತ್ತಾಗಿದೆ. ಕೊರೊನಾ ಎರಡನೇ ಅಲೆಯಲ್ಲಿ ಇದುವರೆಗೂ 1,369 ಪೊಲೀಸರಿಗೆ ಸೋಂಕು ತಗುಲಿದಂತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'726 ಮಂದಿ ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಈಗಾಗಲೇ 631 ಮಂದಿ ಗುಣಮುಖರಾಗಿದ್ದಾರೆ. 12 ಮಂದಿ ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

'ಠಾಣೆ, ರಸ್ತೆ, ಚೆಕ್‌ಪೋಸ್ಟ್, ಕಚೇರಿ ಹಾಗೂ ಇತರೆ ಸ್ಥಳಗಳಲ್ಲಿ ಪೊಲೀಸರು ಕೆಲಸ ಮಾಡುತ್ತಿದ್ದಾರೆ. ಆ ಪೈಕಿ ಕೆಲವರಿಗೆ ಸೋಂಕು ತಗುಲಿದೆ. ಸಾರ್ವಜನಿಕರು ದಯವಿಟ್ಟು ಮನೆಯಲ್ಲೇ ಇರಬೇಕು. ಹೊರಗೆ ಬಂದು ಪೊಲೀಸರ ಜೊತೆ ಸುಖಾಸುಮ್ಮನೇ ವಾದ ಮಾಡಬಾರದು' ಎಂದೂ ಕೋರಿದ್ದಾರೆ.

ಸಾವಿರ ವೈದ್ಯರನ್ನು ಒದಗಿಸಲು ಕೋರಿಕೆ

'1 ಸಾವಿರ ವೈದ್ಯರು ಹಾಗೂ 1 ಸಾವಿರ ಶುಶ್ರೂಷಕರನ್ನು ಒದಗಿಸುವಂತೆ ಸರ್ಕಾರವನ್ನು ಕೋರಿದ್ದೇವೆ. ಮೊದಲ ಹಂತದಲ್ಲಿ 106 ವೈದ್ಯರನ್ನು ಒದಗಿಸಿದ್ದಾರೆ' ಎಂದು ಗೌರವ್ ಗುಪ್ತ ತಿಳಿಸಿದರು.

ಐಟಿಐ ಆಸ್ಪತ್ರೆಗೆ ಕೇಂದ್ರ ಸಚಿವ ಸದಾನಂದ ಗೌಡ ಭೇಟಿ

ಕೋವಿಡ್ ಆಸ್ಪತ್ರೆಯಾಗಿ ಪರಿವರ್ತನೆ

ಕೆ.ಆರ್.ಪುರ: ಇಲ್ಲಿನ ಐಟಿಐ ಆಸ್ಪತ್ರೆಯನ್ನು ತಿಂಗಳೊಳಗಾಗಿ ನೂರು ಹಾಸಿಗೆಯ ಸುಸಜ್ಜಿತ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗುವುದು ಎಂದು ಕೇಂದ್ರ ಸಚಿವ ಡಿ ವಿ ಸದಾನಂದ ಗೌಡ ಹೇಳಿದರು.

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಅವರೊಂದಿಗೆ ಐಟಿಐ ಆಸ್ಪತ್ರೆಯ ಸ್ಥಳ ವೀಕ್ಷಣೆ ಮಾಡಿದ ಕೇಂದ್ರ ಸಚಿವರು, 'ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಜನರಿಗೆ ಆದಷ್ಟು ಹೆಚ್ಚು ವೈದ್ಯಕೀಯ ಸೌಲಭ್ಯ ನೀಡಬೇಕು ಎಂಬ ಉದ್ದೇಶದಿಂದ ಇದನ್ನು ಪುನಶ್ಚೇತನಗೊಳಿಸಲಾಗುತ್ತಿದೆ' ಎಂದರು.

ಕೋವಿಡ್ ಸೋಂಕಿತರಿಗೆ ಆಮ್ಲಜನಕ ಸೌಲಭ್ಯ ಅಳವಡಿಸಿದ ನೂರು ಹಾಸಿಗೆಗಳು, 20 ಕೊರೊನೇತರ ಹಾಸಿಗೆಗಳು ಇರಲಿವೆ. ಆಸ್ಪತ್ರೆ ಆವರಣದಲ್ಲಿಯೇ ಆಮ್ಲಜನಕ ಘಟಕ ಸ್ಥಾಪಿಸಲಾಗುತ್ತಿದೆ. ಕೊರೊನಾ ಪರೀಕ್ಷೆ ಪ್ರಯೋಗಾಲಯ ಹಾಗೂ ಲಸಿಕಾ ಕೇಂದ್ರ ಕೂಡಾ ಇದರಲ್ಲಿ ಇರಲಿವೆ.

ಬಿ.ಎ.ಬಸವರಾಜ ಮಾತನಾಡಿ, 'ಐಟಿಐ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಬಳಸಿಕೊಳ್ಳುವುದರ ಜೊತೆಗೆ, ಕೆ.ಆರ್.ಪುರದಲ್ಲಿರುವ 100 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವಂತೆ ಆರೋಗ್ಯ ಸಚಿವರಿಗೆ ಮನವಿ ಮಾಡಲಾಗಿದೆ' ಎಂದರು.



ಡಿ.ವಿ. ಸದಾನಂದ ಗೌಡ ಹಾಗೂ ಭೈರತಿ ಬಸವರಾಜ ಅವರು ಐಟಿಐ ಆಸ್ಪತ್ರೆಯ ಸ್ಥಳ ವೀಕ್ಷಿಸಿದರು. ಐಟಿಐ ಜನರಲ್ ಮ್ಯಾನೇಜರ್ ಅಗರವಾಲ್, ಪಾಲಿಕೆಯ ಜಂಟಿ ಆಯುಕ್ತ ವೆಂಕಟಾಚಲಪತಿ, ಪಾಲಿಕೆಯ ಮಾಜಿ ಸದಸ್ಯ ಅಂತೋಣಿಸ್ವಾಮಿ ಇದ್ದರು.

'ಮೊದಲೇ ಹೃದ್ರೋಗಿ, ಭಯ ಆಗಿದ್ದು ನಿಜ'

ಕೋವಿಡ್ ಗೆದ್ದವರ ಕಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದ್ದಕ್ಕಿದ್ದಂತೆ ಕೆಮ್ಮು, ನೆಗಡಿ, ಜ್ವರ ಕಾಣಿಸಿಕೊಂಡಿತು. ದೇಹದ ಉಷ್ಣತೆ 103 ಡಿಗ್ರಿ ಸೆಲ್ಸಿಯಸ್‌ಗೆ ಏರಿತ್ತು. ಎದೆ ಭಾಗದ ಎಕ್ಸ್‌ರೇ, ಸಿಟಿ ಸ್ಕ್ಯಾನ್ ಮಾಡಿಸಿಕೊಂಡೆ. ಜೊತೆಗೆ ಪತ್ನಿಯಲ್ಲೂ (ಸುಜಾತಾ ರಾಠೋಡ್, ಮಿಂಟೋ ಆಸ್ಪತ್ರೆಯ ನಿರ್ದೇಶಕಿ) ರೋಗಲಕ್ಷಣಗಳು ಕಾಣಿಸಿಕೊಂಡಿತ್ತು. ಆಗ ಭಯ ಆಗಿದ್ದು ನಿಜ.

ಅಷ್ಟಕ್ಕೂ ನಾನು ಮೊದಲೇ ಹೃದ್ರೋಗಿ, ಬೈ ಪಾಸ್ ಸರ್ಜರಿ ಕೂಡ ಆಗಿದೆ. ಸೋಂಕು ಶ್ವಾಸಕೋಶವನ್ನೇ ಬಾಧಿಸುತ್ತದೆ ಎಂಬ ಮಾಹಿತಿಯಿಂದ ಗಾಬರಿ ಆಗಿತ್ತು. ಆದರೆ, ನನ್ನ ಮತ್ತು ಪತ್ನಿಯ ಅದೃಷ್ಟವೆಂದರೆ, ಪರೀಕ್ಷಾ ವರದಿಯಲ್ಲಿ ಗಂಭೀರವಾದ ಯಾವುದೇ ಸಮಸ್ಯೆ ಇರಲಿಲ್ಲ. ಹೀಗಾಗಿ, ರೆಮ್‌ಡಿಸಿವಿರ್ ಚುಚ್ಚುಮದ್ದು ಮತ್ತು ಆಸ್ಪತ್ರೆಗೆ ದಾಖಲಾಗುವ ಅಗತ್ಯ ಬರಲಿಲ್ಲ. ಇಬ್ಬರೂ ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆದೆವು.

ಆದರೆ, ನನ್ನ ಸ್ನೇಹಿತರು, ಆಪ್ತರು ಹಲವರು ಕೋವಿಡ್‌ನಿಂದ ನಿಧನರಾದ ಸುದ್ದಿ ಕೇಳಿ ಮನಸ್ಸಿಗೆ ನೋವಾಗಿತ್ತು. ಹಲವರು ಇನ್ನೂ ಗಂಭೀರಾವಸ್ಥೆಯಲ್ಲಿದ್ದಾರೆ. ಹೀಗಾಗಿ, ಆ ಗೊಮ್ಮೆ, ಹೀಗೊಮ್ಮೆ ಮಾನಸಿಕವಾಗಿ ಭಯ ಆಗುತ್ತಿತ್ತು. ಆದರೂ ಧೈರ್ಯ ಕಳೆದುಕೊಳ್ಳಲಿಲ್ಲ. ಕುಟುಂಬದ ವೈದ್ಯರೇ ಆಗಿರುವ ಸತೀಶ ನಾಯಕ್ ಮತ್ತು ಹೃದ್ರೋಗ ತಜ್ಞ ಜಯರಂಗರಾಥ್ ಅವರಿಂದ ಸಲಹೆ ಪಡೆದವು. 4–5 ದಿನಗಳಲ್ಲಿಯೇ ರೋಗಲಕ್ಷಣ ಕಡಿಮೆ ಆಯಿತು. ಮನೆಯಲ್ಲೇ ವೈದ್ಯರು (ಪತ್ನಿ) ಇದ್ದದ್ದು ಅನುಕೂಲ ಆಯಿತು. ಆಮ್ಲಜನಕ ಸ್ಯಾಚುರೇಷನ್ 93–94 ರಿಂದ ಕೆಳಗೆ ಬಂದಿರಲಿಲ್ಲ. ಈಗ ಮತ್ತೆ 98ಕ್ಕೆ ಬಂದಿದೆ. ಇನ್ನೂ 3–4 ದಿನಗಳಲ್ಲಿ ಕ್ವಾರಂಟೈನ್ ಅವಧಿ ಮುಗಿಯುತ್ತದೆ. ನಂತರ ಹೊರಗಡೆ ಅಡ್ಡಾಡಬಹುದು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಕೋವಿಡ್ ರೋಗಲಕ್ಷಣ ಕಾಣಿಸಿಕೊಂಡ ತಕ್ಷಣ ಆತಂಕಗೊಳ್ಳುವ ಅಗತ್ಯ ಇಲ್ಲ. ವೈದ್ಯರ ಸಲಹೆ ಪಡೆದುಕೊಂಡು ಅದರಂತೆ ಮುಂದುವರಿಯಬೇಕು. ಈಗಂತೂ ಹಾಸಿಗೆ, ಆಮ್ಲಜನಕ ಕೊರತೆ ಇದೆ. ರೋಗ ಬಹಳ ವೇಗವಾಗಿ ಹರಡುತ್ತಿದೆ. ಹೀಗಾಗಿ, ಮನೆಯಲ್ಲೇ ಇದ್ದು ಮುನ್ನೆಚ್ಚರಿಕೆ ವಹಿಸುವುದು ಸೂಕ್ತ. ಅವಶ್ಯಕತೆ ಇಲ್ಲದೇ ಇದ್ದರೆ ಹೊರಗಡೆ ಹೋಗಲೇ ಬಾರದು. ಹೊರಗಡೆ ಹೋಗುವುದಾದರೆ ಮಾಸ್ಕ್ ಧರಿಸಬೇಕು. ಅಂತರ ಕಾಪಾಡಿಕೊಳ್ಳಬೇಕು. ಇದೀಗ, ಸೋಂಕಿನ ಸರಪಳಿ ಮುರಿಯಲು ಸರ್ಕಾರ ಲಾಕ್‌ಡೌನ್ ಘೋಷಿಸಿದ್ದರಿಂದ ಎಲ್ಲರೂ ನಿಯಮ ಪಾಲಿಸಲೇಬೇಕು.

ಹಾಗೆ ನೋಡಿದರೆ, ಕೋವಿಡ್ ಎರಡನೇ ಅಲೆಯನ್ನು ಎದುರಿಸಲು ರಾಜ್ಯ ಸರ್ಕಾರ ಸೂಕ್ತ ಸಿದ್ಧತೆಯನ್ನೇ ಮಾಡಿಕೊಂಡಿಲ್ಲ. ಹೀಗಾಗಿ, ನಿಭಾಯಿಸಲು ವಿಫಲವಾಗಿದೆ. ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದೇ ಗೊತ್ತಾಗುತ್ತಿಲ್ಲ. ಅಗತ್ಯ ಇರುವವರಿಗೆ ಹಾಸಿಗೆ, ಆಮ್ಲಜನಕ ಸೌಲಭ್ಯದ ಹಾಸಿಗೆ ಕುರಿತು ಮಾಹಿತಿಯೇ ಸಿಗುತ್ತಿಲ್ಲ. ನನಗೂ ನಿತ್ಯ ಹಲವರು ಕರೆ ಮಾಡುತ್ತಿದ್ದಾರೆ. ಸಾಧ್ಯವಾದಷ್ಟು ನೆರವಾಗುತ್ತಿದ್ದೇನೆ.



ಪ್ರಕಾಶ್ ರಾಠೋಡ್,
ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ



ಶಿ ಫಾರ್ ಸೊಸೈಟಿ ಟ್ರಸ್ಟ್ ಆರಂಭಿಸಿರುವ ಉಚಿತ ಆಂಬುಲೆನ್ಸ್ ಸೇವೆ

ಸೋಂಕಿತರ ನೆರವಿಗೆ ಮಹಿಳಾ ಬೈಕರ್ಸ್

ಬೆಂಗಳೂರು: ನಗರದ ಮಹಿಳಾ ಬೈಕರ್‌ಗಳ ತಂಡವೊಂದು ಕೋವಿಡ್ ಸೋಂಕಿತರ ನೆರವಿಗೆ ಧಾವಿಸಿದೆ. ಸೋಂಕು ದೃಢಪಟ್ಟವರನ್ನು ಆಸ್ಪತ್ರೆಗೆ ಉಚಿತವಾಗಿ ಕರೆದೊಯ್ಯಲು ಎರಡು ಆಂಬುಲೆನ್ಸ್‌ಗಳನ್ನು ಸೇವೆಗೆ ಸಮರ್ಪಿಸಿದೆ.

ನಗರದ 10 ಮಹಿಳಾ ಬೈಕರ್‌ಗಳೇ ಸೇರಿ ಸೈನಿಕರ ಕುಟುಂಬಗಳಿಗೆ ನೆರವಾಗಲು 'ಶಿ ಫಾರ್ ಸೊಸೈಟಿ' ಎಂಬ ಟ್ರಸ್ಟ್ ಸ್ಥಾಪಿಸಿಕೊಂಡಿದ್ದಾರೆ. ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ ಸೈನಿಕರ ಕುಟುಂಬಗಳು ಮಾತ್ರವಲ್ಲದೆ ಹಸಿದವರಿಗೆ ಆಹಾರ ಒದಗಿಸಲು ಶ್ರಮಿಸಿದ್ದರು. ವಿಶೇಷವಾಗಿ ತೃತೀಯ ಲಿಂಗಿಗಳಿಗೆ ಆಹಾರ ಕಿಟ್‌ಗಳನ್ನು ವಿತರಿಸಿದ್ದರು.

ಎರಡನೇ ಅಲೆಯಲ್ಲಿ ಸೋಂಕಿತರಿಗೆ ನೇರವಾಗಿ ನೆರವಾಗಲು 'ಶಿ ಫಾರ್ ಸೊಸೈಟಿ' ಮುಂದಾಗಿದೆ. 'ಎರಡು ವ್ಯಾನ್‌ಗಳನ್ನು ಬಾಡಿಗೆಗೆ ಪಡೆದು ಆಮ್ಲಜನಕ ಸಹಿತ ಆಂಬುಲೆನ್ಸ್ ಆಗಿ ಮಾರ್ಪಡಿಸಲಾಗಿದೆ' ಎಂದು ಟ್ರಸ್ಟ್‌ನ ಸದಸ್ಯೆ ಹರ್ಷಿಣಿ ತಿಳಿಸಿದರು.

'ಸೋಂಕಿತರು ಮನೆಯಿಂದ ಆಸ್ಪತ್ರೆಗೆ ಹೋಗಲು, ಆಸ್ಪತ್ರೆಯಿಂದ ಸ್ಕ್ಯಾನಿಂಗ್ ಸೆಂಟರ್ ಮತ್ತು ಬೇರೆ ಆಸ್ಪತ್ರೆಗೆ ಕರೆದೊಯ್ಯಲು ಈ ಸೇವೆ ಒದಗಿಸಲಾಗುತ್ತಿದೆ. ಆಸ್ಪತ್ರೆಗೆ ತೆರಳಲು ರೋಗಿಗಳಿಗೆ ತೊಂದರೆ ಆಗಬಾರದು ಎಂಬ ಉದ್ದೇಶದೊಂದಿಗೆ ಈ ಸೇವೆ ಆರಂಭಿಸಲಾಗಿದೆ' ಎಂದು ಅವರು ಹೇಳಿದರು.

ಕಳೆದ 10 ದಿನಗಳಿಂದ ಈ ಸೇವೆ ಆರಂಭವಾಗಿದ್ದು, ಹಲವರು ಇದರ ಉಪಯೋಗ ಪಡೆದುಕೊಂಡಿದ್ದಾರೆ. ಈ ಉಚಿತ ಸೇವೆಯನ್ನು ಜನರು ಬಳಕೆ ಮಾಡಿಕೊಳ್ಳಬೇಕು. ಅದಕ್ಕಾಗಿ ಹೆಲ್ಪ್‌ಲೈನ್ ಸಂಖ್ಯೆಗಳನ್ನೂ(96635 65321, 98864 08603, 91416 35045, 99165 96396) ನೀಡಲಾಗಿದೆ ಎಂದು ವಿವರಿಸಿದರು.

'ತಿಂಗಳಿಗೆ ₹ 3 ಲಕ್ಷ ವೆಚ್ಚ ಆಗಲಿದೆ ಎಂದು ಅಂದಾಜಿಸಲಾಗಿದೆ. ಸದ್ಯಕ್ಕೆ ಟ್ರಸ್ಟ್ ಸದಸ್ಯರೇ ವೆಚ್ಚ ಭರಿಸುತ್ತಿದ್ದೇವೆ. ದಾನಿಗಳು ನೆರವು ಪಡೆದು ನಿಧಿ ಸಂಗ್ರಹಿಸಲು ಕೂಡ ಮುಂದಾಗಿದ್ದೇವೆ. ಆಸಕ್ತರು 99721 59315 ದೂರವಾಣಿ ಸಂಖ್ಯೆ ಸಂಪರ್ಕಿಸಿ ನೆರವು ನೀಡಬಹುದು' ಎಂದು ತಿಳಿಸಿದರು.

1912 ಸಹಾಯವಾಣಿ ಬಲವರ್ಧನೆ

ಯಶವಂತಪುರದಲ್ಲಿ ಹೆಚ್ಚುವರಿ ಕಾಲ್ ಸೆಂಟರ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕಿತರ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ ಮಾಡಲು ಬಿಬಿಎಂಪಿಯ ಸಹಾಯವಾಣಿಯನ್ನು (1912) ಬಲವರ್ಧನೆ ಮಾಡಲಾಗುತ್ತಿದೆ. ಹೆಚ್ಚುವರಿ ಕಾಲ್ ಸೆಂಟರ್‌ಗಳನ್ನು ಸ್ಥಾಪಿಸಿ ಅವುಗಳನ್ನೂ ಈ ಸಹಾಯವಾಣಿಗೆ ಜೋಡಿಸಲಾಗುತ್ತಿದೆ.

ಯಶವಂತಪುರದಲ್ಲಿ ಬಿಬಿಎಂಪಿ ವತಿಯಿಂದ ಸ್ಥಾಪಿಸಿರುವ ಸಹಾಯವಾಣಿಯ (1912) ಹೆಚ್ಚುವರಿ ಕೇಂದ್ರವನ್ನು ಸಚಿವ ಅರವಿಂದ ಲಿಂಬಾವಳಿ ಶುಕ್ರವಾರ ಉದ್ಘಾಟಿಸಿದರು.

ಈ ಹಿಂದೆ 1912 ಸಹಾಯವಾಣಿ 60 ಸಂಪರ್ಕ ಮಾರ್ಗಗಳನ್ನು ಹೊಂದಿತ್ತು. ಈಗ ಅದಕ್ಕೆ ಹೆಚ್ಚುವರಿಯಾಗಿ 70 ಮಾರ್ಗಗಳನ್ನು ಸೇರಿಸಲಾಗಿದೆ. ಈವರೆಗೂ 1912 ಸಹಾಯವಾಣಿಗೆ ಕರೆ ಮಾಡಿದಾಗ ಸಂಪರ್ಕ ಪಡೆಯಲು ಐದಾರು ನಿಮಿಷ ಕಾಯಬೇಕಾಗುತ್ತಿತ್ತು. ಆದರೆ, ಈಗ ಹೆಚ್ಚುವರಿ ಸಂಪರ್ಕ ಮಾರ್ಗಗಳನ್ನು ಸೇರ್ಪಡೆಗೊಳಿಸಿರುವುದರಿಂದ ಕರೆ ಮಾಡಿದ ಕೂಡಲೇ ಸೇವೆ ಲಭ್ಯವಾಗಲಿದೆ. 10 ವೈದ್ಯರು ಹಾಗೂ 130 ಸಿಬ್ಬಂದಿ ದಿನದ 24 ಗಂಟೆಗಳ ಕಾಲ ಮೂರು ಪಾಳಿಗಳಲ್ಲಿ ಇಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಕೋವಿಡ್ ರೋಗಿಗಳು ಚಿಕಿತ್ಸೆಯಿಂದ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗುತ್ತಿದ್ದಂತೆಯೇ ಹೊಸ ರೋಗಿಗಳನ್ನು ದಾಖಲಿಸಲು ಇದು ಅನುಕೂಲ ಕಲ್ಪಿಸಲಿದೆ. ಅಲ್ಲದೇ, ಹಾಸಿಗೆ ಲಭ್ಯತೆಯ ನಿಖರ ಮಾಹಿತಿ, ಹಾಸಿಗೆಗಳ ಹಂಚಿಕೆಯಾಗಿರುವ ಬಗ್ಗೆ ವಾಸ್ತವ ವರದಿ ಪಡೆಯಲೂ ನೆರವಾಗುತ್ತದೆ.

'ಈ ಕಾಲ್ ಸೆಂಟರ್‌ನಲ್ಲಿ ವೈದರೇ ಖುದ್ದಾಗಿ ರೋಗಿಗಳ ಅಥವಾ ಅವರ ಬಂಧುಗಳ ಜೊತೆ ಮಾತನಾಡಿ ಅಗತ್ಯ ವೈದ್ಯಕೀಯ ಸಲಹೆ ನೀಡಲಿದ್ದಾರೆ. ತುರ್ತು ಚಿಕಿತ್ಸೆ ಅಗತ್ಯವಿರುವ ಕೋವಿಡ್ ರೋಗಿಗಳನ್ನು ಆಸ್ಪತ್ರೆಗೆ ದಾಖಲಾಗಲು ನೇರವಾಗಲಿದ್ದಾರೆ. ಇದಕ್ಕೆ ಪೂರಕ ವ್ಯವಸ್ಥೆಗಳನ್ನು ಇಲ್ಲಿ ಕಲ್ಪಿಸಲಾಗಿದೆ. ಆಸ್ಪತ್ರೆಗಳಲ್ಲಿ ಹಾಸಿಗೆ ಲಭ್ಯತೆಯ ವಾಸ್ತವ ಸ್ಥಿತಿ ಪರಿಶೀಲನೆಗೂ ನೆರವಾಗಲಿದೆ. ಇದು ಚಿಕಿತ್ಸಾ ನಿರ್ಧಾರ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತದೆ' ಎಂದು ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

'ಈ ಕಾಲ್ ಸೆಂಟರ್ ಬಿಬಿಎಂಪಿಯ ಇತರ ವಲಯಗಳದ್ದೂ ಸೇರಿದಂತೆ ಒಟ್ಟು ಒಂಬತ್ತು ವಾರ್ ರೂಮ್‌ಗಳ ಮೇಲಿನ ಒತ್ತಡ ಕಡಿಮೆ ಮಾಡಲಿದೆ. ಇದರಿಂದ ವಾರ್ ರೂಮ್ ಮತ್ತು ಕಾಲ್ ಸೆಂಟರ್ ಗಳ ಕಾರ್ಯನಿರ್ವಹಣೆ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

ಆಸ್ಪತ್ರೆಗಳಲ್ಲಿ ಹಾಸಿಗೆ ಲಭ್ಯತೆಯ ವಾಸ್ತವ ಸ್ಥಿತಿಗತಿಗಳನ್ನು ತಿಳಿಯಲು ಈ ಕಾಲ್ ಸೆಂಟರ್ ಮೂಲಕ ಕರೆ ಮಾಡಲಾಯಿತು.



ಯಶವಂತಪುರದಲ್ಲಿ ಸ್ಥಾಪಿಸಿರುವ ಕಾಲ್ ಸೆಂಟರ್ ಅನ್ನು ಸಚಿವ ಅರವಿಂದ ಲಿಂಬಾವಳಿ ಶುಕ್ರವಾರ ಪರಿಶೀಲಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮತ್ತು ಶಾಸಕ ಮುನಿರತ್ನ ಇದ್ದರು ಪ್ರಜಾವಾಣಿ ಚಿತ್ರ

ಲಸಿಕೆ: ರಾಜ್ಯಕ್ಕೆ 75 ಸಾವಿರ ಡೋಸ್

ಬೆಂಗಳೂರು: ಕೇಂದ್ರ ಸರ್ಕಾರವು ರಾಜ್ಯಕ್ಕೆ ಶುಕ್ರವಾರ 75 ಸಾವಿರ ಡೋಸ್ 'ಕೋವ್ಯಾಕ್ಸಿನ್' ಲಸಿಕೆ ಕಳುಹಿಸಿದೆ.

ರಾಜ್ಯದಲ್ಲಿ ಲಸಿಕೆಯ ಕೊರತೆಯಿಂದ 18ರಿಂದ 44 ವರ್ಷದೊಳಗಿನವರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಣೆಯನ್ನು ಸ್ಥಗಿತ ಮಾಡಲಾಗಿದೆ.

ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಟ್ವೀಟ್ ಮಾಡಿದ್ದು, 'ಈವರೆಗೆ ರಾಜ್ಯಕ್ಕೆ 99,58,190 ಡೋಸ್ ಕೋವಿಶೀಲ್ಡ್ ಲಸಿಕೆ ಹಾಗೂ 10,91,280 ಡೋಸ್ ಕೋವ್ಯಾಕ್ಸಿನ್ ಲಸಿಕೆ ಲಭ್ಯವಾಗಿದೆ. ರಾಜ್ಯದಲ್ಲಿನ ಲಸಿಕೆ ಅಭಿಯಾನಕ್ಕೆ ನೆರವು ನೀಡುತ್ತಿರುವ ಕೇಂದ್ರ ಸರ್ಕಾರಕ್ಕೆ ಧನ್ಯವಾದಗಳು' ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ಸಿದ್ದಲಿಂಗಸ್ವಾಮಿ



ಚಿತ್ರದುರ್ಗ: ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕಾನಾಮಡಗು ಗ್ರಾಮದ ನಿವೃತ್ತ ಶಿಕ್ಷಕ ಬಿ.ಎಂ. ಸಿದ್ದಲಿಂಗಸ್ವಾಮಿ (70) ಅವರು ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಇವರು ಕನ್ನಡ ಭಾಷಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. 'ಪ್ರಜಾವಾಣಿ'ಯ ಉಪಸಂಪಾದಕ ಅಮೃತ್ ಕಿರಣ್ ಸೇರಿ ಮೂವರು ಪುತ್ರರು ಇದ್ದಾರೆ. ಕಾನಾಮಡಗು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಚಿತ್ರಾವಳಿ



ಬಸವ ಜಯಂತಿ ಪ್ರಯುಕ್ತ ಬಸವೇಶ್ವರ ವೃತ್ತದ ಬಳಿಯಿರುವ ಬಣವಣ್ಣನ ಪ್ರತಿಮೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ. ಮೋಹನ್ ಮತ್ತಿತರರು ಪುಷ್ಪ ನಮನ ಸಲ್ಲಿಸಿದರು



ನಗರದ ಮಹಾಲಕ್ಷ್ಮಿ ಲೇಔಟ್ ಶಾಸಕರ ಭವನದಲ್ಲಿ ಶುಕ್ರವಾರ ಸರಳವಾಗಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅಬಕಾರಿ ಸಚಿವ ಕೆ. ಗೋಪಾಲಯ್ಯ ಅವರು ಬಸವಣ್ಣ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷ ಸಿ.ಜೆ. ಅವಿನ್ ಆರಾಧ್ಯ, ಬಿಜೆಪಿಯ ರಾಘವೇಂದ್ರ ಶೆಟ್ಟಿ ಇತರರು ಇದ್ದರು

ಲಸಿಕೆ ತಯಾರಿಕೆಗೆ ಅಗತ್ಯ ಒಪ್ಪಿಗೆ • ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿ –ಡಿಸಿಎಂ ಅಶ್ವತ್ಥನಾರಾಯಣ

ಮಾಲೂರು: ಶೀಘ್ರವೇ ಕೋವ್ಯಾಕ್ಸಿನ್ ಘಟಕ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆದಷ್ಟು ಬೇಗ ಲಸಿಕೆ ತಯಾರಿಕೆ ಆರಂಭ
- ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ 100 ಹಾಸಿಗೆಗಳ ಆಸ್ಪತ್ರೆ ಚಿಂತನೆ
- ಪರಿಹಾರ ನಿಧಿ ಸಮರ್ಪಕ ಬಳಕೆಗೆ ಕ್ರಮ

ಬೆಂಗಳೂರು: ಭಾರತ್ ಬಯೋಟೆಕ್ ಕೋಲಾರ ಜಿಲ್ಲೆ ಮಾಲೂರು ಕೈಗಾರಿಕಾ ಪ್ರದೇಶದಲ್ಲಿ ಶೀಘ್ರವೇ ಕೋವ್ಯಾಕ್ಸಿನ್ ಲಸಿಕೆ ತಯಾರಿಕಾ ಘಟಕ ಸ್ಥಾಪಿಸಲಿದೆ.

ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಶುಕ್ರವಾರ ಈ ವಿಷಯ ತಿಳಿಸಿದರು.

‘ರಾಜಧಾನಿಗೆ ಹತ್ತಿರದಲ್ಲೇ ಇರುವ ಮಾಲೂರಿನಲ್ಲಿ ಕೋವ್ಯಾಕ್ಸಿನ್ ಸ್ಥಾಪನೆ ಆಗುತ್ತದೆ. ಅಲ್ಲಿಗೆ ರೈಲು ಸೇರಿದಂತೆ ಎಲ್ಲ ರೀತಿಯಿಂದ ಉತ್ತಮ ಸಂಪರ್ಕ ವ್ಯವಸ್ಥೆ ಇದೆ. ಲಸಿಕೆ ತಯಾರಿಕೆಗೆ ಅಗತ್ಯ ಒಪ್ಪಿಗೆ ನೀಡಲಿದ್ದೇವೆ. ಆಡಳಿತಾತ್ಮಕ ಕೆಲಸಗಳನ್ನು ಕಂಪನಿ ಪೂರ್ಣ ಮಾಡುತ್ತಿದ್ದು, ಸಿವಿಲ್ ಕಾಮಗಾರಿಗಳು ಆರಂಭವಾಗಿವೆ. ಆದಷ್ಟು ಬೇಗ ಲಸಿಕೆ ತಯಾರಿಕೆ ಆರಂಭವಾಗುತ್ತದೆ’ ಎಂದು ಹೇಳಿದರು.



ದೇಶದಲ್ಲಿ ಆಗಸ್ಟ್ ವೇಳೆಗೆ 40 ಕೋಟಿ ಡೋಸ್ ಲಸಿಕೆ ಉತ್ಪಾದನೆ ಆಗಲಿದೆ ಎಂದು ನೀತಿ ಆಯೋಗ ಹೇಳಿದೆ. ಇದು ಆಶಾದಾಯಕ ಬೆಳವಣಿಗೆ ಜೂನ್–ಜುಲೈನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ತಯಾರಾಗುತ್ತದೆ. ದೇಶದಲ್ಲಿ ಈವರೆಗೆ 19 ಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದರು.

ಕೇಂದ್ರ ಸರ್ಕಾರವು ಲಸಿಕೆ ತಯಾರಿಕೆ ಕಂಪನಿಗಳಿಗೆ ಸಾಕಷ್ಟು ಉತ್ತೇಜನ ನೀಡುತ್ತಿದೆ. ಜಾಗತಿಕ ಮಟ್ಟದಲ್ಲಿ ಲಸಿಕೆಗಳ ಮೇಲಿನ ಪೇಟೆಂಟ್ ವಿನಾಯಿತಿ ಬಗ್ಗೆ ಪ್ರಧಾನಿ ಮೋದಿ ಅವರು ವಿವಿಧ ದೇಶಗಳ ನಾಯಕರ ಜತೆ ಮಾತುಕತೆ ನಡೆಸಿದ್ದು, ಅದು ಯಶಸ್ವಿಯಾಗಿದೆ. ಇದರಿಂದ ಇನ್ನಷ್ಟು ಲಸಿಕೆ ತಯಾರಿಕಾ ಘಟಕಗಳು ರಾಜ್ಯಕ್ಕೆ ಬರಲಿವೆ ಎಂದು ಅಶ್ವತ್ಥನಾರಾಯಣ ಹೇಳಿದರು.

ವಿಧಾನಸಭಾ ಕ್ಷೇತ್ರಕ್ಕೆ 100 ಹಾಸಿಗೆಗಳ ಆಸ್ಪತ್ರೆ:

ಕೋವಿಡ್ ಎರಡನೇ ಮತ್ತು ಸಂಭವನೀಯ ಮೂರನೇ ಅಲೆ ಎದುರಿಸಲು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಅತ್ಯುತ್ತಮ ವೈದ್ಯಕೀಯ ಮೂಲಸೌಕರ್ಯಗಳನ್ನು ಸ್ಥಾಪಿಸಲು ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ 100 ಹಾಸಿಗೆಗಳ ಆಸ್ಪತ್ರೆ ಸ್ಥಾಪಿಸುವ ಚಿಂತನೆ ಇದೆ. ಅದರಲ್ಲಿ ಆಮ್ಲಜನಕ ಮತ್ತು ಐಸಿಯು ಬೆಡ್‌ಗಳು ಇರಲಿವೆ ಎಂದು ಅವರು ತಿಳಿಸಿದರು.

ಕೋವಿಡ್‌ಗಾಗಿ ಕಾರ್ಪೊರೇಟ್ ವಲಯದಿಂದ ರಾಜ್ಯದಲ್ಲಿ ಉತ್ತಮ ರೀತಿಯಲ್ಲಿ ಸಿಎಸ್‌ಆರ್ ನೆರವು ಬರುತ್ತಿದೆ. ನಗದು ಮತ್ತು ಸಾಮಗ್ರಿ ರೂಪದಲ್ಲಿ ನೆರವು ಹರಿದು ಬರುತ್ತಿದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಗೂ ಹಣ ಬರುತ್ತಿದೆ. ಇದನ್ನು ಸಮರ್ಪಕವಾಗಿ ಬಳಸಲಾಗುವುದು ಎಂದು ಅವರು ತಿಳಿಸಿದರು.

‘ವಿಷಾದಿಸುವ ಅಗತ್ಯವಿಲ್ಲ’


ಸಿ.ಟಿ.ರವಿ

ಚಿಕ್ಕಮಗಳೂರು: ‘ನ್ಯಾಯಾಧೀಶರು ಸರ್ವಜ್ಞರಲ್ಲ’ ಎಂಬ ನನ್ನ ಹೇಳಿಕೆಯಲ್ಲಿ ತಪ್ಪಿಲ್ಲ. ವಿಷಾದ ವ್ಯಕ್ತಪಡಿಸುವ ಅಗತ್ಯವೂ ಇಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಶಾಸಕ ಸಿ.ಟಿ.ರವಿ ಶುಕ್ರವಾರ ಸಮರ್ಥಿಸಿಕೊಂಡರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೋರ್ಟ್, ನ್ಯಾಯಾಧೀಶರ ಬಗ್ಗೆ ನಮಗೆ ಬದ್ಧತೆ, ಗೌರವ ಇದೆ. ಜಗತ್ತಿನಲ್ಲಿ ಯಾರೂ ಸರ್ವಜ್ಞರಲ್ಲ. ನ್ಯಾಯಾಧೀಶರು ತಾಂತ್ರಿಕ ಸಮಿತಿ ವರದಿ ಆಧರಿಸಿಯೇ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆ. ಸುಪ್ರೀಂ ಕೋರ್ಟ್ ಕೂಡಾ ಅದನ್ನೇ ಹೇಳಿದೆ’ ಎಂದರು.

‘ನನ್ನ ಹೇಳಿಕೆಯಲ್ಲಿ ಟೀಕೆ ಉದ್ದೇಶ ಇರಲಿಲ್ಲ, ಅದು ಮಾರ್ಮಿಕ ನುಡಿ. ಅದನ್ನು ಪೂರ್ಣ ಕೇಳಿಸಿಕೊಳ್ಳದವರು ತಪ್ಪು ಹುಡುಕುವ ಪ್ರಯತ್ನ ಮಾಡಿದ್ದಾರೆ. ಕೆಲವು ಕಾಂಗ್ರೆಸ್ ಮುಖಂಡರು ತಪ್ಪಾಗಿ ಬಿಂಬಿಸುತ್ತಿದ್ದಾರೆ’ ಎಂದು ಉತ್ತರಿಸಿದರು.

‘1975ರಲ್ಲಿ ತುರ್ತು ಸ್ಥಿತಿ ಹೇರಿ ಸ್ವಾತಂತ್ರ್ಯ ಹರಣ ಮಾಡಿದವರು ಈಗ ನ್ಯಾಯಾಂಗದ ಗೌರವದ ಬಗ್ಗೆ ಮಾತನಾಡುತ್ತಿದ್ದಾರೆ. ಬಿಜೆಪಿಗೆ ನ್ಯಾಯಾಂಗದ ಪಾವಿತ್ರ್ಯದ ಬಗ್ಗೆ ಪಾಠ ಹೇಳುತ್ತಿದ್ದಾರೆ’ ಎಂದು ಟೀಕಿಸಿದರು.

ಡಿವಿಎಸ್, ಸಿ.ಟಿ.ರವಿ ಹೇಳಿಕೆಗೆ ಪ್ರತಿಪಕ್ಷಗಳ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ಮತ್ತು ಆಮ್ಲಜನಕ ಪೂರೈಕೆ ವಿಚಾರದಲ್ಲಿ ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಗುರುವಾರ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧವೇ ಮಾತನಾಡಿರುವುದಕ್ಕೆ ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಆಕ್ಷೇಪ ವ್ಯಕ್ತಪಡಿಸಿವೆ.

‘ಲಸಿಕೆ ಉತ್ಪಾದನೆ ಆಗದಿದ್ದರೆ ನಾವು ನೇಣು ಹಾಕಿಕೊಳ್ಳೋಕೆ ಆಗುತ್ತಾ’ ಎಂದು ಸದಾನಂದ ಗೌಡ ಪ್ರಶ್ನಿಸಿದ್ದರು. ‘ನ್ಯಾಯಾಧೀಶರು ಸರ್ವಜ್ಞರಲ್ಲ’ ಎಂದು ಸಿ.ಟಿ. ರವಿ ಟೀಕಿಸಿದ್ದರು.

ಈ ಕುರಿತು ಶುಕ್ರವಾರ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತೀವ್ರ ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಶಿವಕುಮಾರ್, ‘ನಾವೇನು ನೇಣು ಹಾಕಿಕೊಳ್ಳಬೇಕಾ ಎಂದು ಸದಾನಂದಗೌಡರು ಕೇಳಿದ್ದಾರೆ. ನೀವು ಕಾನೂನು ಸಚಿವರಾಗಿದ್ದವರು, ಮುಖ್ಯಮಂತ್ರಿ ಆಗಿದ್ದವರು. ನೇಣು ಹಾಕಿಕೊಳ್ಳಿ ಎಂದು ನಾವು ಹೇಳುವುದಿಲ್ಲ. ಆದರೆ, ನಿಮಗೆ ಮತ ಹಾಕಿದವರು ನೀವು ಲಸಿಕೆ ಕೊಡಲಿಲ್ಲ ಎಂದು ನೇಣು ಹಾಕಿಕೊಳ್ಳಬೇಕಾ’ ಎಂದು ಪ್ರಶ್ನಿಸಿದರು.

‘ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿರುವ ಸಿ.ಟಿ. ರವಿ, ‘ನ್ಯಾಯಾಧೀಶರೇನು ಸರ್ವಜ್ಞರೇ’ ಎಂದು ಪ್ರಶ್ನಿಸಿದ್ದಾರೆ. ಇದು ನ್ಯಾಯಾಂಗ ನಿಂದನೆ. ನ್ಯಾಯಾಲಯದ ತೀರ್ಪುಗಳನ್ನೇ ಈ ನೆಲದ ಕಾನೂನು ಎಂದು ಪರಿಗಣಿಸಲಾಗುತ್ತಿದೆ. ರವಿ ಈ ರೀತಿ ಹೇಳಿಕೆ ನೀಡಿರುವುದು ಅಪರಾಧ’ ಎಂದರು.

ಅಸಮರ್ಥರ ಮಾತುಗಳು: ಸದಾನಂದ ಗೌಡ ಮತ್ತು ಸಿ.ಟಿ. ರವಿ ಹೇಳಿಕೆ ಕುರಿತು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ‘ಧರೆಗೆ ಸ್ವರ್ಗ ಇಳಿಸುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿಯ ಅಸಮರ್ಥರ, ಕೈಲಾಗದ ಮಾತುಗಳಿವು’ ಎಂದು ಟೀಕಿಸಿದ್ದಾರೆ.

ಹಿಂದೆ ಆಡಳಿತ ನಡೆಸಿದವರನ್ನೇ ದೂಷಿಸಿಕೊಂಡು ಬಿಜೆಪಿ ಹೊಣೆಗೇಡಿತನ ಪ್ರದರ್ಶಿಸುತ್ತಿದೆ. ಅಸಾಮರ್ಥ್ಯ ಮುಚ್ಚಿಕೊಳ್ಳಲು ಬಿಜೆಪಿ ನಾಯಕರು ಬೇಜವಾಬ್ದಾರಿ ಹೇಳಿಕೆ ನೀಡುತ್ತಿದ್ದಾರೆ. ಜನರ ಆಶಯಕ್ಕೆ ತಕ್ಕಂತೆ ಬಿಜೆಪಿ ನಡೆದುಕೊಳ್ಳಬೇಕು. ಕೈಲಾಗದಿದ್ದರೆ ಅಧಿಕಾರ ಬಿಟ್ಟು ತೊಲಗಬೇಕು ಎಂದು ಆಗ್ರಹಿಸಿದ್ದಾರೆ.

ಮೊದಲು ಮನುಷ್ಯರಾಗಿ: ಸಿದ್ದರಾಮಯ್ಯ




ಜನರ ಸಂಕಟಕ್ಕೆ ಧ್ವನಿಯಾಗಲು ಸರ್ವಜ್ಞನಾಗಬೇಕಿಲ್ಲ; ಮಾನವೀಯತೆ ಇರುವ ಮನುಷ್ಯರಾಗಿದ್ದರೆ ಸಾಕು ಎಂದು ಪ್ರತಿಪಾದಿಸಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅಧಿಕಾರದ ದುರಹಂಕಾರ ಬಿಟ್ಟು ಮೊದಲು ಮನುಷ್ಯರಾಗಿ ಎಂದು ಸಿ.ಟಿ.ರವಿಗೆ ಸಲಹೆ ನೀಡಿದ್ದಾರೆ.

‘ನ್ಯಾಯಾಧೀಶರ ನಿಂದನೆ ನ್ಯಾಯಾಲಯದ ನಿಂದನೆ ಕೂಡಾ ಆಗುತ್ತದೆ ಎಂದು ಗೊತ್ತಿಲ್ಲದ ನಿಮ್ಮಂತಹವರನ್ನು ಸರ್ವಜ್ಞ ಎನ್ನುವುದಿಲ್ಲ, ಮೂರ್ಖ ಎನ್ನುತ್ತಾರೆ’ ಎಂದು ಕುಟುಕಿದ್ದಾರೆ.

‘ಸಚಿವ ಸದಾನಂದಗೌಡರೇ, ನೇಣು ಹಾಕಿಕೊಳ್ಳುವುದು ಮಹಾಪಾಪ ಮಾತ್ರವಲ್ಲ ಕಾನೂನಿಗೆ ವಿರುದ್ಧವಾದುದು ಕೂಡಾ. ಅದನ್ನೆಲ್ಲ ಮಾಡಲು ಹೋಗಬೇಡಿ,ಆಡಳಿತ ನಡೆಸುವುದು ನಿಮಗಾಗದ ಕೆಲಸ, ಮರ್ಯಾದೆಯಿಂದ ರಾಜೀನಾಮೆ ಕೊಟ್ಟು ಹೊರಟುಬಿಡಿ, ದೇಶಕ್ಕಾಗಿ ಅಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿ’ ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

‘ಸಚಿವ, ಶಾಸಕರ ಹೇಳಿಕೆ ನ್ಯಾಯಾಂಗ ನಿಂದನೆ’


ಎಚ್.ವಿಶ್ವನಾಥ್

ಮೈಸೂರು: ‘ಕಾನೂನಿಗೆ ಎಲ್ಲರೂ ತಲೆಬಾಗಬೇಕು. ಆಡಳಿತದಲ್ಲಿರುವವರೇ ವ್ಯವಸ್ಥೆಯನ್ನು ಹಳಿಯುವುದು ಸರಿಯಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಶುಕ್ರವಾರ ಇಲ್ಲಿ ಹೇಳಿದರು.

ನ್ಯಾಯಾಂಗದ ನಡೆ ಬಗ್ಗೆ ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಇಬ್ಬರೂ ಮೀರಿದ ಮಾತುಗಳನ್ನಾಡಿದ್ದು, ನ್ಯಾಯಾಂಗ ನಿಂದನೆ ಎಸಗಿದ್ದಾರೆ’ ಎಂದು ಅವರು ಹೇಳಿದರು.

‘ಸದಾನಂದಗೌಡ ಅವರು ‘ಲಸಿಕೆ ಸಿಗದಿದ್ದರೆ ನಾವು ನೇಣು ಹಾಕಿಕೊಳ್ಳಬೇಕಾ?’ ಎಂದಿರುವುದು ಕೇಂದ್ರ ಸರ್ಕಾರವೇ ನೇಣು ಹಾಕಿಕೊಳ್ಳೋದು ಎಂಬರ್ಥದ ಹೇಳಿಕೆಯಾಗಿದೆ’ ಎಂದ ಅವರು, ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳನ್ನು ತಾವು ಸರ್ವಜ್ಞರು ಎಂದೇ ಭಾವಿಸಿದ್ದಾಗಿ ಹೇಳಿದರು.

‘ಚಾಮರಾಜನಗರದಲ್ಲಿನ ಆಮ್ಲಜನಕ ದುರಂತ ಪ್ರಕರಣದಲ್ಲಿ, ಹೈಕೋರ್ಟ್‌ನ ಮಧ್ಯಪ್ರವೇಶದಿಂದಲೇ ಮೈಸೂರಿಗೆ ನ್ಯಾಯ ದೊರಕಿತು. ಮರ್ಯಾದೆ ಉಳಿಯಿತು. ಅಧಿಕಾರಿಯ ತನಿಖೆಯಾಗಿದ್ದರೆ ಸತ್ಯ ಹೊರಗೆ ಬರುತ್ತಿರಲಿಲ್ಲ’ ಎಂದು ಅವರು ಹೇಳಿದ್ದಾರೆ.

‘ಆಮ್ಲಜನಕ ಕೊರತೆಯಿಂದ ಮೃತಪಟ್ಟವರ ಕುಟುಂಬಗಳಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗಮೋಹನ್ ರೆಡ್ಡಿ, ತಲಾ ₹ 10 ಲಕ್ಷ ಪರಿಹಾರ ನೀಡಿದ್ದಾರೆ. ಚಾಮರಾಜನಗರದ ದುರಂತ ನಡೆದು ಎಷ್ಟು ದಿನವಾಯ್ತು? ಹೈಕೋರ್ಟ್ ನೇಮಿಸಿದ್ದ ಸಮಿತಿಯು ಪರಿಹಾರ ನೀಡಲು ಶಿಫಾರಸು ಮಾಡಿದೆ. ರಾಜ್ಯ ಸರ್ಕಾರಕ್ಕೆ, ಜಗನ್ ಮಾದರಿಯಾಗಬೇಕಿದೆ’ ಎಂದು ವಿಶ್ವನಾಥ್ ಹೇಳಿದರು.

ಸುದ್ದಿ 2 ನಿಮಿಷ

ರಾಜ್ಯ ಸರ್ಕಾರದ ವಿರುದ್ಧ ಡಿವಿಎಸ್ ಅಸಮಾಧಾನ: ಆಡಿಯೊ ವೈರಲ್

ಮಂಗಳೂರು: ಕೇಂದ್ರ ಸರ್ಕಾರ ರಾಜ್ಯದ ಬಗ್ಗೆ ನಿರ್ಲಕ್ಷ್ಯ ಧೋರಣೆ ತಳೆದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿ, ಬಿಜೆಪಿ ಕಾರ್ಯಕರ್ತರೊಬ್ಬರು ಕರೆ ಮಾಡಿದಾಗ, ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಅವರು ರಾಜ್ಯ ಸರ್ಕಾರದ ವಿರುದ್ಧವೇ ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾದ ಆಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಈ ಧ್ವನಿಮುದ್ರಣ ತುಳು ಭಾಷೆಯಲ್ಲಿದೆ. ಕೋವಿಡ್ ನಿಯಂತ್ರಣಕ್ಕೆ ಕೇಂದ್ರ ನಿರೀಕ್ಷಿತ ಸಹಕಾರ ನೀಡುತ್ತಿಲ್ಲ ಎಂದು ಹೇಳಿದ ವ್ಯಕ್ತಿಗೆ, ಸದಾನಂದ ಗೌಡರು, ‘ನಾವು ಕೇಂದ್ರದಿಂದ ಕೊಡುವುದನ್ನೆಲ್ಲ ಕೊಟ್ಟಿದ್ದೇವೆ. ರಾಜ್ಯದ ಅಧ್ಯಕ್ಷರನ್ನು ಕೇಳಿ. ಕೇಂದ್ರದಿಂದ ಕೊಟ್ಟಿದ್ದನ್ನು ಜನರಿಗೆ ಕೊಡುತ್ತಿಲ್ಲ. ಇದರಿಂದ ಸಮಸ್ಯೆಯಾಗಿದೆ. ನಾವು ಕೇಳಿದ್ದಕ್ಕಿಂತ ಹೆಚ್ಚೇ ಕೊಟ್ಟಿದ್ದೇವೆ. ರಾಜ್ಯದಲ್ಲಿ ಸಮಸ್ಯೆ ಇದ್ದರೆ, ಅವರು ಸರಿ ಮಾಡಲಿ, ನಾವು ಮಾಡುವುದಲ್ಲ. ನಿಮ್ಮಲ್ಲಿ ಎಂಎಲ್‌ಎ, ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾರಲ್ಲ, ಹಾಗಾದ್ರೆ ಅವರೆಲ್ಲ ಯಾಕೆ ಇರುವುದು? ನೀವು ಅವರಲ್ಲಿ ಕೇಳದೇ ನಮ್ಮಲ್ಲಿ ಏನು ಕೇಳುತ್ತೀರಿ’ ಎಂದು ಪ್ರಶ್ನಿಸಿದ್ದಾರೆ.



‘ನಿಮಗೆ ರೆಮ್‌ಡಿಸಿವಿರ್ ಬೇಕಾ? ಆಮ್ಲಜನಕ, ಅಕ್ಕಿ ಎಲ್ಲವನ್ನೂ ಕೊಡಿಸಿದ್ದೇವೆ. ಏನನ್ನೂ ಬಾಕಿ ಇಟ್ಟಿಲ್ಲ. ನೀವೆಲ್ಲ ಒಮ್ಮೆ ಹೋಗಿ ಕೂತು, ಅವರಲ್ಲಿ ಆಗಲೇಬೇಕು ಅಂತ ಹೇಳಿ. ಅವರು ಕತ್ತೆ ಕಾಯಲಿಕ್ಕೆ ಇರುವುದಾ’ ಎಂದಿರುವುದು ಧ್ವನಿ ಮುದ್ರಣದಲ್ಲಿದೆ.

ಈ ಬಗ್ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರನ್ನು ಪ್ರಶ್ನಿಸಿದಾಗ, ‘ನಾನು ಆಡಿಯೊ ಕೇಳಿಲ್ಲ. ಈ ಬಗ್ಗೆ ನನಗೆ ಗೊತ್ತಿಲ್ಲ’ ಎಂದು ನುಣುಚಿಕೊಂಡರು.

ಈ ಕುರಿತು ಪ್ರತಿಕ್ರಿಯೆಗೆ ಡಿ.ವಿ.ಸದಾನಂದಗೌಡ ಅವರು ಲಭ್ಯರಾಗಲಿಲ್ಲ.

ಕೋರ್ಟ್ ಕಲಾಪ: ಸ್ವಯಂ ಪ್ರೇರಿತ ಅರ್ಜಿ ಮರು ದಾಖಲು

ಬೆಂಗಳೂರು: ಕೋವಿಡ್ ಎರಡನೇ ಅಲೆ ಮತ್ತು ಲಾಕ್‌ಡೌನ್ ಗಮನದಲ್ಲಿಟ್ಟುಕೊಂಡು ನ್ಯಾಯಾಲಯಗಳ ಕಾರ್ಯ ವೈಖರಿ ಕುರಿತು ನಿರ್ದೇಶನಗಳನ್ನು ನೀಡುವ ಸಂಬಂಧ ಹೈಕೋರ್ಟ್ ಸ್ವಯಂ ಪ್ರೇರಿತ ಅರ್ಜಿಯನ್ನು ಮರುದಾಖಲು ಮಾಡಿಕೊಂಡಿದೆ.

ಕಳೆದ ಲಾಕ್‌ಡೌನ್ ವೇಳೆ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ನ್ಯಾಯಾಲಯಗಳ ಕಾರ್ಯ–ಕಲಾಪಗಳು ಹೇಗಿರಬೇಕು ಎಂದು 2021 ಜನವರಿ 15ರ ಆದೇಶದ ನೀಡಲಾಗಿತ್ತು. ಬಳಿಕ ಆ ಅರ್ಜಿಯನ್ನು ವಿಲೇವಾರಿ ಮಾಡಲಾಗಿತ್ತು. ಈಗ ಎರಡನೇ ಅಲೆಯಲ್ಲಿ ಕೋವಿಡ್ ಸೋಂಕು ಉಲ್ಬಣಗೊಂಡಿರುವ ಮತ್ತು ಲಾಕ್‌ಡೌನ್ ಇರುವ ಕಾರಣ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡಿದೆ.

‘ವಕೀಲರು ಸಲ್ಲಿಸುವ ಅರ್ಜಿಗಳಲ್ಲಿ ಲೋಪದೋಷಗಳಿದ್ದರೆ ಸರಿಪಡಿಸಲು ವಕೀಲರು ಹೈಕೋರ್ಟ್ ಪ್ರವೇಶಿಸಲು ಅವಕಾಶ ಇಲ್ಲ. ಆಕ್ಷೇಪಣೆಗೆ ಪ್ರತಿಕ್ರಿಯೆ ಸಲ್ಲಿಸಿ ಸರಿಪಡಿಸುವ ಅವಧಿಯನ್ನು ಜೂನ್ 25ರ ತನಕ ವಿಸ್ತರಿಸಲಾಗಿದೆ. ಇದು ಕಲಬುರ್ಗಿ ಹಾಗೂ ಧಾರವಾಡ ಪೀಠಕ್ಕೂ ಅನ್ವಯ. ಕ್ರಿಮಿನಲ್ ವಿಷಯಗಳಲ್ಲಿ ಶುಲ್ಕ ಮತ್ತು ನಿರ್ವಹಣೆ ಹೊರತುಪಡಿಸಿ ಬೇರೆ ಆಕ್ಷೇಪಣೆಗಳನ್ನು ಎತ್ತಬಾರದು’ ಎಂದು ಪೀಠ ತಿಳಿಸಿತು.

ನಿಧನ ವಾರ್ತೆ

ಪತ್ರಕರ್ತ ಮಹದೇವ ಪ್ರಕಾಶ್



ಬೆಂಗಳೂರು: ಹಿರಿಯ ಪತ್ರಕರ್ತ ಮಹದೇವ ಪ್ರಕಾಶ್ (65) ಅವರು ಕೋವಿಡ್‌ನಿಂದ ಶುಕ್ರವಾರ ಮೃತಪಟ್ಟಿದ್ದಾರೆ. ಇವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದ ಇವರು ಹೃದಯ ಸಂಬಂಧಿ ಸಮಸ್ಯೆಯಿಂದ ನಾರಾಯಣ ಹೃದಯಾಲಯಕ್ಕೆ ದಾಖಲಾಗಿದ್ದರು. ಕೋವಿಡ್ ಸೋಂಕಿಗೂ ಒಳಗಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗಲಿಲ್ಲ.

1975ರಲ್ಲಿ ಮಾಜಿ ಮುಖ್ಯಮಂತ್ರಿ ವೀರೇಂದ್ರಪಾಟೀಲ ಅವರು ಆರಂಭಿಸಿದ್ದ ‘ಲೋಕವಾಣಿ’ ಪತ್ರಿಕೆ ಮೂಲಕ ಪತ್ರಿಕೋದ್ಯಮ ಪ್ರವೇಶಿಸಿದ್ದರು. ಕೆಲ ವರ್ಷಗಳಿಂದ ‘ಈ ಭಾನುವಾರ’ ಎಂಬ ವಾರಪತ್ರಿಕೆ ನಡೆಸುತ್ತಿದ್ದರು. ಯಡಿಯೂರಪ್ಪ ಮುಖ್ಯಮಂತ್ರಿ ಆದ ಬಳಿಕ ಮಾಧ್ಯಮ ಸಲಹೆಗಾರರಾಗಿ ನೇಮಕಗೊಂಡಿದ್ದರು. ಕಳೆದ ವರ್ಷಾಂತ್ಯದಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಲೇಖಕಿ ಹಸನಬಿ ಬಿಳಗಿ



ಧಾರವಾಡ: ಲೇಖಕಿ ಹಸನಬಿ ಎಂ.ಬಿಳಗಿ (85) ಅವರು ಬಾಗಲಕೋಟೆಯಲ್ಲಿ ಶುಕ್ರವಾರ ನಿಧನರಾದರು.

ಅವರು ವಯೋಸಹಜ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು.

ಅವಿವಾಹಿತೆಯಾಗಿದ್ದರು. ಧಾರವಾಡದಲ್ಲಿದ್ದ ಅವರು ತಮ್ಮ ಕೊನೆಯ ಇಚ್ಛೆಯಂತೆ ಕೆಲ ತಿಂಗಳ ಹಿಂದೆ ಸ್ವಂತ ಊರಿನಲ್ಲಿ ನೆಲೆಸಿದ್ದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಸಂಜೆ ಬಾಗಲಕೋಟೆಯಲ್ಲಿ ನಡೆದಿದೆ.

ಸಾಂಪ್ರದಾಯಿಕ ಕುಟುಂಬದಲ್ಲಿ ಸ್ತ್ರೀ ಶಿಕ್ಷಣ ಮತ್ತು ಉದ್ಯೋಗಗಳು ಕನಸಾಗಿದ್ದ ಕಾಲಘಟ್ಟದಲ್ಲಿ ತಮ್ಮ ಸ್ವಂತ ಪರಿಶ್ರಮದಿಂದ ಎಲ್ಲ ಮಿತಿಗಳನ್ನೂ ಮೀರಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಆ ನಂತರ ಮತ್ತೆ ವಿದ್ಯಾಭ್ಯಾಸವನ್ನು ಮುಂದುವರೆಸಿ ಪ್ರಥಮ ಶ್ರೇಣಿಯಲ್ಲಿ ಎಂ.ಎ. ಓದುವ ಮಟ್ಟದ ಸಾಧನೆ ಮಾಡಿದ್ದರು. ಕರ್ನಾಟಕ ಕಲಾ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ವಚನ ಸಾಹಿತ್ಯದಲ್ಲಿ ಆಳವಾದ ಅಧ್ಯಯನ ಮಾಡಿ ಇಬ್ಬರಿಗೆ ಸಂಶೋಧನಾ ಮಾರ್ಗದರ್ಶಕರಾಗಿದ್ದರು.

ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಶಿವಮೊಗ್ಗ ಕರ್ನಾಟಕ ಸಂಘದ ಪಿ.ಲಂಕೇಶ ಪ್ರಶಸ್ತಿ, ಉತ್ತರ ಕರ್ನಾಟಕ ಲೇಖಕಿಯರ ಸಂಘದ ಸಾಹಿತ್ಯ ಸರಸ್ವತಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಲಭಿಸಿದ್ದವು.

ರಾಘವಾಂಕ ಶಿವಾಚಾರ್ಯಶ್ರೀ



ಕುರುಗೋಡು (ಬಳ್ಳಾರಿ ಜಿಲ್ಲೆ): ಸ್ಥಳೀಯ ಹಾವಿಗೆಮಠದ ರಾಘವಾಂಕ ಶಿವಾಚಾರ್ಯ ಶ್ರೀಗಳು (88) ಶುಕ್ರವಾರ ಬೆಳಗಿನಜಾವ ನಿಧನರಾದರು.

ಮಧ್ಯಾಹ್ನ ಶ್ರೀಮಠದ ಆವರಣದಲ್ಲಿ ವೀರಶೈವ ವಿಧಿವಿಧಾನಗಳೊಂದಿಗೆ ಶ್ರೀಗಳ ಅಂತ್ಯಕ್ರಿಯೆ ನೆರವೇರಿಸಲಾಯಿತು. ನಿಗದಿತ ಸಂಖ್ಯೆಯ ಭಕ್ತರಿಗಷ್ಟೇ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು.

‘ಕೋವಿಡ್: ರಾಷ್ಟ್ರೀಯ ಸರ್ಕಾರ ರಚಿಸಿ’

ಪರಿಸ್ಥಿತಿ ನಿರ್ವಹಣೆಯಲ್ಲಿ ವಿಫಲ; ಸಂಸತ್ ವಿಶೇಷ ಅಧಿವೇಶನ ಕರೆಯಲು ಮನವಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೋವಿಡ್ ನಿಯಂತ್ರಣದ ವಿರುದ್ಧ ಪರಿಣಾಮಕಾರಿ ಹೋರಾಟ ರೂಪಿಸಲು, ಜನತಾಂತ್ರಿಕ ಸಂಸ್ಥೆಗಳನ್ನು ಬಲಪಡಿಸುವ ಹಾಗೂ ಸಾರ್ವಜನಿಕ ಜೀವನದಲ್ಲಿ ನೈತಿಕತೆಯನ್ನು ಮರುಸ್ಥಾಪಿಸಲು ರಾಷ್ಟ್ರೀಯ ಸರ್ಕಾರ ರಚನೆಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕು’ ಎಂದು ರಾಷ್ಟ್ರಪತಿ ಅವರನ್ನು ಜನತಂತ್ರ ಸಮಾಜ, ಇತರ ಸಂಘಟನೆಗಳು ಆಗ್ರಹಿಸಿವೆ.

ರಾಷ್ಟ್ರೀಯ ಸರ್ಕಾರ ರಚನೆಯಿಂದ ಕೋವಿಡ್‌ನಿಂದಾಗುತ್ತಿರುವ ಅನಾಹುತಗಳನ್ನು ತಡೆಯುವಲ್ಲಿ ಸಮಾಜದ ಎಲ್ಲ ವರ್ಗದ ಜನರನ್ನು ಒಳಗೊಳ್ಳಬಹುದಾಗಿದೆ. ರಾಷ್ಟ್ರೀಯ ವಿಪತ್ತು ಎದುರಿಸಲು ರಾಷ್ಟ್ರೀಯ ಸರ್ಕಾರ ರಚನೆಗೆ ಸಂಬಂಧಿಸಿದಂತೆ ಒಮ್ಮತಾಭಿಪ್ರಾಯ ರೂಪಿಸಬೇಕು ಎಂದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶ, ರಾಜ್ಯಸಭೆ ಅಧ್ಯಕ್ಷ, ಲೋಕಸಭೆ ಸ್ಪೀಕರ್, ವಿರೋಧಪಕ್ಷ ನಾಯಕರು, ಪ್ರಧಾನಮಂತ್ರಿ ಅವರಿಗೆ ಬರೆದ ಪತ್ರದಲ್ಲಿ ಮನವಿ ಮಾಡಲಾಗಿದೆ.

ಕೋವಿಡ್ ಪರಿಸ್ಥಿತಿಯನ್ನು ಎದುರಿಸಲು, ದುಸ್ಥಿತಿಯಲ್ಲಿರುವ ಜನವರ್ಗ, ವಲಸೆ ಕಾರ್ಮಿಕರಿಗೆಜೀವನೋಪಾಯ ಒದಗಿಸಲು ಇಂತಹ ಕ್ರಮ ಅಗತ್ಯವಾಗಿದೆ ಎಂದು ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

ಆಮ್ಲಜನಕ, ಔಷಧ, ಆಸ್ಪತ್ರೆಗಳಲ್ಲಿ ಹಾಸಿಗೆ ದೊರೆಯದ ಹೃದಯ ವಿದ್ರಾವಕ ಘಟನೆ, ಸಾವಿನ ಸರಣಿ ನೋಡಬೇಕಾಗಿದೆ. ಶವ ಸಾಗಣೆಗೆ ದುಪ್ಪಟ್ಟು ಹಣ ನೀಡಬೇಕಾಗಿದೆ. ಕೋವಿಡ್ ಪರಿಣಾಮ ತಡೆಗೆ ಒಕ್ಕೂಟ ಸರ್ಕಾರ ಅಗತ್ಯ ಸಿದ್ಧತೆ ಮಾಡಿಕೊಂಡಿಲ್ಲ. ಸರ್ಕಾರ ಕೈಚೆಲ್ಲಿದೆ. ಸರ್ಕಾರವೂ ಸಮಸ್ಯೆಯ ಭಾಗವಾಗಿರುವ ಹಿನ್ನೆಲೆಯಲ್ಲಿ ಈ ಮನವಿ ಮಾಡಿಕೊಳ್ಳಲಾಗಿದೆ.

ಒಕ್ಕೂಟ ಸರ್ಕಾರ ಮೊದಲ ಅಲೆಯಿಂದ ಪಾಠ ಕಲಿತಿಲ್ಲ. ತಜ್ಞರು ನೀಡಿದ್ದ ಎಚ್ಚರಿಕೆಯನ್ನು ನಿರ್ಲಕ್ಷಿಸಿ, ಲಕ್ಷಾಂತರ ಜನ ಸೇರುವ ಕುಂಭಮೇಳದಂತಹ ಕಾರ್ಯಕ್ರಮಕ್ಕೆ ಅವಕಾಶ ನೀಡಿತು. ಚುನಾವಣೆಗೆ ಬೃಹತ್ ರಾಜಕೀಯ ರ‍್ಯಾಲಿ ಆಯೋಜಿಸಲಾಯಿತು. ಇವುಗಳಲ್ಲಿ ಪ್ರಧಾನಮಂತ್ರಿ, ಗೃಹ ಸಚಿವರೇ ಭಾಗಿಯಾಗಿದ್ದರು. ಇದು ಕೋವಿಡ್ ಹೆಚ್ಚಲು ಕಾರಣವಾಯಿತು. ಉಚಿತ ಲಸಿಕೆ ಕಾರ್ಯಕ್ರಮದಿಂದಲೂ ಸರ್ಕಾರ ನುಣಚಿಕೊಂಡಿದೆ ಎಂದು ಸಂಘಟನೆಗಳ ಮುಖಂಡರು ದೂರಿದ್ದಾರೆ.

ನರೇಗಾದಡಿ ಉದ್ಯೋಗವಕಾಶವನ್ನು 100 ರಿಂದ 200 ದಿನಕ್ಕೆ ಹೆಚ್ಚಿಸಬೇಕು. ಇದನ್ನು ನಗರ ವ್ಯಾಪ್ತಿಗೂ ವಿಸ್ತರಿಸಬೇಕು. ಸಮಾಜದಲ್ಲಿ ಹಸಿವು ಎದುರಿಸುತ್ತಿರುವ ಜನರ ಜೀವನೋಪಾಯ ನಿರ್ವಹಣೆಗೆ ಬೇಕಾಗುವ ಸಂಪನ್ಮೂಲವನ್ನು ದೇಶದ ಅತ್ಯಂತ ಶ್ರೀಮಂತರು ಹಾಗೂ ಅವರ ಉದ್ಯಮಗಳ ಮೇಲೆ ಶೇ2ರಷ್ಟು ತೆರಿಗೆ ವಿಧಿಸುವ ಮೂಲಕ ಸಂಗ್ರಹಿಸಬಹುದಾಗಿದೆ ಎಂದಿದ್ದಾರೆ.

ರಾಷ್ಟ್ರೀಯ ಸಾರ್ವತ್ರಿಕ ಲಸಿಕೆ ಆಂದೋಲನ ಜವಾಬ್ದಾರಿಯಿಂದ ನುಣಚಿಕೊಂಡಿರುವ ಸರ್ಕಾರ, ಅದರ ಅರ್ಧ ಹೊರೆಯನ್ನು ರಾಜ್ಯ ಸರ್ಕಾರಗಳ ಮೇಲೆ ಹೇರಿದೆ. ಸಂಪೂರ್ಣ ಸಂವೇದನೆ ಕಳೆದುಕೊಂಡ ಅಸಮರ್ಥ ಸರ್ಕಾರವಾಗಿದೆ. ಸರ್ಕಾರ, ಹಾಗೂ ದರ ಸಹಾಯಕ ಪರಿವಾರದ ಸಂಸ್ಥೆಗಳಿಗೆ ಆತ್ಮನಿರೀಕ್ಷಣೆಯ ಧೈರ್ಯವಿಲ್ಲ. ಗಂಭೀರ ಸ್ಥಿತಿ ಒಪ್ಪುವ ಮನಸ್ಸೂ ಇಲ್ಲ ಎಂದಿದ್ದಾರೆ.

ಇಂತಹ ಸಂದರ್ಭದಲ್ಲಿಯೂ ಕೋವಿಡ್ ವಾರಿಯರ್ಸ್ ಜೀವಪಣಕ್ಕಿಟ್ಟು ಜೀವ ಉಳಿಸುವ ಕೆಲಸ ಮಾಡುತ್ತಿದ್ದಾರೆ. ನ್ಯಾಯಾಲಯಗಳು ಬದ್ಧತೆಯಿಂದ ತಮ್ಮ ಸಂವಿಧಾನಾತ್ಮಕ ಪಾತ್ರ ನಿರ್ವಹಿಸುತ್ತಿವೆ. ಕೆಲವು ಮಾಧ್ಯಮಗಳು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿವೆ. ಅವುಗಳ ಕೈಗಳು ರಕ್ತಸಿಕ್ತವಾಗಿವೆ ಎಂದೂ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕೊವಿಡ್ ವ್ಯಾಕ್ಸಿನ್ ಸಂಬಂಧಿಸಿ ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಒಪ್ಪಂದದ ಕೆಲವು ನಿರ್ಬಂಧಗಳನ್ನು ರದ್ದು ಮಾಡಲು ವಿಶ್ವ ಆರೋಗ್ಯ ಸಂಸ್ಥೆಯ ಅನೇಕ ಸದಸ್ಯ ರಾಷ್ಟ್ರಗಳು ಮುಂದೆ ಬಂದಿರುವುದು ಸ್ವಾಗತಾರ್ಹ. ಲಸಿಕೆ ಉತ್ಪಾದನೆ ಹೆಚ್ಚಿಸಿ, ಎಲ್ಲರಿಗೂ ನೀಡುವ ಮೂಲಕ ಪರಿಣಾಮಕಾರಿ ಹೋರಾಟವೇ ಇದರ ಉದ್ದೇಶ ಎಂದು ಜನತಂತ್ರ ಸಮಾಜದ ಅಧ್ಯಕ್ಷ ಎಸ್. ಆರ್. ಹಿರೇಮಠ, ಜನಾಂದೋಲನ ಮಹಾಮೈತ್ರಿ ಸ್ಥಾಪಕ ಸದಸ್ಯ ದೇವನೂರ ಮಹಾದೇವ, ಸ್ವರಾಜ್ ಅಭಿಯಾನದ ಮಾಜಿ ಸಂಚಾಲಕ ಪ್ರೊ. ಆನಂದಕುಮಾರ್, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಜನಸಂಗ್ರಾಮ ಪರಿಷತ್ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ ಮತ್ತಿತರರು ತಿಳಿಸಿದ್ದಾರೆ.

ಮುಂಗಾರಿಗೆ ಮುನ್ನವೇ ತುಂಗಾ ಜಲಾಶಯ ಭರ್ತಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಲೆನಾಡಿನಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಮುಂಗಾರಿಗೆ ಮುನ್ನವೇ ತುಂಗಾ ಜಲಾಶಯ ಭರ್ತಿಯಾಗಿದೆ. ಯಾವುದೇ ಕ್ಷಣದಲ್ಲಿ ನದಿಗೆ ನೀರು ಹರಿಸಲು ಎಂಜಿನಿಯರ್‌ಗಳು ಸಿದ್ಧರಾಗಿದ್ದಾರೆ.

ಜಲಾಶಯದ ಗರಿಷ್ಠ ಮಟ್ಟ ಸಮುದ್ರಮಟ್ಟದಿಂದ 588.24 ಮೀಟರ್. ಶುಕ್ರವಾರ ಸಂಜೆ ವೇಳೆಗೆ ನೀರಿನ ಮಟ್ಟ 588.02 ಮೀಟರ್‌ಗೆ ತಲುಪಿದೆ. ಶೃಂಗೇರಿ, ತೀರ್ಥಹಳ್ಳಿ ಭಾಗದಲ್ಲಿ ಉತ್ತಮ ಮಳೆಯಾಗುತ್ತಿದೆ. ಜಲಾಶಯದ ಒಳಹರಿವು 417 ಕ್ಯುಸೆಕ್ ಇದೆ. ಯಾವುದೇ ಸಮಯದಲ್ಲಿ ನದಿಗೆ ನೀರು ಹರಿಸಬಹುದು. ಶಿವಮೊಗ್ಗ ನಗರ ಸೇರಿದಂತೆ ನದಿ ಪಾತ್ರದ ಜನರು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಆಗುಂಬೆ ಸಂಚಾರ ನಿಷೇಧ: ಜಿಲ್ಲೆಯಲ್ಲಿ ಮೂರು ದಿನಗಳು ಭಾರಿ ಮಳೆ ಸುರಿಯುವ ಸೂಚನೆ ಇರುವ ಕಾರಣ ಆಗುಂಬೆ ಘಾಟಿ ಪ್ರದೇಶದಲ್ಲಿ ಬಸ್ ಸಂಚಾರಕ್ಕೆ ಅವಕಾಶ ನೀಡಬಾರದು ಎಂದು ಜಿಲ್ಲಾಧಿಕಾರಿ ಕೆ.ಬಿ. ಶಿವಕುಮಾರ್ ಸೂಚಿಸಿದರು.

ವಿವಿಧೆಡೆ ಗುಡುಗು ಸಹಿತ ಮಳೆ: ಕಾರವಾರ ನಗರ ಸೇರಿದಂತೆ ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಶುಕ್ರವಾರ ಸಾಧಾರಣ ಮಳೆಯಾಯಿತು. ಶಿರಸಿಯಲ್ಲಿ ಸಾಧಾರಣ, ಸಿದ್ದಾಪುರ, ಕಾರವಾರ, ಅಂಕೋಲಾ, ಭಟ್ಕಳದಲ್ಲಿ ಬಿರುಸಿನಿಂದ ಮಳೆಯಾಗಿದೆ.

ಹಾವೇರಿ ಜಿಲ್ಲೆಯಾದ್ಯಂತ ಸಂಜೆ ಎರಡು ತಾಸುಗಳವರೆಗೆ ಸುರಿದ ಬಾರಿ ಗಾಳಿ ಮಳೆಗೆ ಅಲ್ಲಲ್ಲಿ ವಿದ್ಯುತ್ ಕಂಬಗಳು, ಗಿಡಮರಗಳ ನೆಲಕ್ಕೆ ಉರುಳಿ ಬಿದ್ದಿವೆ. ಶಿಗ್ಗಾವಿಯಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿ ಆಹಾರ ಧಾನ್ಯಗಳು ನೀರು ಪಾಲಾಗಿವೆ. ಬಸವೇಶ್ವರ ನಗರದಲ್ಲಿ ಬೃಹದಾಕಾರದ ಮರ ರಸ್ತೆ ಮೇಲೆ ಬಿದ್ದು ಸಂಚಾರ ಸ್ಥಗಿತಗೊಂಡಿತ್ತು.

ಬೆಲೆ ಕುಸಿತ: ಕೇಳುವವರಿಲ್ಲ • ಮಾರುಕಟ್ಟೆಯಲ್ಲಿ ಸಂಗ್ರಹಿಸಲು ವ್ಯವಸ್ಥೆಯೂ ಇಲ್ಲ

ರಸ್ತೆಗೆ ಟೊಮೆಟೊ ಸುರಿದು ಆಕ್ರೋಶ

• ಜಿ.ವಿ. ಪುರುಷೋತ್ತಮರಾವ್

ಮುಳಬಾಗಿಲು: ತಾಲ್ಲೂಕಿನ ಟೊಮೆಟೊ ಬೆಳೆಗಾರರ ಪಾಲಿಗೆ ಶುಕ್ರವಾರ ಅಕ್ಷರಶಃ ಕರಾಳ ದಿನ. ಲಾಕ್‌ಡೌನ್ ಪರಿಣಾಮ ಬೆಲೆ ಕುಸಿತದಿಂದ ಕಂಗಾಲಾಗಿರುವ ಬೆಳೆಗಾರರು ಟನ್‌ಗಟ್ಟಲೇ ಟೊಮೆಟೊವನ್ನು ರಸ್ತೆ ಬದಿಯಲ್ಲಿ ಸುರಿಯುತ್ತಿದ್ದಾರೆ.

ತಾಲ್ಲೂಕಿನ ಕಸಬಾ ಹೋಬಳಿಯ ಎನ್. ವಡ್ಡಹಳ್ಳಿಯ ಎಪಿಎಂಸಿ ಉಪ ಮಾರುಕಟ್ಟೆಗೆ ಕಳೆದ ಎರಡು ದಿನಗಳಿಂದಲೂ ಟೊಮೆಟೊ ಆವಕ ಹೆಚ್ಚಿದೆ. ಪ್ರತಿದಿನ 40 ಸಾವಿರಕ್ಕೂ ಹೆಚ್ಚು ಕ್ರೇಟ್ ಟೊಮೆಟೊ ಹರಾಜಿಗೆ ಬರುತ್ತಿದೆ. ಇಲ್ಲಿಂದ ಆಂಧ್ರಪ್ರದೇಶ ಹಾಗೂ ತಮಿಳುನಾಡಿಗೆ ಪೂರೈಕೆಯಾಗುತ್ತದೆ. ಅಲ್ಲಿಯೂ ಬೇಡಿಕೆ ಕುಸಿದಿದೆ. ಮಾರುಕಟ್ಟೆಯಲ್ಲಿ ಕೇಳುವವರೇ ಇಲ್ಲದಂತಾಗಿದೆ.


ಮುಳಬಾಗಿಲುಚಿತ್ತೂರು ರಾಷ್ಟ್ರೀಯ ಹೆದ್ದಾರಿ 75ರ ಬದಿಯಲ್ಲಿ ರೈತರು ಶುಕ್ರವಾರ ಟೊಮೆಟೊ ಸುರಿದಿರುವುದು

ಮತ್ತೊಂದೆಡೆ ಮಾರುಕಟ್ಟೆಯಲ್ಲಿ ಸಂಗ್ರಹಿಸಿಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಬೇಸತ್ತ ರೈತರು ಟ್ರ್ಯಾಕ್ಟರ್‌ಗಳಲ್ಲಿ ಟೊಮೆಟೊ ತುಂಬಿಕೊಂಡು ಎನ್.ವಡ್ಡಹಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ ಹಾಗೂ ಅಲಂಗೂರು ರಸ್ತೆ ಬದಿಗಳಲ್ಲಿ ಸುರಿಯುತ್ತಿದ್ದಾರೆ.

ತಾಲ್ಲೂಕಿನ 6 ಸಾವಿರ ಎಕರೆ ಪ್ರದೇಶದಲ್ಲಿ ಟೊಮೆಟೊ ಬೆಳೆಯಲಾಗಿದೆ. ಒಂದು ಎಕರೆಯಲ್ಲಿ ಬೆಳೆಯಲು ₹ 1.50 ಲಕ್ಷ ವೆಚ್ಚವಾಗುತ್ತದೆ. ಉತ್ತಮ ಗುಣಮಟ್ಟದ ಟೊಮೆಟೊ ಮಾರುಕಟ್ಟೆಗೆ ಬಂದಿದೆ. ಆದರೆ, ಖರೀದಿಸುವವರೇ ಇಲ್ಲ.

‘ಕಳೆದ ಮೂರು ತಿಂಗಳಿಂದಲೂ ಟೊಮೆಟೊಗೆ ಉತ್ತಮ ಬೆಲೆ ಸಿಕ್ಕಿಲ್ಲ. ಮಾಡಿರುವ ಖರ್ಚು ಕೂಡ ಕೈಸೇರಿಲ್ಲ. ಇದರಿಂದ ಬೆಳೆಗಾರರು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಲಾಕ್‌ಡೌನ್ ಪರಿಣಾಮ ಟೊಮೆಟೊ ಖರೀದಿಸುವವರು ಮಾರುಕಟ್ಟೆಯತ್ತ ಬರುತ್ತಿಲ್ಲ.

‘ಲಕ್ಷಾಂತರ ರೂಪಾಯಿ ವ್ಯಯಿಸಿ ಟೊಮೆಟೊ ಬೆಳೆದಿದ್ದೇವೆ. ಕೋವಿಡ್ ಸಂಕಷ್ಟದಲ್ಲಿ ಕುಟುಂಬದ ನಿರ್ವಹಣೆಯೂ ಕಷ್ಟಕರವಾಗಿದೆ. ಜನಪ್ರತಿನಿಧಿಗಳು ರೈತರ ಸಮಸ್ಯೆ ಆಲಿಸಲು ಮುಂದಾಗುತ್ತಿಲ್ಲ. ರಾಜ್ಯ ಸರ್ಕಾರ ಕೂಡಲೇ ಬೆಳೆಗಾರರ ನೆರವಿಗೆ ಧಾವಿಸಬೇಕು’ ಎಂದು ಒತ್ತಾಯಿಸುತ್ತಾರೆ ಟೊಮೆಟೊ ಬೆಳೆಗಾರ ಪ್ರಭಾಕರ್.

‘ಆರೋಪಿಸಿದವರು ಮೈಸೂರಿಗರ ಕ್ಷಮೆ ಕೇಳಲಿ’

ಪ್ರಜಾವಾಣಿ ವಾರ್ತೆ


ರೋಹಿಣಿ ಸಿಂಧೂರಿ

ಮೈಸೂರು: ‘ಆಮ್ಲಜನಕ ಪೂರೈಕೆ ವಿಚಾರವಾಗಿ, ಮೈಸೂರಿನ ಮೇಲೆ ಕಳಂಕ ಹೊರಿಸಲು ಮುಂದಾದ ಎಲ್ಲರೂ ಮೈಸೂರಿಗರ ಕ್ಷಮೆ ಕೇಳಬೇಕು’ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಶುಕ್ರವಾರ ಇಲ್ಲಿ ಆಗ್ರಹಿಸಿದರು.

‘ನಮ್ಮ ಮೇಲೆ ಆರೋಪ ಮಾಡಲು ಹೋಗಿ, ಮೈಸೂರಿಗೆ ಕಳಂಕ ತರುವ ಪ್ರಯತ್ನ ನಡೆದಿತ್ತು. ಇದೀಗ ಅದರಿಂದ ಹೊರಗೆ ಬಂದಿದ್ದೇವೆ’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಚಾಮರಾಜನಗರದ ದುರಂತ ಕುರಿತಂತೆ ಹೈಕೋರ್ಟ್ ಸಮಿತಿ ವರದಿ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನಮ್ಮ ವಿರುದ್ಧ ಮಾಡಿದ ಆರೋಪಗಳು ಆಧಾರ ರಹಿತ. ಇದಕ್ಕೆ ಪ್ರತಿಕ್ರಿಯಿಸುವುದಿಲ್ಲ. ಸರ್ಕಾರಕ್ಕೆ ವರದಿ ಕೊಡುತ್ತೇವೆ’ ಎಂದರು. ‘ಮೈಸೂರಿಗೆ ಬಂದ ಏಳು ತಿಂಗಳಿಂದ ವೈಯಕ್ತಿಕವಾಗಿ ಆರೋಪ ಕೇಳುತ್ತಿರುವೆ. ಸೇವೆಗೆ ಸೇರಿದ್ದೇ ದೇಶ ಸೇವೆಗೆ. ಇಂತಹ ಸಣ್ಣಪುಟ್ಟ ಆರೋಪಗಳಿಗೆ ಕಾಲವೇ ಉತ್ತರ ನೀಡಲಿದೆ’ ಎಂದು ತಿಳಿಸಿದರು.

‘ಮಾಧ್ಯಮದವರೂ ಸಣ್ಣ ವಿಷಯಕ್ಕೂ ಪ್ರತಿಕ್ರಿಯೆ ಕೇಳೋದು ಸರಿಯಲ್ಲ. ಎಲ್ಲದಕ್ಕೂ ಉತ್ತರ ಕೊಡುತ್ತ ಕೂರಲು ಆಗಲ್ಲ. ಸಾಂಕ್ರಾಮಿಕ ಪಿಡುಗಿನ ಸಮಯವಿದು. ಜನರ ಜೀವ ರಕ್ಷಿಸಲು ಎಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕಾದ ಕಾಲವಿದು’ ಎಂದ ಅವರು, ಜಿಲ್ಲಾಧಿಕಾರಿ ನಿವಾಸದಲ್ಲಿ ಈಜುಕೊಳ, ಜಿಮ್ ನಿರ್ಮಾಣಕ್ಕೆ ಸಂಬಂಧಿತ ಆರೋಪಕ್ಕೆ ತಿರುಗೇಟು ನೀಡಿದರು.

‘ಇಂದು ಬಸವ ಜಯಂತಿ. ಬಸವಣ್ಣನವರ ‘ಕಳಬೇಡ, ಕೊಲಬೇಡ’ ವಚನ ಎಲ್ಲರಿಗೂ ಮಾರ್ಗಸೂಚಿಯಾಗಬೇಕು. ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ಸದ್ಬುದ್ಧಿ ಕೊಡಲಿ’ ಎಂದರು.





ತಲ್ಲಣಿಸದಿರು ಎಳೆಯ ಮನವೇ..

ವಿನುತ ಮುರಳೀಧರ

'ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಪಡೆದು ಮುಂದೆ ವಿಜ್ಞಾನಿಯಾಗಬೇಕು ಎಂದುಕೊಂಡಿದ್ದೆ. ನೋಡಿದ್ರೆ ಪರೀಕ್ಷೆಗಳನ್ನೇ ರದ್ದು ಮಾಡ್ಬಿಟ್ರು. ಇನ್ಮೇಲೆ ಇಂಟರ್ನಲ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮೇಲೆ ರಿಸಲ್ಟ್ ಕೊಡ್ತಾರಂತೆ. ನಾನು ಅದ್ರಲ್ಲಿ ಚೆನ್ನಾಗಿ ಮಾಡಿಲ್ಲ. ನನ್ನ ಭವಿಷ್ಯವೇ ಹಾಳಾಯ್ತು. ಊಟ- ತಿಂಡಿ ಸೇರಲ್ಲ, ಸರಿಯಾಗಿ ನಿದ್ದೆನೂ ಬರಲ್ಲ. ತಲೆನೇ ಕೆಟ್ಟು ಹೋಗಿದೆ. ಏನ್ಮಾಡ್ಲಿ ಮೇಡಂ?' ಆಪ್ತಸಮಾಲೋಚನೆಗೆ ಬಂದ ಸಿಬಿಎಸ್‌ಇ ಹತ್ತನೇ ತರಗತಿ ವಿದ್ಯಾರ್ಥಿಯೋರ್ವ ತನ್ನ ಮನದ ನೋವನ್ನು ಬಿಚ್ಚಿಟ್ಟ.

* * *

'ಅಪ್ಪ-ಅಮ್ಮ ನೋಡಿದ್ರೆ ಎಷ್ಟೊತ್ತಿಗೂ ಓದ್ಕೊ ಓದ್ಕೊ ಅಂತ ಹೇಳ್ತಾ ಇರ್ತಾರೆ. ಪರೀಕ್ಷೆ ನಡೆಯುತ್ತೋ ಇಲ್ವೋ ಅಂತ ಅನುಮಾನ ಶುರುವಾಗಿದೆ. ಓದೋಕೆ ಕೂತ್ರೆ ಎಲ್ಲಾ ವ್ಯರ್ಥ ಆಗುತ್ತೇನೋ ಅಂತ ಅನ್ನಿಸಲು ಶುರುವಾಗಿ ಮನಸ್ಸು ಎಲ್ಲೆಲ್ಲೋ ಹೋಗ್ಬಿಡುತ್ತೆ. ಗಮನ ಕೊಡಕ್ಕೇ ಆಗ್ತಿಲ್ಲ. ಯೋಚ್ನೆ ಮಾಡಿ ಮಾಡಿ ಹುಚ್ಚು ಹಿಡ್ದಂಗೆ ಆಗಿದೆ' ಪಿಯುಸಿ ವಿದ್ಯಾರ್ಥಿನಿಯೊಬ್ಬಳು ತನ್ನ ಅಂತರಂಗವನ್ನು ತೆರೆದಿಡುತ್ತಾ ಕಣ್ಣೀರಾದಳು!

– ಇದು ಕೆಲವೇ ಮಕ್ಕಳ ವ್ಯಥೆಯಲ್ಲ. ಹತ್ತು, ಹನ್ನೆರಡನೆ ತರಗತಿಯ ಹಲವು ವಿದ್ಯಾರ್ಥಿಗಳ ಮನಸ್ಥಿತಿ ಕೋವಿಡ್ ತಂದಿಟ್ಟ ಅನಿಶ್ಚಿತ ಪರಿಸ್ಥಿತಿಯಿಂದಾಗಿ ಹದಗೆಟ್ಟಿದೆ.

ಹೌದು, ಸಿಬಿಎಸ್‌ಇ ಹತ್ತನೇ ತರಗತಿ ಪರೀಕ್ಷೆ ರದ್ದಾಗಿದ್ದರೆ, ಹನ್ನೆರಡನೇ ತರಗತಿಯ ಪರೀಕ್ಷೆಯನ್ನು ಮುಂದೂಡಲಾಗಿದೆ. ಇನ್ನು ರಾಜ್ಯ ಸರ್ಕಾರ ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಸಿಇಟಿ ಪರೀಕ್ಷೆಯನ್ನು ಮುಂದೂಡಿದೆ. ಜೆಇಇ ಮುಖ್ಯ ಪರೀಕ್ಷೆಗಳೂ ಮುಂದೂಡಲ್ಪಟ್ಟಿವೆ. ಪರೀಕ್ಷೆಗಳ ರದ್ದು, ಮುಂದೂಡಿಕೆ, ಕೆಲವೊಂದು ಪರೀಕ್ಷೆಗಳ ಅನಿಶ್ಚಿತತೆ ವಿದ್ಯಾರ್ಥಿ ಸಮೂಹವನ್ನು ಕಂಗೆಡಿಸಿದೆ. ಜೊತೆಗೆ ಕೋವಿಡ್ ಕಾರಣ ಆನ್‌ಲೈನ್ ಕ್ಲಾಸ್‌ಗಳೇ ಹೆಚ್ಚಾಗಿ ಪಾಠಗಳೂ ಸರಿಯಾಗಿ ಅರ್ಥವಾಗದೆ ಗೊಂದಲದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಸಾಕಷ್ಟಿದೆ. ಇತ್ತ ಸಂಬಂಧಿಕರು, ಸ್ನೇಹಿತರ ಭೇಟಿಯೂ ಅಸಾಧ್ಯ. ಕಾಯಿಲೆಯ ಭೀತಿ, ಹತ್ತಿರದವರನ್ನು ಕಳೆದುಕೊಂಡ ದುಃಖ, ಆರ್ಥಿಕ ಸಂಕಷ್ಟ, ಮನೆಯಲ್ಲಿ ವೈಮನಸ್ಯ, ಜಗಳ... ಎಲ್ಲವೂ ಎಳೆಯ ಮನಸ್ಸುಗಳನ್ನು ನಲುಗಿಸಿವೆ. ಪರಿಣಾಮ ಹಲವು ವಿದ್ಯಾರ್ಥಿಗಳು ಆತಂಕ, ಖಿನ್ನತೆಯಿಂದ ಬಳಲುತ್ತಿದ್ದಾರೆ.



> ಕೆಲವು ಪರೀಕ್ಷೆಗಳು ರದ್ದಾಗಿವೆ. ಇನ್ನು ಕೆಲವನ್ನು ಮುಂದೂಡಲಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಆತಂಕ, ಖಿನ್ನತೆ ಕಾಣಿಸಿಕೊಳ್ಳುತ್ತಿದೆ. ಸಕಾರಾತ್ಮಕ ಮನೋಭಾವ, ಆತ್ಮಸ್ಥೈರ್ಯ ತುಂಬಿದಾಗ ಮಕ್ಕಳು ಎಂಥದೇ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸಬಲ್ಲರು.

ಶಿಕ್ಷಣದ ಕುರಿತ ಆತಂಕ

ಇತ್ತೀಚೆಗೆ ನಡೆದ ಸಮೀಕ್ಷೆಯೊಂದರ ವರದಿಯ ಪ್ರಕಾರ 16ರಿಂದ 20 ವರ್ಷದೊಳಗಿನವರಲ್ಲಿ ಶೇ 55.9ರಷ್ಟು ಮಂದಿಯಲ್ಲಿ ಖಿನ್ನತೆ, ಆತಂಕ ಹೆಚ್ಚಲು ಕೋವಿಡ್ ಭಯಕ್ಕಿಂತ ಶಿಕ್ಷಣ, ಭವಿಷ್ಯದ ಓದು ಕುರಿತಾದ ಹೆದರಿಕೆಯೇ ಕಾರಣವಂತೆ. ಉನ್ನತ ವ್ಯಾಸಂಗದ ಬಗ್ಗೆ ಕನಸು ಕಂಡಿದ್ದ ವಿದ್ಯಾರ್ಥಿಗಳು ಪರೀಕ್ಷೆ ರದ್ದು, ಮುಂದೂಡಿಕೆಯಿಂದ ಮುಂದೇನು ಎಂಬ ಆತಂಕದಿಂದ ಬಳಲುತ್ತಿದ್ದಾರಂತೆ. 10ನೇ ತರಗತಿಯಲ್ಲಿ ಉತ್ತಮ ಅಂಕ ಗಳಿಸಿ, ಒಳ್ಳೆಯ ಕಾಲೇಜಿನಲ್ಲಿ ತಮ್ಮ ಇಷ್ಟದ ಕೋರ್ಸ್‌ಗೆ ಸೇರಲು ಬಯಸಿದ್ದ ವಿದ್ಯಾರ್ಥಿಗಳು ಭ್ರಮ ನಿರಸನಗೊಂಡು ಅನಿಶ್ಚಿತ ಪರಿಸ್ಥಿತಿಗೆ ಹೊಂದಿಕೊಳ್ಳಲು ಹೆಣಗಾಡುತ್ತಿದ್ದಾರಂತೆ.

ಕಳೆದೊಂದು ವರ್ಷದಿಂದ ಹಿಂದೆಂದೂ ಕಂಡರಿಯದ ಸವಾಲುಗಳು, ನ್ಯೂ ನಾರ್ಮಲ್‌ಗೆ ಹೊಂದಿಕೊಳ್ಳುವ ಕಷ್ಟ, ಆನ್‌ಲೈನ್ ತರಗತಿಗಳು, ಸಿಲೆಬಸ್ ಕಡಿತದ ಜೊತೆಗೆ ಕುಟುಂಬದಲ್ಲಿ ಪೋಷಕರು ತಮ್ಮದೇ ಸಮಸ್ಯೆಯಿಂದ ಎದುರಿಸುವ ಒತ್ತಡ... ಇವೆಲ್ಲವುಗಳಿಂದ ಹೈರಾಣಾಗಿರುವ ಹದಿಹರೆಯದ ಮನಸ್ಸು ಈಗ ಪರೀಕ್ಷೆ ಮುಂದೂಡಿಕೆ, ರದ್ದು ಮೊದಲಾದವುಗಳಿಂದ ದಿಕ್ಕು ತೋಚದ ಸ್ಥಿತಿಯಲ್ಲಿದೆ.

ಇನ್ನು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ಕಳೆದ ವರ್ಷದಿಂದಲೇ ವಿಪರೀತ ಒತ್ತಡಕ್ಕೆ ಒಳಗಾಗಿದ್ದಾರೆ ಎನ್ನುತ್ತದೆ ಇನ್ನೊಂದು ವರದಿ. ಅವರನ್ನು ಕೋವಿಡ್ ಫ್ರಂಟ್‌ಲೈನ್ ವಾರಿಯರ್ಸ್ ಎಂದು ಪರಿಗಣಿಸಲಾಗಿದ್ದು, ವಿದ್ಯಾರ್ಥಿ ದೆಸೆಯಿಂದ ಉದ್ಯೋಗಕ್ಕೆ ಕಾಲಿಡುವ ಹಂತದಲ್ಲಿ ಆಗಿರುವ ದಿಢೀರ್ ಬದಲಾವಣೆ ತಲ್ಲಣವನ್ನು ಉಂಟು ಮಾಡಿದೆ.

ಮಾನಸಿಕ ಸ್ಥಿತಿಯೇ ಕದಡಿರುವ ಈ ಹೊತ್ತಿನಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಬೇಕಾದ ಪೋಷಕರ ಜವಾಬ್ದಾರಿ ತುಂಬಾ ದೊಡ್ಡದು.

(ಲೇಖಕಿ: ಆಪ್ತ ಸಮಾಲೋಚಕಿ, ಬಾಳೆಬೈಲು, ತೀರ್ಥಹಳ್ಳಿ)

ಪೋಷಕರಿಗೆ ಸಲಹೆಗಳು

- ಮೊಟ್ಟ ಮೊದಲಿಗೆ ಇದು ನಮಗೊಬ್ಬರಿಗೇ ಬಂದ ಕಷ್ಟವಲ್ಲ, ದೇಶದ ಎಲ್ಲಾ ವಿದ್ಯಾರ್ಥಿಗಳದ್ದೂ ಇದೇ ಸಮಸ್ಯೆ ಎಂದು ಮಕ್ಕಳಿಗೆ ತಿಳಿ ಹೇಳಿ. ಕೊರೊನಾ ಕುರಿತೇ ಸದಾ ಮಾತು ಬೇಡ.
- ಪರೀಕ್ಷೆಗಳು ಯಾವಾಗ ನಡೆದರೂ ಸಿದ್ಧವಾಗಿರಬೇಕೆಂದು ಮನವರಿಕೆ ಮಾಡಿಸಿ. ಎಷ್ಟೊತ್ತಿಗೂ ಓದುವಂತೆ ಒತ್ತಡ ಬೇಡ.
- ಪರೀಕ್ಷಾ ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳದಿರುವಂತೆ ಧೈರ್ಯ ತುಂಬುತ್ತಾ ನಿನ್ನ ಜೊತೆ ನಾವಿರುತ್ತೇವೆಂದು ಆತ್ಮವಿಶ್ವಾಸ ಹೆಚ್ಚುವ ಮಾತನ್ನಾಡಿ.
- ಒಂದು ವೇಳೆ ಪರೀಕ್ಷೆ ರದ್ದಾಗಿ ಆಂತರಿಕ ಅಂಕಗಳ ಮೇಲೆ ಫಲಿತಾಂಶ ನೀಡಿದಾಗ ಅಂಕಗಳ ಬಗ್ಗೆ ತೃಪ್ತಿಯಿಲ್ಲದಿದ್ದರೆ ಮುಂದೆ ಪರೀಕ್ಷೆ ತೆಗೆದುಕೊಳ್ಳುವ ಅವಕಾಶವೂ ಇರುವುದರಿಂದ ಉತ್ತಮವಾಗಿ ಸಿದ್ಧತೆ ಮಾಡಿಕೊಳ್ಳುವಂತೆ ಪ್ರೇರೇಪಿಸಿ.
- ಮಕ್ಕಳ ಇಷ್ಟದ ಹವ್ಯಾಸಗಳನ್ನು ಗುರುತಿಸಿ ಬೆಳೆಸಿಕೊಳ್ಳುವಲ್ಲಿ ಸಹಾಯ ಮಾಡಿ. ಓದುವ ಹವ್ಯಾಸ ಬೆಳೆಸಿ.
- ಶಾಲಾ-ಕಾಲೇಜುಗಳಿಲ್ಲವೆಂದು ದಿನಚರಿಯಲ್ಲಿ ಹೆಚ್ಚಿನ ವ್ಯತ್ಯಾಸ ಬೇಡ. ಪ್ರತಿದಿನ ಒಂದೇ ಸಮಯಕ್ಕೆ ಮಲಗುವುದು, ಏಳುವುದರ ಜೊತೆಗೆ ಊಟ-ತಿಂಡಿಯೂ ಸಕಾಲದಲ್ಲಾಗಲಿ.
- ದಿನದ ಒಂದಷ್ಟು ಸಮಯವಾದರೂ ಮಕ್ಕಳೊಂದಿಗೆ ಮಾತನಾಡಿ. ಅವರ ಮಾತುಗಳನ್ನು ಸಮಾಧಾನದಿಂದ ಆಲಿಸಿ ಅಗತ್ಯವಿದ್ದರಷ್ಟೇ ಸಲಹೆ ನೀಡಿ.
- ಮಕ್ಕಳಿಗೆ ಎಲ್ಲದಕ್ಕೂ ಅತಿಯಾದ ನಿರ್ಬಂಧ ಹೇರದೆ ಮೊಬೈಲ್ ಮತ್ತಿತರ ಗ್ಯಾಜೆಟ್‌ಗಳ ಅತಿ ಬಳಕೆಯಿಂದಾಗುವ ತೊಂದರೆಗಳ ಅರಿವು ಮೂಡಿಸಿ.
- ಹದಿಹರೆಯದಲ್ಲಿ ಸ್ನೇಹಿತರ ಒಡನಾಟ ಬಯಸುವುದು ಸಹಜ. ದಿನಕ್ಕೊಮ್ಮೆಯಾದರೂ ಸ್ನೇಹಿತರೊಂದಿಗೊ, ಸಹಪಾಠಿಗಳೊಂದಿಗೊ ಫೋನ್‌ನಲ್ಲಿ ಮಾತನಾಡಿಕೊಳ್ಳಲು ಅವಕಾಶ ಮಾಡಿಕೊಡಿ.
- ವಾರಾಂತ್ಯದ ಪಿಕ್‌ನಿಕ್, ಹರಟೆಯಿಲ್ಲದೇ ಕಿರಿಕಿರಿ ಸಹಜ. ಅವರಿಗಿಷ್ಟದ ತಿಂಡಿಯನ್ನು ಮನೆಯಲ್ಲೇ ಮಾಡಿ ಕೊಡಿ. ಮನೆಗೆಲಸದಲ್ಲಿ ಮಕ್ಕಳನ್ನೂ ತೊಡಗಿಸಿಕೊಂಡರೆ ಸಮಯ ಕಳೆಯುವುದರ ಜೊತೆಗೆ ಹೊಸತನ್ನು ಕಲಿತ ಖುಷಿ ಸಿಗುವುದು.
- ಹರೆಯದಲ್ಲಿ ಮೂಡುವ ನಕಾರಾತ್ಮಕ ಯೋಚನೆಗಳನ್ನು ಹೊರಹಾಕಲು ಆಟೋಟಗಳು ಸಹಕಾರಿ. ಆದರೀಗ ಮನೆಯಿಂದ ಹೊರಹೋಗಲು ಸಾಧ್ಯವಿಲ್ಲದ ಕಾರಣ ಮನೆಯಲ್ಲಿಯೇ ಯೋಗ, ಏರೋಬಿಕ್ಸ್, ನೃತ್ಯದಂತಹ ಚಟುವಟಿಕೆಗಳನ್ನು ಉತ್ತೇಜಿಸಿ.

ಹಳ್ಳಿ ಸೊಗಡಿನ ಸಾಂಪ್ರದಾಯಿಕ

ರೈಸ್‌ಬಾತ್ ವೈವಿಧ್ಯ

ನಳಪಾಕ

ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಹುಳಿ ಅನ್ನ ಅಥವಾ ಬುತ್ತಿ ಅನ್ನ

ಬೇಕಾಗುವ ಸಾಮಗ್ರಿಗಳು: ಅಕ್ಕಿ – 1 ಕಪ್, ಬ್ಯಾಡಗಿ ಮೆಣಸಿನಕಾಯಿ – 6, ಕೆಂಪು ಮೆಣಸಿನಕಾಯಿ – 6, ಜೀರಿಗೆ – 1 ಚಮಚ, ಬೆಳ್ಳುಳ್ಳಿ – 20 ಎಸಳು, ಎಣ್ಣೆ – 7-8 ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಹುಣಸೆಹಣ್ಣು – ಒಂದು ನಿಂಬೆ ಹಣ್ಣಿನ ಗಾತ್ರ, ಅರಿಸಿನ – ಕಾಲು ಚಮಚ, ಬೆಲ್ಲ – 1 ಚಮಚ, ಕರಿಬೇವು – ಸ್ವಲ್ಪ.

ತಯಾರಿಸುವ ವಿಧಾನ: ಮೊದಲು ಅನ್ನ ಮಾಡಿಕೊಳ್ಳಬೇಕು. ಒಂದು ಬಾಣಲೆಗೆ 2 ಚಮಚ ಎಣ್ಣೆ ಹಾಕಿ, ಅದಕ್ಕೆ ಮೆಣಸಿನಕಾಯಿ, ಜೀರಿಗೆ, ಬೆಳ್ಳುಳ್ಳಿ, ಕರಿಬೇವು ಹಾಕಿ ಹುರಿದುಕೊಳ್ಳಿ. ನಂತರ ಹುರಿದಿಟ್ಟುಕೊಂಡ ಸಾಮಗ್ರಿಗಳ ಜೊತೆ ಹುಣಸೆಹಣ್ಣು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಒಂದು ಬಾಣಲೆಯನ್ನು ಬಿಸಿಗಿಟ್ಟು ಅದಕ್ಕೆ ಉಳಿದ ಎಣ್ಣೆಯನ್ನು ಹಾಕಿ ಸಾಸಿವೆ, ಕರಿಬೇವಿನ ಒಗ್ಗರಣೆ ಮಾಡಿಕೊಂಡು, ಜಜ್ಜಿದ ಬೆಳ್ಳುಳ್ಳಿ ಸೇರಿಸಿ ಹುರಿಯಿರಿ. ನಂತರ ರುಬ್ಬಿದ ಮಿಶ್ರಣವನ್ನು ಸೇರಿಸಿ, ಜೊತೆಗೆ ರುಚಿಗೆ ತಕ್ಕಷ್ಟು ಉಪ್ಪು, ಅರಿಸಿನ, ಬೆಲ್ಲ ಸೇರಿಸಿ ಎಣ್ಣೆ ಬಿಡುವವರೆಗೂ ಚೆನ್ನಾಗಿ ಕುದಿಸಿ. ಈ ಮಿಶ್ರಣವನ್ನು ಮಾಡಿಟ್ಟುಕೊಂಡ ಅನ್ನಕ್ಕೆ ಸೇರಿಸಿ ಚೆನ್ನಾಗಿ ಕಲೆಸಿ. ಇದನ್ನು ಮುದ್ದೆಯ ರೀತಿ ಉಂಡೆ ಕಟ್ಟಿಕೊಳ್ಳಬಹುದು ಅಥವಾ ಹಾಗೆಯೇ ಬಡಿಸಬಹುದು. ಈಗ ರುಚಿಯಾದ ಹಳ್ಳಿ ಶೈಲಿಯ ಬುತ್ತಿ ಅನ್ನ ಅಥವಾ ಹುಳಿಯನ್ನ ಸವಿಯಲು ಸಿದ್ಧ.



ಅಕ್ಕಿ ಉಪ್ಪಿಟ್ಟು

ಬೇಕಾಗುವ ಸಾಮಗ್ರಿಗಳು: ಅಕ್ಕಿ – 1 ಕಪ್, ಎಣ್ಣೆ – ಮೂರರಿಂದ ನಾಲ್ಕು ಚಮಚ, ಸಾಸಿವೆ – ಅರ್ಧ ಚಮಚ, ಕಡಲೆ ಬೇಳೆ – 1 ಚಮಚ, ಹಸಿಮೆಣಸಿನಕಾಯಿ – 6, ಈರುಳ್ಳಿ – 1, ಟೊಮೆಟೊ – 1, ಹುರುಳಿಕಾಯಿ, ಕ್ಯಾರೆಟ್, ನವಿಲುಕೋಸು ಎಲ್ಲಾ ಸೇರಿ – 1 ಕಪ್, ಬಟಾಣಿ ಸ್ವಲ್ಪ, ಉಪ್ಪು ರುಚಿಗೆ ತಕ್ಕಷ್ಟು, ಹುರಿಗಡಲೆ – 1 ಟೇಬಲ್ ಚಮಚ, ತೆಂಗಿನತುರಿ – ಸ್ವಲ್ಪ , ಕೊತ್ತಂಬರಿ ಸೊಪ್ಪು – ಸ್ವಲ್ಪ.

ತಯಾರಿಸುವ ವಿಧಾನ: ಮೊದಲು ಅಕ್ಕಿಯನ್ನು ಚೆನ್ನಾಗಿ ಹುರಿದು ತೆಗೆದಿಟ್ಟುಕೊಳ್ಳಬೇಕು. ನಂತರ ಒಂದು ಕುಕರ್‌ಗೆ ಎಣ್ಣೆಯನ್ನು ಹಾಕಿ ಅದಕ್ಕೆ ಸಾಸಿವೆ, ಕಡಲೆಬೇಳೆ ಹಾಗೂ ಕರಿಬೇವು ಹಾಕಿ ಒಗ್ಗರಣೆ ಮಾಡಿ. ಅದಕ್ಕೆ ಹೆಚ್ಚಿದ ಮೆಣಸಿನಕಾಯಿ, ಈರುಳ್ಳಿ, ಟೊಮೆಟೊ ಹಾಕಿ ಹುರಿಯಿರಿ. ನಂತರ ತರಕಾರಿ, ಬಟಾಣಿ ಎಲ್ಲಾ ಸೇರಿಸಿ ಮಿಶ್ರಣ ಮಾಡಿ. ರುಚಿಗೆ ತಕ್ಕಷ್ಟು ಉಪ್ಪು, ಎರಡು ಲೋಟ ನೀರು ಹಾಕಿ ಕುದಿಸಬೇಕು. ಕುದಿ ಬಂದ ನಂತರ ತೊಳೆದಿಟ್ಟ ಅಕ್ಕಿಯನ್ನು ಸೇರಿಸಿ ಕುಕರ್ ಮುಚ್ಚಿ 2 ಕೂಗು ಕೂಗಿಸಿಕೊಳ್ಳಿ. ಕುಕರ್ ಆರಿದ ನಂತರ ಇದಕ್ಕೆ ಪುಡಿ ಮಾಡಿದ ಹುರಿಗಡಲೆ, ತೆಂಗಿನತುರಿ, ಕೊತ್ತಂಬರಿ ಸೊಪ್ಪು ಸೇರಿಸಿದರೆ ರುಚಿಯಾದ ಅಕ್ಕಿ ಉಪ್ಪಿಟ್ಟು ಸವಿಯಲು ಸಿದ್ಧ.

ಕುಕರ್ ಚಿತ್ರಾನ್ನ



ಬೇಕಾಗುವ ಸಾಮಗ್ರಿಗಳು: ಅಕ್ಕಿ – 1 ಕಪ್, ಎಣ್ಣೆ – 3-4 ಚಮಚ, ಸಾಸಿವೆ – ಅರ್ಧ ಚಮಚ, ಕಡಲೆ ಬೇಳೆ – ಒಂದು ಚಮಚ, ಕಡಲೆಬೀಜ – ಎರಡು ಚಮಚ, ಹಸಿಮೆಣಸಿನಕಾಯಿ – 6, ಈರುಳ್ಳಿ – 1, ಟೊಮೆಟೊ – 1, ಉಪ್ಪು – ರುಚಿಗೆ ತಕ್ಕಷ್ಟು, ಕರಿಬೇವು – 10 ಎಲೆಗಳು

ತಯಾರಿಸುವ ವಿಧಾನ: ಮೊದಲು ಕುಕರ್‌ಗೆ ಎಣ್ಣೆಯನ್ನು ಹಾಕಿ, ಅದು ಕಾದ ನಂತರ ಸಾಸಿವೆ ಹಾಗೂ ಕರಿಬೇವು ಹಾಕಿ ಒಗ್ಗರಣೆ ಮಾಡಿ. ಈಗ ಇದಕ್ಕೆ ಕಡಲೆಬೇಳೆ ಹಾಗೂ ಕಡಲೆಕಾಯಿ ಬೀಜ ಹಾಕಿ ಹುರಿದುಕೊಳ್ಳಿ. ನಂತರ ಈರುಳ್ಳಿ, ಮೆಣಸಿನಕಾಯಿ, ಟೊಮೆಟೊ ಹಾಕಿ ಚೆನ್ನಾಗಿ ಹುರಿದುಕೊಂಡು, ಎರಡು ಲೋಟ ನೀರು, ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ನೀರು ಕುದಿ ಬಂದ ನಂತರ ತೊಳೆದಿಟ್ಟ ಅಕ್ಕಿಯನ್ನು ಸೇರಿಸಿ ಕುಕರ್ ಮುಚ್ಚಿ ಎರಡು ಕೂಗು ಕೂಗಿಸಿ. ಈಗ ರುಚಿಯಾದ ಧಿಡೀರನೆ ಮಾಡುವಂತಹ ಕುಕರ್ ಚಿತ್ರಾನ್ನ ಸವಿಯಲು ಸಿದ್ಧ.

ಚೈತನ್ಯ ಉಕ್ಕಲು ಬಾದಾಮಿ, ಬಾಳೆಹಣ್ಣು

ಅಮೃತ

ವರ್ಕ್ ಫ್ರಮ್ ಹೋಂ

ಹಗಲು ದೀರ್ಘವಾಗುತ್ತಿದೆ.. ಬಹುತೇಕರು ಮನೆಯಿಂದಲೇ, ಕೆಲವರು ಕಚೇರಿಯಿಂದ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಬಹಳಷ್ಟು ಮಂದಿಗೆ ಪ್ರೋತ್ಸಾಹ, ಚೈತನ್ಯ ನೀಡುವ ಸಹೋದ್ಯೋಗಿಗಳಿಲ್ಲ, ಕ್ಯಾಬ್‌ನಲ್ಲಿ ಮನೆಗೆ ಹೋಗುವಾಗ ಜೋಕ್‌ಗಳ ನಗೆಬುಗ್ಗೆಗಳಿಲ್ಲ, ದಿನವಿಡೀ ಚೈತನ್ಯ ಹಿಡಿದಿಟ್ಟುಕೊಳ್ಳಲು ಮನಸ್ಸಿನೊಳಗೆ ಚಿಕ್ಕ ಹೋರಾಟವೇ ನಡೆಯುತ್ತಿರುತ್ತದೆ. ಕಪ್‌ಗಳ ಮೇಲೆ ಕಪ್ ಕಾಫಿ ಕುಡಿದರೆ ಈ ಚೈತನ್ಯ ಬಂದಂತೆ ಒಂದು ಕ್ಷಣ ಎನಿಸಿದರೂ ತಕ್ಷಣವೇ ದೇಹ ಸೊರಗಿ ಮನಸ್ಸು ಇನ್ನಷ್ಟು ಮುದುಡುತ್ತದೆ. ಹೀಗಾಗಿ ಉತ್ಸಾಹ ಮೂಡಿಸುವ ಒಂದಿಷ್ಟು ಆಹಾರ ಸೇವನೆಯೇ ಇದಕ್ಕಿರುವ ಪರಿಹಾರ.



ನಿತ್ಯ ಮೂರು ಮುಖ್ಯ ಊಟಗಳು, ಮಧ್ಯೆ ಎರಡು ಸಲ ತಿಂಡಿ- ತಿನಿಸು; 3–4 ತಾಸಿಗೊಮ್ಮೆ ಏನನ್ನಾದರೂ ಸೇವಿಸುತ್ತಿರಬೇಕು. ಜಾಸ್ತಿ ಸಮಯ ಖಾಲಿ ಹೊಟ್ಟೆಯಲ್ಲಿದ್ದರೆ ರಕ್ತದಲ್ಲಿನ ಗ್ಲುಕೋಸ್ ಮಟ್ಟ ಕುಸಿದು ತಡೆಯಲಾರದಷ್ಟು ಹಸಿವೆಯಾಗಿ ಅನಾರೋಗ್ಯಕರ ಆಹಾರ ಹೊಟ್ಟೆ ಸೇರಬಹುದು. ಹೀಗಾಗಿ ಪ್ರೊಟೀನ್, ಆರೋಗ್ಯಕರ ಕೊಬ್ಬು, ನಾರಿನಾಂಶವಿರುವ ಆಹಾರ ಸೇವಿಸಿದರೆ ಬಹು ಹೊತ್ತಿನವರೆಗೆ ಚೈತನ್ಯ, ಶಕ್ತಿ ದೇಹದಲ್ಲಿರುತ್ತದೆ ಎನ್ನುತ್ತಾರೆ ಲೈಫ್‌ಸ್ಟೈಲ್ ಕಾಯಿಲೆ ತಜ್ಞ ಡಾ. ತೇಜಸ್ ಟಿ.ಎಸ್.

ಬಾಳೆಹಣ್ಣು: ಸ್ಥಳೀಯವಾಗಿ ದೊರಕುವ ಬಾಳೆಹಣ್ಣು ಶಕ್ತಿಯ ಆಗರ. ಸೇವಿಸಿದ ತಕ್ಷಣವೇ ಚೇತನದ ಚಿಲುಮೆಯಾಗುತ್ತದೆ ನಿಮ್ಮ ದೇಹ. ನೈಸರ್ಗಿಕವಾದ ಫ್ರಕ್ಟೋಸ್ ಸಾಕಷ್ಟು ಕಾರ್ಬೊಹೈಡ್ರೇಟ್ ಅನ್ನು ಒದಗಿಸುತ್ತದೆ. ತಕ್ಷಣಕ್ಕೆ ಗ್ಲುಕೋಸ್ ಆಗಿ ಬದಲಾಗಿ ರಕ್ತಕ್ಕೆ ಸೇರುತ್ತದೆ. ಇದು ಸುಲಭವಾಗಿ ಜೀರ್ಣವಾಗುತ್ತದೆ ಕೂಡ.

ಮೊಟ್ಟೆ: ಇದು ಪ್ರೊಟೀನ್ ಮೂಲ. ತರಕಾರಿ ಜೊತೆ ಸೇರಿಸಿ ಎಷ್ಟೋ ಬಗೆಯ ತಿನಿಸು ತಯಾರಿಸಬಹುದು. ಸಂಕೀರ್ಣವಾದ ಕಾರ್ಬೊಹೈಡ್ರೇಟ್ ಇರುವ ಮೊಟ್ಟೆಯ ಅಂಶ ನಿಧಾನವಾಗಿ ರಕ್ತಕ್ಕೆ ಸೇರಿದರೂ ಪೌಷ್ಟಿಕಾಂಶಗಳು ಹೇರಳವಾಗಿದ್ದು, ದೇಹಕ್ಕೆ ಶಕ್ತಿ ಒದಗಿಸುತ್ತದೆ.

ನೀರು: ನೀರು ಒಂದು ಆಹಾರವೇ ಎಂದು ಕೆಲವರು ಪ್ರಶ್ನಿಸಬಹುದು. ಆದರೆ ದೇಹದಲ್ಲಿ ನೀರಿನ ಅಂಶ ಕಡಿಮೆಯಾದಾಗ ಆಯಾಸವಾಗುವುದು ಸಹಜ. ಅಂದರೆ ನಿರ್ಜಲೀಕರಣವಾದಾಗ ದೇಹದ ಭಾಗಗಳಿಗೆ ಸರಿಯಾಗಿ ಆಮ್ಲಜನಕ ಪೂರೈಕೆಯಾಗದೆ ಸುಸ್ತಾಗುತ್ತದೆ. ಆಗಾಗ ನೀರು ಕುಡಿಯುತ್ತಿದ್ದರೆ ದೇಹಕ್ಕೆ ಶಕ್ತಿ ತಾನಾಗೇ ದೊರಕುತ್ತದೆ. 8–10 ಲೋಟ ನೀರು ಕುಡಿಯುವುದು ಸೂಕ್ತ ಎನ್ನುತ್ತಾರೆ ಡಾ. ತೇಜಸ್. ಮೂತ್ರದ ಬಣ್ಣ ಗಾಢ ಹಳದಿ ಇದ್ದರೆ ನೀವು ಹೆಚ್ಚು ನೀರು ಕುಡಿಯುತ್ತಿಲ್ಲ ಎಂದೇ ಅರ್ಥ.

ಪಿಸ್ತಾ, ಬಾದಾಮಿ: ಹೆಚ್ಚು ಪ್ರೊಟೀನ್ ಬೇಕಾದರೆ ಪಿಸ್ತಾ ಮತ್ತು ಬಾದಾಮಿ ತಿನ್ನಿ. ಇದು ಸಸ್ಯಮೂಲದ ಪ್ರೊಟೀನ್ ಆಗಿದ್ದು, ದೇಹಕ್ಕೆ ಇಂಧನದಂತೆ ಕೆಲಸ ಮಾಡುತ್ತವೆ. ಹಾಗೆಯೇ ನಾರಿನಾಂಶವೂ ಲಭ್ಯವಾಗುತ್ತದೆ. ಜೊತೆಗೆ ಒಳ್ಳೆಯ ಕೊಬ್ಬಿನಾಂಶ ಇದರಲ್ಲಿದೆ. ❖

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

ಲೈಂಗಿಕತೆಯ ಜನಜನಿತ ತಪ್ಪು ತಿಳಿವಳಿಕೆಗಳು

- **30 ವರ್ಷದ ಪುರುಷ. ಮದುವೆಯಾಗಿ ಒಂದು ವರ್ಷವಾಯಿತು. ನನ್ನ ಶಿಶ್ನ ಚಿಕ್ಕದಾಗಿರುವುದರಿಂದ ಮತ್ತು ಬೇಗನೆ ಗಡಸುತನವನ್ನು ಕಳೆದುಕೊಳ್ಳುವುದರಿಂದ ಲೈಂಗಿಕ ಸುಖ ಸಿಗುತ್ತಿಲ್ಲ. ಪತ್ನಿಯ ಅಂಗಾಂಗಗಳು ದೊಡ್ಡದಾಗಿವೆ ಅನ್ನಿಸುವುದರಿಂದ ಸುಖದ ಅನುಭವವಾಗುತ್ತಿಲ್ಲ. ಇದರಿಂದ ಬೇಸರವಾಗಿದೆ. ಸಹಾಯಮಾಡಿ.**

ಕುಮಾರ್, ಹಾವೇರಿ

ಲೈಂಗಿಕ ವಿಷಯಗಳಲ್ಲಿ ನಿಮಗೆ ಬಹಳ ಹಿಂಜರಿಕೆ ಮತ್ತು ತಪ್ಪು ತಿಳಿವಳಿಕೆಗಳಿರುವಂತಿದೆ. ಅಂಗಾಂಗಗಳ ಅಳತೆಗೂ ಲೈಂಗಿಕ ಸುಖಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ದೊಡ್ಡ ಗಾತ್ರದ ಶಿಶ್ನ ಲೈಂಗಿಕ ಸುಖವನ್ನು ಹೆಚ್ಚಿಸುತ್ತದೆ ಎನ್ನುವುದು ಸಾಮಾನ್ಯ ತಪ್ಪು ತಿಳಿವಳಿಕೆ. ಹಾಗಾಗಿ ಶಿಶ್ನದ ಗಾತ್ರವನ್ನು ಹೆಚ್ಚಿಸಲು ಸಾಕಷ್ಟು ನಕಲಿ ಔಷಧಿಗಳು ಮಾರಾಟವಾಗುತ್ತವೆ. ಸ್ತ್ರೀಪುರುಷರ ಲೈಂಗಿಕ ಅಂಗಾಂಗಗಳ ತುದಿಯಲ್ಲಿ ಮಾತ್ರ ಸಂವೇದನಾಶೀಲತೆ ಹೆಚ್ಚಾಗಿರುತ್ತದೆ. ಹಾಗಾಗಿ ಲೈಂಗಿಕ ಸುಖಕ್ಕೂ ಅಂಗಾಂಗಗಳ ಅಳತೆಗೂ ಸಂಬಂಧವಿರುವುದಿಲ್ಲ. ಲೈಂಗಿಕ ಸುಖ ಮತ್ತು ತೃಪ್ತಿ ಪತಿಪತ್ನಿಯರ ಮನಸ್ಸಿನಲ್ಲಿ ಮತ್ತು ಅವರಿಬ್ಬರ ಸಂಬಂಧದಲ್ಲಿ ಏನೇನು ನಡೆಯುತ್ತಿರುತ್ತದೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಎಲ್ಲಾ ವಿಚಾರಗಳನ್ನು ಇಬ್ಬರೂ ಮುಕ್ತವಾಗಿ ಚರ್ಚೆ ಮಾಡಿ ಪರಸ್ಪರರ ಅಗತ್ಯವನ್ನು ಪೂರೈಸುವುದು ಹೇಗೆ ಎಂದು ತಿಳಿದುಕೊಳ್ಳಿ. ನಿಮ್ಮ ಅಂಗ ಬೇಗನೆ ಗಡಸುತನವನ್ನು ಕಳೆದುಕೊಳ್ಳುವುದಕ್ಕೂ ನಿಮ್ಮ ಆತಂಕ ಹಿಂಜರಿಕೆಗಳೇ ಕಾರಣ. ಅಗತ್ಯವಿದ್ದರೆ ಲೈಂಗಿಕಮನೋಚಿಕಿತ್ಸಕರನ್ನು ಸಂಪರ್ಕಿಸಿ. ಅನಗತ್ಯವಾದ ಮಾತ್ರೆ ಔಷಧಗಳನ್ನು ಸೇವಿಸಬೇಡಿ.

- **ವೀರ್ಯ ಸ್ತಂಭನ (ಸೆಮನ್ ರಿಟೆನ್ಷನ್) ಎಂದರೇನು? ಮನಶ್ಶಾಂತಿಗೆ, ಜ್ಞಾನಾರ್ಜನೆಗೆ ಇದು ಹೇಗೆ ಸಹಾಯಮಾಡುತ್ತದೆ? ಇದನ್ನು ಹೇಗೆ ಮಾಡುವುದು?**

ಹೆಸರು, ಊರು ತಿಳಿಸಿಲ್ಲ.

ಪುರುಷರ ವೀರ್ಯಾಣು ಇನ್ನೊಂದು ಹೊಸ ಜೀವವನ್ನು ಸೃಷ್ಟಿಸುವಷ್ಟು ಶಕ್ತಿಯುತವಾಗಿರುತ್ತದೆ ಎನ್ನುವ ನಂಬಿಕೆಯಿಂದ ಸಾಕಷ್ಟು ಸಂಸ್ಕೃತಿಗಳಲ್ಲಿ ವೀರ್ಯ ಸ್ತಂಭನ ಬಹಳ ಉಪಯುಕ್ತ ಎನ್ನುವ ಚಿಂತನೆ ಬಂದಿರಬಹುದು. ಆದರೆ ವೈಜ್ಞಾನಿಕವಾಗಿ ಇದಕ್ಕೆ ಯಾವುದೇ ಆಧಾರಗಳಿಲ್ಲ. ಹೊಸ ಸೃಷ್ಟಿಗೆ ವೀರ್ಯಾಣುವಿನಷ್ಟೇ ಅಗತ್ಯವಾದ ಸ್ತ್ರೀಯರ ಅಂಡಾಣು 28 ದಿನಗಳ ನಂತರ ನಿರ್ಜೀವವಾಗಿ ಹೊರಹೋಗಿ ಹೊಸದೊಂದು ಸೃಷ್ಟಿಯಾಗುತ್ತದೆ. ಹಾಗೆಯೇ ವೀರ್ಯಾಣುಗಳು ನಿರ್ದಿಷ್ಟ ಅವಧಿಯವರೆಗೆ ಮಾತ್ರ ಜೀವಂತವಿದ್ದು ನಂತರ ದೇಹ ಅದನ್ನು ಹೀರಿಕೊಂಡು ಹೊಸದನ್ನು ಸೃಷ್ಟಿಸುತ್ತಲೇ ಇರುತ್ತದೆ. ವೀರ್ಯಾಣುಗಳೂ ಕೂಡ ದೇಹದಲ್ಲಿ ಸೃಷ್ಟಿಯಾಗುವ ಇತರ ಜೀವಕೋಶಗಳಂತೆಯೇ ಇದ್ದು ಕೇವಲ 23 ಕ್ರೋಮೊಸೋಮ್‌ಗಳನ್ನು (ಇತರ ಜೀವಕೋಶಗಳಲ್ಲಿರುವುದು 46) ಹೊಂದಿರುತ್ತವೆ. ದೇಹದ ಎಲ್ಲಾ ಜೀವಕೋಶಗಳ ನಾಶ ಮರುಸೃಷ್ಟಿ ನಡೆಯುತ್ತಲೇ ಇರುತ್ತದೆ. ಹಾಗಾಗಿ ವೀರ್ಯ ಸ್ತಂಭನ ಮನಶ್ಶಾಂತಿ, ಜ್ಞಾನಾರ್ಜನೆಗೆ ಸಹಾಯವಾಗುತ್ತದೆ ಎನ್ನುವುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಯಿಲ್ಲ. ಲೈಂಗಿಕ ಸುಖವನ್ನು ಅನುಭವಿಸುತ್ತಲೇ ನಿಮಗೆ ಬೇಕಾದ ಎಲ್ಲಾ ಸಾಧನೆಗಳನ್ನು ಮಾಡಲು ಸಾಧ್ಯವಿದೆ.

- **24ರ ಯುವಕ. ದೇವರಲ್ಲಿ ಅಪಾರ ನಂಬಿಕೆಯಿದ್ದು, ದಿನನಿತ್ಯ ಜಪತಪ ಪೂಜೆಗಳನ್ನು ಮಾಡುತ್ತೇನೆ. ಕೆಲವೊಮ್ಮೆ ಹಸ್ತಮೈಥುನ ಮಾಡುತ್ತೇನೆ. ಅದನ್ನು ನಿಯಂತ್ರಿಸಲಾಗುತ್ತಿಲ್ಲ. ಇದರಿಂದಾಗಿ ಪೂಜೆ, ಧ್ಯಾನ ಮಾಡಲು ಕಷ್ಟವಾಗುತ್ತಿದೆ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ಹಸ್ತಮೈಥುನ ಪಾಪದ ಕೆಲಸ ಎನ್ನುವ ನಂಬಿಕೆಯಲ್ಲಿ ನಿಮ್ಮ ಮಾನಸಿಕ ಕಷ್ಟಗಳ ಮೂಲವಿದೆಯಲ್ಲವೇ? ಆರೋಗ್ಯಕರ ಲೈಂಗಿಕತೆಯನ್ನು ಎಲ್ಲೂ ಕೀಳುಗಳೆಯಲಾಗಿಲ್ಲ. ಭಾರತೀಯ ದೇವರುಗಳಲ್ಲಿ ಹೆಚ್ಚಿನವರು ವಿವಾಹಿತರು ಮತ್ತು ಪತ್ನಿ ಸಮೇತರಾಗಿಯೇ ಕಾಣಿಸಿಕೊಳ್ಳುತ್ತಾರೆ. ಭಾರತದ ದೇವಸ್ಥಾನಗಳ ಹೊರಾಂಗಣದಲ್ಲಿ ಇರುವ ಲೈಂಗಿಕ ಶಿಲ್ಪಗಳಲ್ಲಿ ಹಸ್ತಮೈಥುನವನ್ನು ಕೂಡ ತೋರಿಸಲಾಗಿದೆ ಎಂದು ನಿಮಗೆ ಗೊತ್ತೇ? ದೇವರಿಂದ ದೂರಹೋಗುವ ಕ್ರಿಯೆ ಇದಾಗಿದ್ದರೆ ದೇವಸ್ಥಾನಗಳಲ್ಲಿ ಇವುಗಳಿಗೆ ಸ್ಥಾನವಿರಲು ಸಾಧ್ಯವಿತ್ತೇ? ದೀರ್ಘಕಾಲದ ಸಹಜೀವನಕ್ಕೆ ಸಂಗಾತಿಯನ್ನು ಹುಡುಕಿಕೊಳ್ಳುವವರೆಗೆ ಹಸ್ತಮೈಥುನ ಲೈಂಗಿಕ ಒತ್ತಡವನ್ನು ತಣಿಸಿಕೊಳ್ಳಲು ಆರೋಗ್ಯಕರ ಮಾರ್ಗ ಎಂದು ವಿಜ್ಞಾನ ಹೇಳುತ್ತದೆ. ನಿಮ್ಮ ಲೈಂಗಿಕತೆಯನ್ನು ಆನಂದಿಸುತ್ತಲೇ ಜಪತಗಳನ್ನು ಮುಂದುವರೆಸಿ. ಲೈಂಗಿಕತೆ ಮತ್ತು ದೈವಭಕ್ತಿ ಪರಸ್ಪರ ಪೂರಕ ಶಕ್ತಿಗಳೇ ಹೊರತು ವಿರುದ್ಧ ದಿಕ್ಕಿಗೆ ನೂಕುವ ಶಕ್ತಿಗಳಾಗಿರುವುದಿಲ್ಲ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.
bhoomika@prajavani.co.in

ಸ್ಯಾನಿಟೈಸರ್‌ನಿಂದ ಒಣ ಚರ್ಮ ಸಮಸ್ಯೆಯೇ?



ಮನೆ ಮದ್ದು

ಕಳೆದ ಒಂದು ವರ್ಷದಿಂದ ನೀವು ಎಷ್ಟು ಸಲ ಕೈಗೆ ಸ್ಯಾನಿಟೈಸರ್, ಸೋಪ್ ಹಾಕಿ ಉಜ್ಜಿ ಉಜ್ಜಿ ತೊಳೆದಿರಬಹುದು? ನೂರಾರು ಅಲ್ಲ, ಸಾವಿರಾರು ಸಲ ಇರಬಹುದು ಅಲ್ಲವೇ? ಈ ಕೋವಿಡ್ ಸಂದರ್ಭದಲ್ಲಿ ವೈರಸ್ ಅನ್ನು ದೂರ ಇಡಲು ಪದೇ ಪದೇ ಕೈ ತೊಳೆದು ಸ್ವಚ್ಛತೆ ಕಾಪಾಡುವುದೇನೋ ಸರಿ. ಆದರೆ ಅಂಗೈ ಚರ್ಮ ಒಣಗಿಕೊಂಡು ಹುರುಪೆ ಏಳುವುದು, ದೊರಗಾಗುವುದು, ಕೆಂಪಗಾಗುವುದು, ಸಣ್ಣ ಬಿರುಕು ಕಾಣಿಸುವಂತಹ ಸಮಸ್ಯೆಗಳು ಹಲವರಲ್ಲಿ ಉದ್ಭವಿಸಿವೆ. ಆಲ್ಕೋಹಾಲ್ ಇರುವ ಸ್ಯಾನಿಟೈಸರ್ ಬಳಸಿದರಂತೂ ಇಂತಹ ಸಮಸ್ಯೆಗಳು ಹೆಚ್ಚು ಎನ್ನುತ್ತಾರೆ ತಜ್ಞರು.

ಕೈಗಳಿಗೆ ಅಂಟಿಕೊಳ್ಳಬಹುದಾದ ಕೊರೊನಾ ವೈರಸ್ ಅನ್ನು ತೊಲಗಿಸಲು ಆಲ್ಕೋಹಾಲ್ ಇರುವ ಸ್ಯಾನಿಟೈಸರ್ ಸೂಕ್ತ. ಆದರೆ ಇದು ಅಂಗೈ ಚರ್ಮದಲ್ಲಿರುವ ತೇವಾಂಶವನ್ನು ಕೂಡ ಕಡಿಮೆ ಮಾಡಿ ಒಣಗಿಸಿಬಿಡುತ್ತದೆ. ಇದರಿಂದ ಅಂಗೈನಲ್ಲಿ ತುರಿಕೆ ಕೂಡ ಕಾಣಿಸಿಕೊಳ್ಳಬಹುದು. ಸೋಪ್ ಬಳಸಿ ಕೈಗಳನ್ನು ಪದೇ ಪದೇ ತೊಳೆದಾಗ ಕೂಡ ಇಂತಹ ಅನುಭವವಾಗುವುದು ಸಹಜ.

ಹಾಗಂತ ಕೈ ತೊಳೆಯುವುದನ್ನು ನಿಲ್ಲಿಸುವುದು ಆರೋಗ್ಯದ ದೃಷ್ಟಿಯಿಂದ ಈ ಸಂದರ್ಭದಲ್ಲಂತೂ ಒಳ್ಳೆಯದಲ್ಲ. ಕೈ ತೊಳೆದ ನಂತರ ಕೆಲವು ವಿಧಾನಗಳನ್ನು ಅನುಸರಿಸಿದರೆ ಒಣ ಚರ್ಮ, ತುರಿಕೆಯಂತಹ ಕಿರಿಕಿರಿಯಿಂದ ಪಾರಾಗಬಹುದು.

ಪ್ರತಿ ಸಲ ಕೈ ತೊಳೆದಾಗಲೂ ಉತ್ತಮ ಮಾಯಿಶ್ಚರೈಸರ್ ಬಳಸಿ. ಅಂಗೈ ಮೇಲೆ ಒಂದಿಷ್ಟು ಮಾಯಿಶ್ಚರೈಸರ್ ಸುರುವಿಕೊಂಡು ಚೆನ್ನಾಗಿ ಎರಡೂ ಕೈಗಳನ್ನು ಸೇರಿಸಿ ಉಜ್ಜಿಕೊಳ್ಳಿ. ಬೆರಳಿಗೆ ಮುಂಗೈಗೆ ಕೂಡ ಲೇಪಿಸಿಕೊಳ್ಳಿ. ಹೆಚ್ಚು ರಾಸಾಯನಿಕಗಳಿಲ್ಲದ ಹರ್ಬಲ್ ಮಾಯಿಶ್ಚರೈಸರ್ ಬಳಸುವುದು ಸೂಕ್ತ ಎನ್ನುತ್ತಾರೆ ತಜ್ಞರು. ಹಾಗೆಯೇ ಪೆಟ್ರೋಲಿಯಂ ಜೆಲ್ಲಿಯನ್ನೂ ಬಳಸಬಹುದು.

ಈ ಸಮಸ್ಯೆ ನಿವಾರಣೆಗೆ ಸಾಕಷ್ಟು ಮನೆ ಮದ್ದುಗಳಿವೆ.

- ಲೋಳೆಸರ ಇದಕ್ಕೆ ಉತ್ತಮವಾದ ಪರಿಹಾರ. ಮನೆಯಲ್ಲೇ ಲೋಳೆಸರದ ಗಿಡವಿದ್ದರೆ ಅದರ ಜೆಲ್ ತೆಗೆದು ಕೈಗಳಿಗೆ ಲೇಪಿಸಿಕೊಳ್ಳಿ. ಅದಿಲ್ಲದಿದ್ದರೆ ಅಂಗಡಿಯಿಂದ ಜೆಲ್ ತಂದು ಬಳಸಬಹುದು.
- ಕೊಬ್ಬರಿ ಎಣ್ಣೆಯನ್ನು ಕೈಗೆ ಲೇಪಿಸುವುದರಿಂದ ಒಣ ಚರ್ಮದ ಸಮಸ್ಯೆ ನಿವಾರಿಸಿಕೊಳ್ಳಬಹುದು. ಸ್ಯಾನಿಟೈಸರ್ ಅಥವಾ ಸೋಪ್‌ನಿಂದ ಕೈ ತೊಳೆದ ತಕ್ಷಣ ಟವೆಲ್‌ನಿಂದ ಒರೆಸಿಕೊಂಡು ಕೊಬ್ಬರಿ ಎಣ್ಣೆ ಸವರಿಕೊಳ್ಳಿ. ಇದೇ ರೀತಿ ಆಲಿವ್ ಎಣ್ಣೆಯನ್ನೂ ಬಳಸಬಹುದು.
- ಓಟ್ಸ್ ಅನ್ನು ಚೆನ್ನಾಗಿ ಪುಡಿ ಮಾಡಿ ಕೊಬ್ಬರಿ ಎಣ್ಣೆ ಅಥವಾ ಸೂರ್ಯಕಾಂತಿ ಎಣ್ಣೆ ಜೊತೆ ಸೇರಿಸಿ ಬಾಟಲ್‌ನಲ್ಲಿ ತುಂಬಿಸಿಟ್ಟುಕೊಳ್ಳಿ. ಇದನ್ನು ಆಗಾಗ ಕೈಗಳಿಗೆ ಲೇಪಿಸಿಕೊಂಡರೆ ತೇವಾಂಶ ಜಾಸ್ತಿಯಾಗುತ್ತದೆ.
- ಅರ್ಧ ಚಮಚ ಲಿಂಬೆರಸಕ್ಕೆ ಒಂದೆರಡು ಹನಿ ಜೇನುತುಪ್ಪ ಸೇರಿಸಿ ಕೈಗಳಿಗೆ ಹಚ್ಚಿಕೊಳ್ಳಿ. ❖



ಸುಭಾಷಿತ

ನಿಮ್ಮ ಬದುಕಿನಲ್ಲಿ ಸಂಭವಿಸುವ ಎಲ್ಲ ಸಂಗತಿಗಳನ್ನೂ ನಿಯಂತ್ರಿಸಲು ನಿಮಗೆ ಸಾಧ್ಯವಾಗದೇ ಇರಬಹುದು. ಆದರೆ, ಅವುಗಳಿಂದ ಧೃತಿಗೆಡದೇ ಇರುವಂತೆ ನಿರ್ಧರಿಸಲು ನಿಮಗೆ ಸಾಧ್ಯವಾಗುತ್ತದೆ.

–ಮಾಯಾ ಏಂಜೆಲೊ

ಸಾಲದ ಒತ್ತಡ ನಿವಾರಿಸುವ ಕ್ರಮ ಬೇಡಿಕೆ, ಉತ್ಪಾದಕತೆ ಹೆಚ್ಚಿಸಬೇಕು

ಕೊರೊನಾ ಸೋಂಕಿನ ಎರಡನೇ ಅಲೆಯನ್ನು ನಿಭಾಯಿಸಲು ದೇಶದ ಬಹುತೇಕ ಕಡೆಗಳಲ್ಲಿ ಲಾಕ್‌ಡೌನ್ ಅಥವಾ ಒಂದಲ್ಲ ಒಂದು ಬಗೆಯ ನಿರ್ಬಂಧಗಳು ಜಾರಿಗೆ ಬಂದಿವೆ. ಇಂತಹ ಸಂದರ್ಭದಲ್ಲಿ ವ್ಯವಸ್ಥೆಯಲ್ಲಿ ಹಣದ ಹರಿವು ಸರಾಗವಾಗಿ ಇರುವಂತೆ ಮಾಡುವ ಹಲವು ಪ್ರಯತ್ನಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂದಾಗಿದೆ. ವೈರಾಣು ಹರಡುವುದನ್ನು ತಡೆಯುವ ಲಾಕ್‌ಡೌನ್ ಅಥವಾ ಇತರ ನಿರ್ಬಂಧ ಕ್ರಮಗಳು ಅರ್ಥ ವ್ಯವಸ್ಥೆಯ ಬಂಡಿ ಸುಗಮವಾಗಿ ಚಲಿಸದಂತೆ ಮಾಡುತ್ತವೆ. ಈ ಬಾರಿ ಕೇಂದ್ರ ಸರ್ಕಾರವು ಲಾಕ್‌ಡೌನ್ ಘೋಷಿಸಿಲ್ಲ; ಲಾಕ್‌ಡೌನ್ ಜಾರಿಗೆ ತರಬೇಕೋ ಬೇಡವೋ ಎಂಬುದನ್ನು ರಾಜ್ಯಗಳೇ ತೀರ್ಮಾನಿಸಬಹುದು ಎಂದು ಸ್ಪಷ್ಟಪಡಿಸಿದೆ. ಆರ್ಥಿಕವಾಗಿ ಹೆಚ್ಚು ಚಲನಶೀಲವಾಗಿರುವ ಕರ್ನಾಟಕ, ಮಹಾರಾಷ್ಟ್ರ, ಕೇರಳ ಸೇರಿದಂತೆ ಹಲವು ರಾಜ್ಯಗಳು ಲಾಕ್‌ಡೌನ್ ಜಾರಿಗೊಳಿಸಿವೆ. ಇಂತಹ ಸಂದರ್ಭದಲ್ಲಿ ಆರ್‌ಬಿಐ ಕೈಗೊಂಡಿರುವ ಕ್ರಮಗಳು ಸ್ವಾಗತಾರ್ಹ. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳು ಪಡೆದಿರುವ ₹ 25 ಕೋಟಿವರೆಗಿನ ಸಾಲದ ಮರುಪಾವತಿಯನ್ನು ಎರಡು ವರ್ಷಗಳ ವರೆಗೆ ವಿಸ್ತರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯವು ವ್ಯಕ್ತಿಗಳು ಪಡೆದಿರುವ ಸಾಲಕ್ಕೂ ಇದೆ. ಲಾಕ್‌ಡೌನ್‌ನಿಂದಾಗಿ ಮಾರುಕಟ್ಟೆಗಳು ಬಾಗಿಲು ಮುಚ್ಚಿವೆ. ಕೈಗಾರಿಕೆಗಳಲ್ಲಿ ಸಿದ್ಧವಾದ ವಸ್ತುಗಳ ಮಾರಾಟಕ್ಕೆ ದೊಡ್ಡ ಅವಕಾಶ ಇಲ್ಲ – ಆನ್‌ಲೈನ್ ಮೂಲಕ ಮಾತ್ರ ಮಾರಾಟ ಮಾಡಬಹುದು. ಇಂತಹ ಸಂದರ್ಭದಲ್ಲಿ ಸಾಲದ ಮರುಪಾವತಿಯ ನಿಯಮಗಳಲ್ಲಿ ತುಸು ಸಡಿಲಿಕೆ ಅಗತ್ಯವಾಗಿತ್ತು. ಆದರೆ, ಸಾಲ ಮರುಪಾವತಿ ಅವಧಿ ವಿಸ್ತರಣೆ ಅಂದರೆ, ಬಡ್ಡಿಯು ಅಸಲಿಗೆ ಸೇರಿ, ಅದಕ್ಕೆ ಚಕ್ರಬಡ್ಡಿ ವಿಧಿಸುವುದು ಎಂದೂ ಅರ್ಥ. ಹೀಗಾಗಿ, ಸಾಲ ಪಡೆದ ವ್ಯಕ್ತಿ ಮರುಪಾವತಿ ಮಾಡಬೇಕಾದ ಮೊತ್ತವು ಮರುಹೊಂದಾಣಿಕೆಗೂ ಮೊದಲು ಮಾಡಬೇಕಿದ್ದ ಮರುಪಾವತಿ ಮೊತ್ತಕ್ಕಿಂತ ತುಸು ಜಾಸ್ತಿಯೇ ಆಗುತ್ತದೆ. ಮಾರುಕಟ್ಟೆಗಳ ಬಾಗಿಲು ಮುಚ್ಚಿರುವ ಈ ಸಂದರ್ಭದಲ್ಲಿ ಎಷ್ಟು ಉದ್ಯಮಗಳಿಗೆ ಆರ್‌ಬಿಐ ಕಲ್ಪಿಸಿರುವ ಸೌಲಭ್ಯವನ್ನು ಪಡೆದುಕೊಳ್ಳುವ ಶಕ್ತಿ ಇದೆ ಎಂಬುದು ಇನ್ನಷ್ಟೇ ಗೊತ್ತಾಗಬೇಕು.



ಕೋವಿಡ್ ಎರಡನೇ ಅಲೆ ತಂದೊಡ್ಡಿರುವ ಆರ್ಥಿಕ ಸಂಕಷ್ಟದ ಈ ಸಂದರ್ಭದಲ್ಲಿ, ಆರ್‌ಬಿಐ ಮಾತ್ರವಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಉದ್ಯಮಗಳು ಹಾಗೂ ಸಾರ್ವಜನಿಕರ ನೆರವಿಗೆ ಧಾವಿಸುವುದು ಒಳಿತು

ಉದ್ಯಮಗಳ ಹಣಕಾಸಿನ ಶಕ್ತಿ ಕ್ಷೀಣಿಸಿರುವ ಜೊತೆಯಲ್ಲೇ ಜನಸಾಮಾನ್ಯರ ಕೊಳ್ಳುವ ಶಕ್ತಿಯೂ ಕುಂದಿದೆ. ಲಾಕ್‌ಡೌನ್ ಕ್ರಮಗಳು ಇನ್ನೂ ಎಷ್ಟು ದಿನ ಚಾಲ್ತಿಯಲ್ಲಿ ಇರುತ್ತವೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಹಾಗಾಗಿ, ಮಾರುಕಟ್ಟೆಯ ಬಾಗಿಲು ಯಾವಾಗ ಪುನಃ ತೆರೆದುಕೊಳ್ಳುತ್ತವೆ, ಬೇಡಿಕೆ ಚೇತರಿಕೆ ಯಾವಾಗ ಆಗುತ್ತದೆ ಎಂಬುದೂ ಸ್ಪಷ್ಟವಿಲ್ಲ. ಆರ್‌ಬಿಐ ಈಗ ಘೋಷಿಸಿರುವ ಕ್ರಮಗಳಲ್ಲಿ ಬಡ್ಡಿ ಮನ್ನಾ ಅಥವಾ ಸಾಲದ ಕಂತುಗಳ ಮರುಪಾವತಿಗೆ ವಿನಾಯಿತಿ (ಮೊರಟೋರಿಯಂ) ಇಲ್ಲ. ಇದು ಆರ್‌ಬಿಐ ಮಿತಿಯನ್ನೂ ಸೂಚಿಸುತ್ತದೆ. ಸಾಲದ ಮರುಪಾವತಿ ಅವಧಿಯ ಮರುಹೊಂದಾಣಿಕೆ ಯೋಜನೆಯ ಜೊತೆಯಲ್ಲೇ ಆರ್‌ಬಿಐ, ಕೆಲವು ಆದ್ಯತಾ ವಲಯಗಳಿಗೆ ತ್ವರಿತ ಸಾಲ ವಿತರಣೆಯ ಉದ್ದೇಶಕ್ಕೆ ₹ 50 ಸಾವಿರ ಕೋಟಿ ತೆಗೆದಿರಿಸುವುದಾಗಿ ಪ್ರಕಟಿಸಿದೆ. ವೈದ್ಯಕೀಯ ಉಪಕರಣ, ಲಸಿಕೆ ತಯಾರಿಸುವವರು ಸೇರಿದಂತೆ ಉದ್ಯಮದ ಕೆಲವು ವಲಯಗಳಿಗೆ ಇದರ ಪ್ರಯೋಜನ ಸಿಗಲಿದೆ. ಆರೋಗ್ಯ ವಿಕ್ಷಣ ಈ ಸಂದರ್ಭದಲ್ಲಿ ಇಂಥದ್ದೊಂದು ಕ್ರಮ ಅಪೇಕ್ಷಣೀಯ. ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಕೊನೆಯ ಭಾಗದಲ್ಲಿ ಭಾರತದ ಅರ್ಥ ವ್ಯವಸ್ಥೆಯು ಪುಟಿದೇಳುವ ರೀತಿಯಲ್ಲಿ ಸಾಗುತ್ತಿತ್ತು. ಆದರೆ ಎರಡನೆಯ ಅಲೆಯ ಕಾರಣದಿಂದಾಗಿ ಈಗ ಮೊದಲಿನ ವೇಗವನ್ನು ಅರ್ಥ ವ್ಯವಸ್ಥೆಯು ಕಳೆದುಕೊಂಡಿರುವಂತಿದೆ. ಹಲವು ರೇಟಿಂಗ್ ಸಂಸ್ಥೆಗಳು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣದ ಅಂದಾಜನ್ನು ತಗ್ಗಿಸಿವೆ. ಇಂತಹ ಸಂದರ್ಭದಲ್ಲಿ ಆರ್‌ಬಿಐ ಮಾತ್ರವಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಉದ್ಯಮಗಳು ಹಾಗೂ ಸಾರ್ವಜನಿಕರ ನೆರವಿಗೆ ಧಾವಿಸುವುದು ಒಳಿತು. ಈಗ ಬೇಡಿಕೆಯೂ ತಗ್ಗಿದೆ, ಉತ್ಪಾದಕತೆಯೂ ಕಡಿಮೆ ಆಗಿದೆ. ಹಾಗಾಗಿ, ಸಾರ್ವಜನಿಕರ ಮತ್ತು ಉದ್ಯಮಗಳ ನೆರವಿಗೆ ಏಕಕಾಲದಲ್ಲಿ ಮುಂದಾಗಿ, ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸುವ ಮತ್ತು ಕೈಗಾರಿಕೆಗಳ ಉತ್ಪಾದಕತೆ ಜಾಸ್ತಿ ಮಾಡುವ ಕ್ರಮಗಳನ್ನು ಸರ್ಕಾರಗಳು ಘೋಷಿಸುವುದು ಒಳಿತು.

ಮಕ್ಕಳು ಸ್ವ ಶ್ರಮದಿಂದ ಆದಾಯ ಗಳಿಸಿದರೆ ತಪ್ಪಲ್ಲ. ಆದರೆ ಅದು ಬಾಲಕಾರ್ಮಿಕತನ ಆಗಬಾರದು

ಶ್ರಮಸಂಸ್ಕೃತಿ ಮತ್ತು ಶೈಕ್ಷಣಿಕ ಪ್ರಜ್ಞೆ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಎರಡು ತಿಂಗಳ ಹಿಂದೆ ಒಬ್ಬ ವಿದ್ಯಾರ್ಥಿಯನ್ನು ಮಾತನಾಡಿಸಿದಾಗ, ಕಳೆದ ಕೊರೊನಾ ಅವಧಿಯನ್ನು ಅವನು ಸದುಪಯೋಗಪಡಿಸಿಕೊಂಡದ್ದು ಗೊತ್ತಾಯಿತು. ಖಾಲಿ ಬಿದ್ದಿದ್ದ ತನ್ನ ಭೂಮಿಯಲ್ಲಿ ಒಂದಷ್ಟು ಕಾಯಿ-ಪಲ್ಲೆ-ಹಣ್ಣುಗಳನ್ನೆಲ್ಲ ಬೆಳೆದು ಸುಮಾರು ಒಂದು ಲಕ್ಷ ರೂಪಾಯಿಯವರೆಗೆ ಸಂಪಾದಿಸಿದ್ದ. ಶ್ರಮ ಸಂಸ್ಕೃತಿಯ ಅರಿವನ್ನು ಬೆಳೆಸುವ ದಿಸೆಯಲ್ಲಿ ಇದು ಅಭಿನಂದನೀಯ ವಿಚಾರವಾಗಿದೆ.

ಆದರೆ ಇದು ಗಾಂಧೀಜಿಯವರ ಆರ್ಥಿಕ ಚಿಂತನೆಗಳ ಅನುಷ್ಠಾನವಾಗಿಯಷ್ಟೆ ಉಳಿಯುವುದಿಲ್ಲ. ಬದಲು ಮಕ್ಕಳು ಶಿಕ್ಷಣದ ಕುರಿತ ಆಸಕ್ತಿಯನ್ನು ಕಳೆದುಕೊಳ್ಳುವುದಕ್ಕೂ ಕಾರಣವಾಗುತ್ತದೆ. ಒಂದಷ್ಟು ಅಧ್ಯಯನ ನಡೆಸಿದಾಗ, ಹಣ ಸಂಪಾದಿಸಿದ ಅದೇ ವಿದ್ಯಾರ್ಥಿ ಶಾಲಾ ಕಲಿಕೆಯಲ್ಲಿ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಹೊಂದಿದ್ದ ಆಸಕ್ತಿಯನ್ನು, ಮೊದಲ ಕೊರೊನಾ ನಿರ್ಬಂಧದ ನಂತರದ ದಿನಗಳಲ್ಲಿ ಹೊಂದಿಲ್ಲದಿರುವುದೂ ಕಂಡುಬಂದಿತು. ಮತ್ತು ಈ ವಿದ್ಯಾರ್ಥಿ ಶ್ರಮ ಸಂಸ್ಕೃತಿಯ ಅರಿವಿದ್ದ ಕುಟುಂಬದಿಂದಲೇ ಬಂದಿದ್ದು, ಹೊಸದಾಗಿ ಶ್ರಮ ಸಂಸ್ಕೃತಿಯನ್ನು ಕಲಿಯುವಂತಹದ್ದೇನೂ ಇರಲಿಲ್ಲ. ಆದರೆ ಹಣ ಗಳಿಕೆಯು ಆ ವಿದ್ಯಾರ್ಥಿಯಲ್ಲೂ ವಿದ್ಯಾರ್ಥಿಯ ಕುಟುಂಬದಲ್ಲೂ ಬೇರೆಯದೇ ರೀತಿಯ ಆಲೋಚನಾ ಕ್ರಮವನ್ನು ರೂಪಿಸಿತ್ತು.

ಶಿಕ್ಷಣವನ್ನು ಪಡೆಯುವುದೇಕೆ? ಉದ್ಯೋಗಕ್ಕೆ. ಉದ್ಯೋಗದ ಉದ್ದೇಶ? ಆದಾಯ ಗಳಿಕೆ. ಈಗಲೇ ಆದಾಯ ಗಳಿಕೆಯ ಸಾಮರ್ಥ್ಯ ಇದೆಯಲ್ಲ, ಮತ್ತೇಕೆ ಶಿಕ್ಷಣ? ಈ ರೀತಿಯ ಸರಳ ತರ್ಕವನ್ನು ರೂಪಿಸಿಕೊಳ್ಳುವುದಕ್ಕೂ ಇದು ಪ್ರಚೋದಕವೇ ಆಯಿತು.

ಭಾರತದಲ್ಲಿ ಕೃಷಿರಂಗ ಮತ್ತು ಇತರ ದೈಹಿಕ ಶ್ರಮದ ಕ್ಷೇತ್ರದ ಉದ್ಯೋಗಗಳಿಗೆ ಆರ್ಥಿಕ ಆಯಾಮ ಮಾತ್ರವೇ ಇಲ್ಲ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಆಯಾಮಗಳೂ ಇವೆ. ಇಲ್ಲಿ ಉದ್ಯೋಗವು ವ್ಯಕ್ತಿ ಗೌರವದ ನಿರ್ಧಾರಕ ಅಂಶವಾಗಿ ಕೆಲಸ ಮಾಡುತ್ತದೆ. ಬೌದ್ಧಿಕ ಶ್ರಮದ ಕ್ಷೇತ್ರದ ಕೆಲಸಗಾರರಿಗೆ ಸಾಮಾಜಿಕ ಗೌರವ ಜಾಸ್ತಿ ಇರುತ್ತದೆ. ಭಾರತದ ಸಾಮಾಜಿಕ ರಚನೆಯ ಜಟಿಲ ಸ್ವರೂಪಗಳು ನಿರ್ಮಿಸುವ ಸಾಮಾಜಿಕ ಸ್ಥಾನಮಾನಗಳಲ್ಲಿ ಕೆಳಸ್ತರದ ಸ್ಥಾನಮಾನವನ್ನು ಹೊಂದಿದವರಿಗೆ ಕುಟುಂಬದ ಗೌರವವನ್ನು ಹೆಚ್ಚಿಸಿಕೊಳ್ಳಲು ಇರುವ ಏಕೈಕ ಅವಕಾಶವೆಂದರೆ, ಉದ್ಯೋಗವನ್ನು ದೈಹಿಕ ಶ್ರಮದ ಕ್ಷೇತ್ರದಿಂದ ಬೌದ್ಧಿಕ ಶ್ರಮದ ಕ್ಷೇತ್ರಕ್ಕೆ ಬದಲಾಯಿಸುವುದಾಗಿದೆ. ಈ ಬದಲಾವಣೆಯ ಪ್ರಮುಖ ನಿಯೋಗಿಗಳು ಎರಡು: ಶಿಕ್ಷಣ ಮತ್ತು ಆಧುನಿಕ ನಗರ ಸಂಸ್ಕೃತಿ.

ಹಲವು ರೀತಿಯಲ್ಲಿ ನಗರ ಸಂಸ್ಕೃತಿಯು ಕೆಡುಕುಗಳನ್ನು ಸೃಷ್ಟಿಸುತ್ತದೆ. ಆದರೆ ಹಳ್ಳಿಯ ಸಂಸ್ಕೃತಿಯು ಹುಟ್ಟುಹಾಕಿದ ಕೆಡುಕುಗಳು ಆಧುನಿಕ ನಗರ ಸಂಸ್ಕೃತಿಯಲ್ಲಿ ಇಲ್ಲ. ಉದಾಹರಣೆಗೆ, ಮತಧರ್ಮಗಳ ನಿರ್ಬಂಧಗಳಿಂದ ಹೊರಬಂದು ಸ್ವತಂತ್ರವಾಗಿ ಬದುಕಲು ಬಯಸಿದ ಮಹಿಳೆಯರಿಗೆ ಉದ್ಯೋಗ ಮಾಡಲು ನಗರವೇ ಅನುಕೂಲಕರ ಸನ್ನಿವೇಶವನ್ನು ಒದಗಿಸುತ್ತದೆ. ಏಕೆಂದರೆ ನಗರದಲ್ಲಿ ಸಾಮಾಜಿಕ ಜೀವನವಿಲ್ಲ. ವೈಯಕ್ತಿಕ ಜೀವನವಿರುವುದು. ಯಾರು ಯಾವ ಕಟ್ಟಲೆಗಳನ್ನು ಪಾಲಿಸದಿದ್ದರೂ ಯಾರಿಗೆ ಏನೂ ಆಗಬೇಕಾಗಿಲ್ಲ. ನಗರದಲ್ಲಿರುವ ಈ ಸ್ವಾತಂತ್ರ್ಯ ಹಳ್ಳಿಗಳಲ್ಲಿ ಇಲ್ಲ. ಆದರೆ ಇದಕ್ಕೆ ಅಂತಿಮ ಪರಿಹಾರ ನಗರೀಕರಣ ಅಲ್ಲ. ಬದಲು, ನಗರದಲ್ಲಿರುವ ಆಯ್ಕೆಯ ಸ್ವಾತಂತ್ರ್ಯದ ಸನ್ನಿವೇಶವನ್ನು ಹಳ್ಳಿಗಳಿಗೆ ಕೊಂಡೊಯ್ಯುವುದು. ಇದನ್ನು ಕೂಡ ಸಾಧಿಸಲು ಸಾಧ್ಯವಾಗುವುದು ಶಿಕ್ಷಣದ ಮೂಲಕವಾಗಿದೆ. ಆದ್ದರಿಂದ ಭಾರತದಲ್ಲಿ ಶಿಕ್ಷಣವು ಕೇವಲ ವ್ಯಕ್ತಿತ್ವ ವಿಕಾಸದ ಸಾಧನವಲ್ಲ. ಸಾಮಾಜಿಕ ವಿಕಾಸದ ಸಾಧನವೂ ಹೌದು.

ಹಾಗಿದ್ದರೆ ಶಿಕ್ಷಣದ ಉದ್ದೇಶ ಉದ್ಯೋಗ ಗಳಿಕೆ ಮಾತ್ರವೇ ಎಂದರೆ, ಖಂಡಿತವಾಗಿಯೂ ಅಲ್ಲ. ಆದರೆ ಮೂರು ಕಾರಣಗಳಿಗಾಗಿ ಉದ್ಯೋಗದೊಂದಿಗೆ ಶಿಕ್ಷಣಕ್ಕೆ ಇರುವ ಸಂಬಂಧವನ್ನು ಸ್ವೀಕರಿಸಬೇಕಾಗುತ್ತದೆ. ಯಾವುದೇ ದೇಶದಲ್ಲಿ ಅನ್ನ ಗಳಿಕೆಯ ಸಾಮರ್ಥ್ಯವನ್ನು ನೀಡುವುದು ಶಿಕ್ಷಣದ ಮುಖ್ಯ ಉದ್ದೇಶಗಳಲ್ಲಿ ಒಂದು ಎನ್ನುವುದು ಸಾರ್ವತ್ರಿಕ ಒಪ್ಪಿತ ವಿಚಾರವಾಗಿದೆ. ಆದರೆ ಅದೊಂದೇ ಅಲ್ಲ ಎನ್ನುವುದು ಶೈಕ್ಷಣಿಕ ತತ್ವಜ್ಞಾನದ ನಿಲುವಾಗಿದೆ. ಭಾರತದಲ್ಲಿ ಆರ್ಥಿಕ ಒತ್ತಡ ಜಾಸ್ತಿಯಾದಾಗ ಸಹಜವಾಗಿಯೇ ಶಿಕ್ಷಣ ಮತ್ತು ಉದ್ಯೋಗದ ಸಂಬಂಧಗಳು ಬಿಗಿಯಾಗಿ, ಮಾರುಕಟ್ಟೆಯ ಪರಿಭಾಷೆಯಲ್ಲಿ, ಒಳ್ಳೆಯ ಶಾಲೆಗಳ ಹುಡುಕಾಟ ನಡೆಯುತ್ತದೆ. ಉಪದೇಶ ಮಾಡುವುದರಿಂದ ಜನರ ಈ ಮನೋಧರ್ಮವನ್ನು ಬದಲಿಸಲು ಆಗುವುದಿಲ್ಲ. ಏಕೆಂದರೆ ಉದ್ಯೋಗವು ಅನೇಕರು ತಮ್ಮದಲ್ಲದ ತಪ್ಪುಗಳಿಗೆ ಕಂಡುಕೊಳ್ಳಲು ಇರುವ ಪರಿಹಾರವಾಗಿದೆ. ಆದ್ದರಿಂದ ಶಿಕ್ಷಣಕ್ಕೆ ಶೈಕ್ಷಣಿಕ ವ್ಯಾಪ್ತಿಯನ್ನು ಮೀರಿದ ಮಹತ್ವ ಭಾರತದಲ್ಲಿದೆ.

ಹಾಗಿದ್ದರೆ ಕೊಡುತ್ತಿರುವ ಶಿಕ್ಷಣವು ಇದೆಲ್ಲವನ್ನೂ ಸಾಧಿಸುತ್ತಿದೆಯೇ ಎಂದು ಕೇಳಿದರೆ ಬಹಳಷ್ಟು ಟೀಕೆಗಳೇ ಕೇಳಿಬರುತ್ತವೆ. ಆದರೆ ಟೀಕೆಯ ಉದ್ದೇಶ ಶಿಕ್ಷಣದ ಉತ್ತಮೀಕರಣವೇ ಹೊರತು, ಇರುವ ಶಿಕ್ಷಣವೂ ಬೇಡ ಎಂದಲ್ಲ. ವರ್ತಮಾನದ ಶೈಕ್ಷಣಿಕ ಸನ್ನಿವೇಶವನ್ನು ಸಮರ್ಪಕವಾಗಿ ನಿರ್ವಹಿಸದಿದ್ದರೆ, ಶಿಕ್ಷಣದ ಅವಶ್ಯಕತೆ ಇದೆಯೇ ಎಂದು ನಿಧಾನವಾಗಿ ಮಕ್ಕಳಿಗೆ ಅನಿಸಲು ಅವಕಾಶ ಸೃಷ್ಟಿಯಾಗುವ ಸಮಸ್ಯೆ ಇದೆ.

ಒಂದು ತರಗತಿ ಎಂದರೆ ಪಾಠ ಪುಸ್ತಕದ, ವಿಚಾರದ ವರ್ಗಾವಣೆಯಷ್ಟೇ ಅಲ್ಲ ಅಥವಾ ಪರೀಕ್ಷೆಗೆ ಸಿದ್ಧಪಡಿಸುವುದಷ್ಟೆಯೂ ಅಲ್ಲ. ಶಿಕ್ಷಕರು ಮಕ್ಕಳನ್ನು ಪರೀಕ್ಷೆಗಾಗಿಯಷ್ಟೆ ಸಿದ್ಧಪಡಿಸಿದಾಗಲೂ ತಾನೇ ತಾನಾಗಿ ತರಗತಿಯು ಒಂದು ಶೈಕ್ಷಣಿಕ ಸನ್ನಿವೇಶವನ್ನು ರೂಪಿಸುತ್ತದೆ. ಮಕ್ಕಳಲ್ಲಿ ಶೈಕ್ಷಣಿಕ ಪ್ರಜ್ಞೆ ಉಳಿಯಲು ಈ ಸನ್ನಿವೇಶ ಅತ್ಯಂತ ಪ್ರಧಾನವಾದುದಾಗಿದೆ. ಆನ್‌ಲೈನ್ ತರಗತಿಯಲ್ಲಾಗಲಿ, ನೋಟ್ಸ್ ಒದಗಿಸುವುದರಿಂದಾಗಲಿ, ಶಿಕ್ಷಕರು ದೂರವಾಣಿ ಕರೆ ಮಾಡುವುದರಿಂದಾಗಲಿ ಈ ಸನ್ನಿವೇಶವನ್ನು ನಿರ್ಮಿಸಲು ಆಗುವುದಿಲ್ಲ.



ಆದರೆ, ಪರಿಸ್ಥಿತಿ ಹದಗೆಟ್ಟಿದೆ. ತರಗತಿಗೆ ಸರಿಸಮನಾದ ಬದಲಿ ಇಲ್ಲ. ಆದರೂ ಬದಲಿಯನ್ನು ರೂಪಿಸಿಕೊಳ್ಳಬೇಕಾಗಿದೆ. ಹೀಗೆ ಬದಲಿಯನ್ನು ರೂಪಿಸಿಕೊಳ್ಳುವಾಗ ಕಲಿಕಾ ಪರಿಸರದಿಂದ ಬಂದ ಮಕ್ಕಳ ವಿಚಾರ ಸವಾಲಿನದ್ದಾಗುವುದಿಲ್ಲ. ಆದರೆ ಇಂಥ ಹಿನ್ನೆಲೆಯಿಲ್ಲದ ಕುಟುಂಬಗಳಿಂದ ಬಂದ ಮಕ್ಕಳಲ್ಲಿ ಶೈಕ್ಷಣಿಕ ಪ್ರಜ್ಞೆಯನ್ನು ಉಳಿಸುವುದು ಸವಾಲಿನ ಕೆಲಸ.

ತಂದೆ-ತಾಯಿಗೆ ಸಹಾಯಕವಾಗಿ ಅವರ ಮಾರ್ಗದರ್ಶನದಲ್ಲಿ ಸ್ವ ಶ್ರಮದಿಂದ ಆದಾಯ ಗಳಿಸಿದರೆ ತಪ್ಪಲ್ಲ. ಆದರದು ಬಾಲಕಾರ್ಮಿಕತನ ಆಗಬಾರದು. ಶ್ರಮ ಸಂಸ್ಕೃತಿಯಲ್ಲಿ ತೊಡಗಿಕೊಳ್ಳುವುದು ಕಲಿಕೆಯ ಒಂದು ಅಂಗವಾಗಿ ಒಳ್ಳೆಯದೇ. ಆದರೆ ಅದು ಶೈಕ್ಷಣಿಕ ಪ್ರಜ್ಞೆಯನ್ನು ಹಾಳುಗೆಡಹಬಾರದು. ಕೋವಿಡ್‌ನ ಸನ್ನಿವೇಶ ಇಷ್ಟೇ ಸಮಯದಲ್ಲಿ ಮುಗಿಯುತ್ತದೆ ಎನ್ನಲು ಸಾಧ್ಯವಿಲ್ಲ. ಆದರೆ ಶೈಕ್ಷಣಿಕ ಪ್ರಜ್ಞೆ ಮಕ್ಕಳಿಂದ ಹೊರಟುಹೋದರೆ ಅದು ಮರುಗಳಿಕೆಯಾಗುವುದಿಲ್ಲ.

ಮಕ್ಕಳಲ್ಲಿ ಶೈಕ್ಷಣಿಕ ಪ್ರಜ್ಞೆಯನ್ನು ಉಳಿಸಲು ಶಿಕ್ಷಕರ ಪಾಲುದಾರಿಕೆ ಬೇಕೇ ಬೇಕು. ಸದ್ಯದ ಸ್ಥಿತಿಯಲ್ಲಿ ದೂರವಾಣಿಯ ಸಂಪರ್ಕ ಅನಿವಾರ್ಯವಾಗಿದೆ. ಆದರೆ ದೂರವಾಣಿಯಲ್ಲಿ ಮಕ್ಕಳೊಂದಿಗೆ ಮಾತ್ರ ಸಂಪರ್ಕವಾಗಬಾರದು. ಶಿಕ್ಷಕರು ಪೋಷಕರೊಂದಿಗೆ ಮಾತನಾಡಿ ದಿನದಲ್ಲಿ ಒಂದು ಗಂಟೆಯಾದರೂ ಪೋಷಕರು ಮಕ್ಕಳೊಂದಿಗೆ ಶೈಕ್ಷಣಿಕ ವಿಚಾರಗಳನ್ನು ಮಾತನಾಡುವಂತೆ ಮಾಡಬೇಕು.

ಪೋಷಕರನ್ನು ಇದಕ್ಕೆ ಸಿದ್ಧಪಡಿಸುವುದು ಬಹು ಸವಾಲಿನ ಕೆಲಸ. ಕೆಲವು ಪೋಷಕರು ಮುಗ್ಧವಾಗಿ ಶಿಕ್ಷಕರಿಗೆ, 'ನಿಮ್ಮ ಮಗು ಎಂದು ತಿಳಿದುಕೊಂಡು ಏನು ಬೇಕಾದರೂ ಮಾಡಿ' ಎಂದು ಮಕ್ಕಳ ಕೈಗೆ ಫೋನ್ ಕೊಟ್ಟುಬಿಡುತ್ತಾರೆ. ನಿರ್ವಹಣೆ ಮಾಡಬೇಕಾದದ್ದು ತಾವೇ ಎಂದು ಪೋಷಕರಿಗೆ ಗೊತ್ತಾಗುವ ಹಾಗೆ ಶಿಕ್ಷಕರು ಮಾಡಬೇಕು. ಶೈಕ್ಷಣಿಕ ವಾಟ್ಸ್‌ಆ್ಯಪ್ ಗುಂಪುಗಳಲ್ಲಿನ ಚರ್ಚೆಗಳು ಕೇವಲ ಪ್ರಶ್ನೋತ್ತರಗಳ ಅಭ್ಯಾಸಕ್ಕೆ ಸೀಮಿತವಾಗಬಾರದು. ಮಕ್ಕಳ ಶೈಕ್ಷಣಿಕ ಆಕಾಂಕ್ಷೆಯ ಬಗ್ಗೆ, ಪಠ್ಯದ ವಿಶೇಷತೆಗಳ ಬಗ್ಗೆಯೆಲ್ಲ ಮುಕ್ತ ಚರ್ಚೆ ಇರಬೇಕು. ಆಗ ಮಕ್ಕಳಲ್ಲಿ ಕಲಿಕಾ ಒತ್ತಡ ಇರದೆ ನಿರಾಳವಾಗಿ ಭಾಗವಹಿಸುತ್ತಾರೆ. ಆ ಭಾಗವಹಿಸುವಿಕೆಯ ಮೂಲಕ ಶೈಕ್ಷಣಿಕ ಪ್ರಜ್ಞೆ ಮಕ್ಕಳಲ್ಲಿ ಉಳಿಯುತ್ತದೆ.

ಅಲ್ಲದೆ ವಿವಿಧ ಮಾಧ್ಯಮಗಳು ಕೊಡುವ ಶೈಕ್ಷಣಿಕ ಸಾಮಗ್ರಿಗಳು ಪರೀಕ್ಷೆಗಳ ಆಚೆಗೆ ಬೇರೆ ಬೇರೆ ಪಠ್ಯಗಳ ಆಸಕ್ತಿದಾಯಕ ವಿಷಯಗಳ ಕಡೆಗೆ ಇದ್ದು, ವಿದ್ಯಾರ್ಥಿಗಳೂ ಅದರಲ್ಲಿ ತೊಡಗಿಕೊಳ್ಳುವಂತೆ ಇರಬೇಕು. ಒಟ್ಟಾರೆಯಾಗಿ ಕಲಿಕಾ ಪರಿಸರದ ಹಿನ್ನೆಲೆ ಇಲ್ಲದ ಮಕ್ಕಳಲ್ಲಿ ಔಪಚಾರಿಕ ಶಿಕ್ಷಣದ ಎಚ್ಚರ ಉಳಿಯುವ ಹಾಗೆ ನೋಡಿಕೊಳ್ಳುವುದು ಸದ್ಯದ ಅಗತ್ಯವಾಗಿದೆ ಎಂಬ ಅರಿವು ಸಾರ್ವತ್ರಿಕವಾಗಿ ಇರಬೇಕಾಗಿದೆ.

ಚುರುಮುರಿ



ವ್ಯಾಕ್ಸಿನ್ ಮಿಕ್ಸ್

• ಸುಧೀಂದ್ರ

ಕೆಲಸವಿತ್ತೂಂತ ಯೂನಿವರ್ಸಿಟಿ ಲ್ಯಾಬಲ್ಲೇ ರಾತ್ರಿ ಉಳ್ಕೊಂಡಿದ್ದೆ. ಇಂಗ್ಲೆಂಡಿನ ಮೂರು ಡಿಗ್ರಿ ಸೆಲ್ಸಿಯಸ್ ಚಳಿಗೆ ರೂಮಲ್ಲೇ ಮಂಪರು ಹತ್ತಿತ್ತು. ಒಂದೇ ಸಮನೆ ಫೋನ್ ರಿಂಗಾಗಿ ಎಚ್ಚರವಾಗೋಯ್ತು. ಬೆಳಗಿನ ಜಾವ ಮೂರು ಗಂಟೇಲಿ ಯಾರದಪ್ಪಾ ಫೋನೂಂತ ತೊಗೊಂಡೆ. 'ಆಕ್ಸ್‌ಫರ್ಡಾ?' ಅಂತ ಪ್ರಶ್ನಿಸಿತು ಆಕಡೆಯ ದನಿ.

'ಯಾರ್ರೀ?' ಅಂದ ನನ್ನ ಮೈನಡುಕ ಫೋನ್ ಮಾಡಿದವರಿಗೆ ಗೊತ್ತಾಯ್ತೇನೊ? 'ಕೋವಿಡ್ಡಾ? ಕ್ವಾರಂಟೈನಾ?' ಅಂತ ಗಾಬರಿಯಿಂದ ಆ ಕಡೆ ದನಿ ಕೇಳ್ತು.

'ಇಲ್ಲಪ್ಪಾ, ಯಾರು? ಏನಾಗ್ಬೇಕಿತ್ತು?' ಅಂದೆ. 'ನಾನು ಕಣೋ ಶಿವಾ, ನಿನ್ನ ಹೈಸ್ಕೂಲ್ ಕ್ಲಾಸ್‌ಮೇಟ್ ಮಾತಾಡ್ತಿರೋದು' ಎಂದವನಿಗೆ 'ಏನೋ, ಇಷ್ಟು ಬೆಳಗ್ಗೆ ಫೋನ್ ಮಾಡಿ ಗಾಬರಿ ಪಡಿಸಿಬಿಟ್ಯಲ್ಲಾ?' ಎಂದು ಗದರಿದೆ.

'ಸಾರಿ, ವಾಚ್ ನೋಡ್ಕೊಳ್ಲಿಲ್ಲ. ಆಮೇಲೆ ಫೋನ್ ಮಾಡ್ಲಾ' ಅಂದ. 'ಹೇಳು ಏನು ವಿಷ್ಯ?' ಎಂದು ಮಾತಿಗೆಳೆದೆ.

'ನೀವು ಕಂಡುಹಿಡಿದಿರೋ ಕೋವಿಶೀಲ್ಡ್ ವ್ಯಾಕ್ಸಿನ್ ಫಸ್ಟ್ ರೌಂಡಲ್ಲಿ ತೊಗೊಂಡೆ, ಸೆಕೆಂಡ್ ರೌಂಡಲ್ಲಿ ಬೇರೆ ವ್ಯಾಕ್ಸಿನ್ ಚುಚ್ಚಿಸ್ಕೋಬೋದಾ?' ಅಂದ.

'ಎರಡೂ ಬೇರೆ ಟೈಪಲ್ಲಿ ವರ್ಕ್ ಆಗತ್ವೆ, ಹಂಗೆಲ್ಲಾ ಮಿಕ್ಸ್ ಮಾಡ್ಬಾರ್ದು' ಎಂದೆ. 'ನೀವು ವ್ಯಾಕ್ಸಿನ್ ಮಾಡೋವಾಗ ಈ ಮಿಕ್ಸಿಂಗ್ ಟೆಸ್ಟ್ ಮಾಡಿ ನೋಡಿದ್ರಾ? ಮಿಕ್ಸ್ ಆದ್ರೆ ವೈರಸ್‌ಗೇನಾಗತ್ತೆ? ರೂಪಾಂತರವಾಗತ್ವಾ ಅಥವಾ ನೆಗೆದುಬೀಳತ್ವಾ' ಅಂದ.

ನಮ್ಮ ಸೈಂಟಿಸ್ಟುಗಳಿಗೇ ಹೊಳೆಯದಿದ್ದ ವಿಷಯ ಇವನಿಂದ ಕೇಳಿ ಅಚ್ಚರಿಯಾಯಿತು. 'ಈ ಡೌಟುಗಳೆಲ್ಲಾ ನಿನಗ್ಹೇಗೆ ಬಂತು?' ಅಂದೆ. 'ಮರೆತುಬಿಟ್ಯಾ, ಯಾವ ಡ್ರಿಂಕ್ ಜೊತೆ ಯಾವುದನ್ನು ಮಿಕ್ಸ್ ಮಾಡ್ಕೊಂಡ್ರೆ ಸರಿಯಾದ ಕಿಕ್ ಬರತ್ತೇಂತ ನಾನಲ್ವಾ ಹೇಳ್ಕೊಟ್ಟಿದ್ದು' ಎಂದು ನೆನಪಿಸಿದ.

ಕಾಲೇಜಲ್ಲಿ ಇಬ್ರೂ ಕೆಮಿಸ್ಟ್ರಿ ಓದಿದ್ದು ಸಾರ್ಥಕವಾಯ್ತು ಅಂದ್ಕೊಂಡು ನಿದ್ದೆ ಹೋದೆ. ಕನಸಿನಲ್ಲಿ ಬ್ರೇಕಿಂಗ್ ನ್ಯೂಸ್ ಬರ್ತಿತ್ತು– 'ವ್ಯಾಕ್ಸಿನ್ ಕೇಂದ್ರದ ಮುಂದೆ ಎಂ.ಆರ್.ಪಿ. ಅಂಗಡಿಗಿಂತಲೂ ಹೆಚ್ಚಿನ ಜನಸಂದಣಿ!'

ದಿನದ ಟ್ವೀಟ್



ಸಿದ್ಧವಿಲ್ಲ...

ಈಗಾಗಲೇ ನಾವು ಬಹಳಷ್ಟನ್ನು ನೋಡಿದ್ದೇವೆ. ಆದರೆ, ಮೊದಲನೆಯ ಮತ್ತು ಎರಡನೆಯ ಅಲೆಯಲ್ಲಿ ನಮ್ಮ ಹೆತ್ತವರನ್ನು ಕಳೆದುಕೊಂಡ ರೀತಿಯಲ್ಲಿ ಮೂರನೆಯ ಅಲೆಯಲ್ಲಿ ಮಕ್ಕಳನ್ನೂ ಕಳೆದುಕೊಳ್ಳಲು ಒಂದು ಸಮಾಜವಾಗಿ ನಾವು ಸಿದ್ಧವಿದ್ದೇವೆ ಎಂದು ನಾನು ಭಾವಿಸುವುದಿಲ್ಲ... ಅಂತಹ ದುಃಖವು ಖಂಡಿತ ನಮ್ಮ ಮನಸ್ಸನ್ನು ಛಿದ್ರಗೊಳಿಸುತ್ತದೆ.

ರಿತಾಂಶು ಭಟ್ಟಾಚಾರ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಬುಧವಾರ, 15-5-1996

• **ಪ್ರಧಾನಿ ಹುದ್ದೆಗೆ ದೇವೇಗೌಡ– ತೃತೀಯ ರಂಗದ ಆಯ್ಕೆ**

ನವದೆಹಲಿ, ಮೇ 14– ಮೂರು ದಿನಗಳ ಗೊಂದಲ ಹಾಗೂ ಕುತೂಹಲಕಾರಿ ವಿದ್ಯಮಾನಗಳ ಬಳಿಕ ಇಂದು ತೃತೀಯ ರಂಗದ ಪ್ರಧಾನಿ ಹುದ್ದೆಯ ಅಭ್ಯರ್ಥಿಯಾಗಿ ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಅವರು ಆಯ್ಕೆಯಾಗಿದ್ದಾರೆ. ತೃತೀಯ ರಂಗದ ನಾಯಕರು ಇಂದು ರಾಷ್ಟ್ರಪತಿಯವರನ್ನು ಭೇಟಿಯಾಗಿ ದೇವೇಗೌಡ ಅವರನ್ನು ಸರ್ಕಾರ ರಚಿಸಲು ಆಹ್ವಾನಿಸುವಂತೆ ಮನವಿ ಅರ್ಪಿಸಿದ್ದಾರೆ.

ಕಾಂಗ್ರೆಸ್ ಪಾಲ್ಗೊಳ್ಳುವ ಸರ್ಕಾರದಲ್ಲಿ ಪ್ರಧಾನಿಯಾಗುವುದು ಸಾಧ್ಯವೇ ಇಲ್ಲವೆಂದು ಇಂದು ನಡೆದ ಸಿಪಿಎಂ ಕೇಂದ್ರ ಸಮಿತಿಯ ಸಭೆ ಮತ್ತೆ ತೀರ್ಮಾನ ಪ್ರಕಟಿಸಿದ್ದರಿಂದ, ತೃತೀಯ ರಂಗದ ಅಭ್ಯರ್ಥಿಯಾಗಿ ಪ್ರಧಾನಿ ಹುದ್ದೆಗೆ ನಿನ್ನೆ ಆಯ್ಕೆಯಾಗಿದ್ದ ಜ್ಯೋತಿ ಬಸು ಅವರ ಆಯ್ಕೆ ಸಾಧ್ಯವಾಗಲಿಲ್ಲ. ಜನತಾದಳದ ಮುಖಂಡ, ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಅವರೂ ಪ್ರಧಾನಿಯಾಗಲು ಒಪ್ಪದಿದ್ದ ಕಾರಣ, ದೇವೇಗೌಡ ಅವರನ್ನು ಪ್ರಧಾನಿ ಹುದ್ದೆಗೆ ಅಭ್ಯರ್ಥಿಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

• **ಸರ್ಕಾರ ರಚನೆ: ಬಿಜೆಪಿ ವಿಶ್ವಾಸ**

ನವದೆಹಲಿ, ಮೇ 14 (ಯುಎನ್‌ಐ)– ಸರ್ಕಾರ ರಚಿಸಲು ತಮ್ಮನ್ನು ರಾಷ್ಟ್ರಪತಿ ಅವರು ಆಹ್ವಾನಿಸುವರೆಂಬ ವಿಶ್ವಾಸವನ್ನು ಬಿಜೆಪಿ ನಾಯಕರು ವ್ಯಕ್ತಪಡಿಸಿದ್ದಾರೆ.

ಆದರೆ ಪ್ರಾದೇಶಿಕ ಪಕ್ಷಗಳ ಬೆಂಬಲ ಪಡೆಯುವ ಯತ್ನವನ್ನು ಪಕ್ಷ ಮುಂದುವರಿಸಿದೆ. ರಾಷ್ಟ್ರಪತಿ ಅವರ ಆಹ್ವಾನ ಬಂದ ನಂತರ ಪರಿಸ್ಥಿತಿಯನ್ನು ಅವಲೋಕಿಸಿ ನಿರ್ಧಾರ ಕೈಗೊಳ್ಳುವುದಾಗಿ ಪಕ್ಷದ ನಾಯಕ ಜಸ್ವಂತ್ ಸಿಂಗ್ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 15-5-1971

• **ಕಾವೇರಿ ನೀರಾವರಿ ಯೋಜನೆ ಮಂಜೂರಾತಿಗೆ ಕೋರಿಕೆ: ರಾಜ್ಯಪಾಲರ ಸ್ಪಷ್ಟನೆ**

ಬೆಂಗಳೂರು, ಮೇ 14– 1924ರ ಒಪ್ಪಂದದ ಸಂಬಂಧವಿಲ್ಲದೆ ಕಾವೇರಿ ನೀರಾವರಿ ಯೋಜನೆಗಳಿಗೆ ಮಂಜೂರಾತಿ ನೀಡಬೇಕೆಂಬುದು ರಾಜ್ಯ ಸರ್ಕಾರದ ನಿಲುವೆಂದು ರಾಜ್ಯಪಾಲ ಶ್ರೀ ಧರ್ಮವೀರರವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಕಾವೇರಿ ನೀರು ಹಂಚಿಕೆಯ 1924ರ ಒಪ್ಪಂದಕ್ಕೆ ರಾಜ್ಯ ಸರ್ಕಾರ ಬದ್ಧವಾಗುವುದೆಂದೂ ಇದನ್ನು ಬರಹದಲ್ಲಿ ನೀಡಲು ತಾವು ಸಿದ್ಧವೆಂದೂ ಕೇಂದ್ರಕ್ಕೆ ಮೈಸೂರಿನ ರಾಜ್ಯಪಾಲರು ಭರವಸೆ ನೀಡಿದ್ದಾರೆಂಬ ಪತ್ರಿಕಾ ವರದಿಯನ್ನು ಶ್ರೀ ಧರ್ಮವೀರರವರು ಪತ್ರಿಕಾಗೋಷ್ಠಿಯಲ್ಲಿ ನಿರಾಕರಿಸಿ, 'ನಾನು ಯಾರಿಗೂ ಆ ರೀತಿ ಭರವಸೆ ನೀಡಿಲ್ಲ' ಎಂದರು.

ದೆಹಲಿಯಿಂದ ಹಿಂತಿರುಗಿದ ಶ್ರೀ ಧರ್ಮವೀರರವರು ಕಾವೇರಿ ನೀರಾವರಿ ಯೋಜನೆಗಳ ಬಗ್ಗೆ ಈಗಿರುವ ಸ್ಥಿತಿಯೇ ಮುಂದುವರಿಯುವಂತೆ ಕಂಡುಬರುವುದೆಂದರು.

• **ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಲು ಸಂಸ್ಥಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಒತ್ತಾಯ**

ಮುನ್ಬಿನಗರ (ಮುಂಬಯಿ), ಮೇ 14– ಬಾಂಗ್ಲಾ ದೇಶಕ್ಕೆ ಪರಮಾಧಿಕಾರವುಳ್ಳ ಪ್ರತ್ಯೇಕ ರಾಷ್ಟ್ರವೆಂದು ಶೀಘ್ರವೇ ಮಾನ್ಯತೆ ನೀಡುವಂತೆ ಸಂಸ್ಥಾ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಿದೆ.

ಸಂಗತ

ಒಕ್ಕಲಿನ ವಾಸ, ನೆಮ್ಮದಿಗಿಲ್ಲ ಉಪವಾಸ

ನಮ್ಮನ್ನು ಮನೆಯಲ್ಲಿ ಬಂಧಿಸಿರುವ ಕೊರೊನಾದ ಈ ಕಾಲಘಟ್ಟವು, ಕುಟುಂಬದ ಮೌಲಿಕತೆ ಮತ್ತು ಘನತೆಯನ್ನು ಎತ್ತಿಹಿಡಿಯುವ ಪುನರ್‌ಸಂಕಲ್ಪಕ್ಕೆ ದಾರಿಯಾಗಲಿ

• ಯೋಗಾನಂದ

ಮೇ 15, ಅಂತರರಾಷ್ಟ್ರೀಯ ಕುಟುಂಬ ದಿನ. ಪತಿ, ಪತ್ನಿ ಮತ್ತು ಮಕ್ಕಳು- ಇದು ಮನುಷ್ಯ ನಿರ್ಮಿಸಿಕೊಂಡ ಅತ್ಯಂತ ಪ್ರಾಚೀನ ಸೌಹಾರ್ದ ಸಹಕಾರ ಸಂಸ್ಥೆಯಾದ ಕುಟುಂಬ ಎನ್ನುವುದರ ವ್ಯಾಖ್ಯೆ. ಅಜ್ಜ, ಅಜ್ಜಿ ಇವರೊಂದಿಗೆ ಇರಬಹುದು. ಆದರೆ ಈ ರೂಢಿ ಬಹುತೇಕ ಗತಕ್ಕೆ ಸರಿದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಅಪರೂಪಕ್ಕೆ, ನಗರಗಳಲ್ಲಿ ಅತ್ಯಪರೂಪಕ್ಕೆ ಮಾತ್ರ ಅವಿಭಕ್ತ ಕುಟುಂಬಗಳು ಕಂಡುಬರುತ್ತವೆ. ಗಂಡ, ಹೆಂಡತಿ ತಮ್ಮ ಮಕ್ಕಳೊಂದಿಗೆ ಯಾವುದೇ ಕಲಹ, ವ್ಯಾಜ್ಯ ಇಲ್ಲದೆ ಜೊತೆಗಿದ್ದರೆ ಅದೇ ಅವಿಭಕ್ತ ಕುಟುಂಬ ಎನ್ನುವಂತಾಗಿದೆ!

ಕೆಲವು ಆರ್ಥಿಕ, ಸಾಮಾಜಿಕ ಕಾರಣಗಳಿಂದ ಒಂದೇ ಸೂರಿನಡಿಯ ಒಕ್ಕಲು ವಿಭಜನೆಗೊಳ್ಳಬಹುದು. ಅವಿಭಕ್ತ ಕುಟುಂಬದಲ್ಲಿ ಎದುರಾಗಬಹುದಾದ ಬೆರಳೆಣಿಕೆಯಷ್ಟು ನ್ಯೂನತೆಗಳನ್ನು ಬದಿಗಿರಿಸೋಣ. ಒಂದೇ ಸೂರಿನಡಿ ಒಕ್ಕಲಿನ ವಾಸದಿಂದ ಆಗುವ ಪ್ರಯೋಜನಗಳು ಎಲ್ಲರಿಗೂ ತಿಳಿದಿದ್ದೆ. ಬೆಳೆಯುವ ಮಗುವಿಗೆ ಒಂದೇ ಸೂರಿನಲ್ಲಿ ಅಪ್ಪ, ಅಮ್ಮನ ಜೊತೆಗೆ ಅಜ್ಜ, ಅಜ್ಜಿ, ಚಿಕ್ಕಪ್ಪ, ಚಿಕ್ಕಮ್ಮ ದೊರೆತರೆ ಅದಕ್ಕಿಂತ ಸೌಭಾಗ್ಯವೇನಿದೆ?


ಒಂದೊಂದು ಕುಟುಂಬವೂ ನೆಮ್ಮದಿಯಿಂದಿದ್ದರೆ ಊರೇ ನೆಮ್ಮದಿಯಿಂದ ಇರುತ್ತದೆ. ಕುಟುಂಬದಲ್ಲಿ ವಾತ್ಸಲ್ಯ, ಪ್ರೀತಿ, ಸೌಹಾರ್ದವಿಲ್ಲದಿದ್ದರೆ ಒಡ್ಡು ಕುಸಿದ ಕೆರೆಯಿಂದ ನೀರು ಹೊರಹೋಗುವಂತೆ ಶಾಂತಿ, ಸಮೃದ್ಧಿ ದೂರ ಸರಿಯುತ್ತವೆ. ಹಾಗಾಗಿ ಮಾದರಿ ಕುಟುಂಬ ಸಮಾಜದ ಅಡಿಗಲ್ಲು. ಅಮೆರಿಕದ ಬ್ಯಾಸ್ಕೆಟ್‌ಬಾಲ್ ಆಟಗಾರ ಹಾಗೂ ತರಬೇತುದಾರರಾಗಿದ್ದ ಜಾನ್ ವೋಡೆನ್‌ರ 'ಜಗತ್ತಿನಲ್ಲಿ ಅತ್ಯಂತ ಪ್ರಮುಖವಾದುದು ಕುಟುಂಬ ಮತ್ತು ಪ್ರೀತಿ' ಎಂಬ ನುಡಿ ಸಾರ್ವಕಾಲಿಕ, ಮೌಲಿಕ.

ಸಾಮರಸ್ಯ, ಅನ್ಯೋನ್ಯ ಆಶ್ರಯ, ಪರರಲ್ಲಿ ಕಾಳಜಿ- ಇವು ಭಾರತೀಯ ಒಕ್ಕಲಿನ ಮೂಲ ವಿಶೇಷಗಳು ಎಂದು, ಹಾಂಗ್‌ಕಾಂಗ್ ವಿಶ್ವವಿದ್ಯಾಲಯದ ಮನೋವಿಜ್ಞಾನದ ಪ್ರಾಧ್ಯಾಪಕ ಸಿ.ಹ್ಯಾರಿ ಹುಯಿ ಮತ್ತು ಹ್ಯಾರಿ ಸಿ. ಅವರು 1986ರಲ್ಲಿ ಕೈಗೊಂಡ ಅಧ್ಯಯನ ಯಾತ್ರೆಯ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಮತ, ಧರ್ಮಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಭಿನ್ನತೆಗಳ ನಡುವೆಯೂ ಭಾರತೀಯ ಕುಟುಂಬವ್ಯವಸ್ಥೆ ಸಕಾರಾತ್ಮಕವಾದ ಅನನ್ಯತೆ ಉಳಿಸಿಕೊಂಡಿದೆ. ಅಸಹಾಯಕರಿಗೆ ನೆರವು, ಒಬ್ಬರ ತಪ್ಪನ್ನು ಇನ್ನೊಬ್ಬರು ತಿದ್ದುವುದು, ಅದರಿಂದ ಇತರರು ಪಾಠ ಕಲಿಯುವುದು, ವೃದ್ಧರನ್ನು ಆದರದಿಂದ ಕಾಣುವುದಕ್ಕೆ ಭಾರತೀಯ ಕುಟುಂಬ ಇಡೀ ಜಗತ್ತಿಗೆ ಮಾದರಿ.

'ಉದಾರಚರಿತಾನಾಂತು ವಸುಧೈವ ಕುಟುಂಬಕಂ'- ಉದಾರ ಸ್ವಭಾವವುಳ್ಳವರಿಗೆ ಇಡೀ ಜಗತ್ತೇ ಒಂದು ಸಂಸಾರ ಎಂಬ ನುಡಿ, ಭಾರತೀಯ ಪರಂಪರೆಯಲ್ಲಿನ ಕುಟುಂಬ ಸಿದ್ಧಾಂತಕ್ಕೆ ಹಿಡಿದ ಕನ್ನಡಿ. ಕನ್ನಡದ 'ರತ್ನ' ಜಿ.ಪಿ.ರಾಜರತ್ನಂ 'ತಲೆ ಮ್ಯಾಗೆ ಒಂದ್ಸೂರು, ಮಲ್ಗಾಕೆ ಭೂಮ್ತಾಯಿ ಮಂಚ, ಕೈಹಿಡ್ದೋಳ್ ಪುಟ್ನಂಜಿ, ನೆಗನೆಗ್ತ ಉಪ್ಗಂಜಿ, ಕೊಟ್ರಾಯ್ತು ರತ್ನನ್ ಪರ್ಪಂಚ...' ಎಂದು ಕೌಟುಂಬಿಕ ನೆಮ್ಮದಿಯನ್ನು ನಿರ್ವಚಿಸಿದ್ದಾರೆ.

ನೈರೋಬಿಯಾದಲ್ಲಿ ನಾನು 'ವಿಶ್ವಕನ್ನಡ ಸಂಸ್ಕೃತಿ' ಸಮಾವೇಶವೊಂದರಲ್ಲಿ ಭಾಗಿಯಾಗಿದ್ದಾಗಿನ ಪ್ರಸಂಗ ನನ್ನ ಕಣ್ಣಿಗೆ ಕಟ್ಟಿದಂತಿದೆ. ನಮ್ಮ ತಂಡ ಉಪಾಹಾರ ಸೇವಿಸುವಾಗ ಅಲ್ಲಿನ ನಿವಾಸಿಯೊಬ್ಬರು ನಮ್ಮತ್ತ ಬಂದು 'ನೀವು ಭಾರತೀಯರು ಕುಟುಂಬಪ್ರಿಯರು. ಅದು ಹೇಗೆ ನಿಮ್ಮ ಮೊಮ್ಮಕ್ಕಳನ್ನು ಬಿಟ್ಟು ತಿಂಡಿ, ಚಾ ಸೇವಿಸುತ್ತಿದ್ದೀರಿ?' ಎಂದಾಗ ನಾವು ಒಳಗಾದ ಆರ್ದ್ರತೆ ಅಷ್ಟಿಷ್ಟಲ್ಲ.

ವಿದೇಶಗಳಿಗೆ ಭೇಟಿ ನೀಡುವಾಗ ಆಗುವ ಅನುಭವವಿದು. ವಿಮಾನದಿಂದಿಳಿದು ದಾಖಲೆ ತಪಾಸಣೆಗೆ ಸರತಿಯಲ್ಲಿ ನಿಲ್ಲುತ್ತೇವೆ. ಅಲ್ಲಿನ ಅಧಿಕಾರಿ 'ಸರಿ, ನೀವಿಲ್ಲಿ ಎಷ್ಟು ದಿನ ಇರುವಿರಿ? ಮರು ಪ್ರಯಾಣದ ಟಿಕೆಟ್ ತೋರಿಸಿ' ಎನ್ನುತ್ತಾರೆ. ಇದು ಸಹಜ ಪ್ರಕ್ರಿಯೆಯೇ ಹೌದು. ಆದರೆ 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಉಕ್ತಿ ಥಟ್ಟನೆ ನೆನಪಾಗುವುದಂತೂ ದಿಟ. ಕ್ರಿ.ಪೂ. 5ನೇ ಶತಮಾನದ ಚೀನಾದ ತತ್ವಜ್ಞಾನಿ ಕನ್‌ಫ್ಯೂಷಿಯಸ್, ಒಂದು ದೇಶದ ಶಕ್ತಿ ಅಲ್ಲಿನ ಮನೆ ಮನೆಗಳ ಒಗ್ಗಟ್ಟನ್ನೇ ಅವಲಂಬಿಸಿದೆ ಎಂದ.



ಸುಖೀ ಕುಟುಂಬ ನಾಗರಿಕತೆಯ ತಿರುಳು. 'ಮದುವೆಯಾದ ಮೇಲೆ ಬೇರೆ ಮನೆ ಮಾಡುತ್ತೀರ ತಾನೆ?' ಎನ್ನುವುದು ಆಕೆ ಆತನಿಂದ ಬಯಸುವ ಸಮಜಾಯಿಷಿ. ಇದಕ್ಕೆ ಸಂವಾದಿಯಾಗಿ ಆತನೂ ತಾನು ಮನೆಯಳಿಯನಾಗಲು ಆಗದೆನ್ನಬಹುದು. ಅವಿಭಕ್ತ ಕುಟುಂಬದಲ್ಲಿದ್ದರೆ ಅಜ್ಜ, ಅಜ್ಜಿಗೆ ಮನೆಯೇ ವೃದ್ಧಾಶ್ರಮ. ಮಕ್ಕಳಿಗೂ ಮನೆಯೇ ಬೇಬಿ ಸಿಟ್ಟಿಂಗ್ ಆಗುತ್ತದೆ. ಇದು ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆದಂತೆ. ದಂಪತಿಯಿಬ್ಬರೂ ನೌಕರಿಗೆ ಹೋಗುವ ದಿನಮಾನಗಳು ಬಂದು ದಶಕಗಳೇ ಸಂದಿವೆ. ಅವರು ಮನೆಗೆ ಹಿಂದಿರುಗುವತನಕ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ತಮ್ಮ ತಂದೆ, ತಾಯಿ ಅಥವಾ ಮಾವ, ಅತ್ತೆಯವರಿಗಿಂತಲೂ ಮತ್ಯಾರ ಮೇಲೆ ತಾನೇ ನಂಬಿಕೆ, ವಿಶ್ವಾಸವಿಡಬಹುದು? 'ಅಜ್ಜಿ ಮಾತಾಡಿದರೆ ರೋಗ ವಾಸಿಯಾಗುತ್ತದೆ' ಎನ್ನುವುದು ಅಮೆರಿಕದ ಮೂಲನಿವಾಸಿಗಳ ಆಡುಮಾತು.

ಈಗಂತೂ ನಮ್ಮನ್ನು ಮನೆಯಲ್ಲಿ ಬಂಧಿಸಿರುವ ಕೊರೊನಾ, ಕೌಟುಂಬಿಕ ಮೌಲ್ಯಗಳ ಪುನರ್ ಅವಲೋಕನಕ್ಕೆ ಅನುವು ಮಾಡಿಕೊಟ್ಟಿರುವ 'ಮಾರುವೇಷದ ಮಾಯಕಾರ'! ಈ ಸಂದರ್ಭವು ಕುಟುಂಬದ ಮೌಲಿಕತೆ ಮತ್ತು ಘನತೆಯನ್ನು ಎತ್ತಿಹಿಡಿಯುವ ಪುನರ್‌ಸಂಕಲ್ಪಕ್ಕೆ ದಾರಿಯಾಗಲಿ.

ವಾಚಕರ ವಾಣಿ

ಅನ್ಯ ರಾಜ್ಯಗಳ ನಡೆ ಮಾದರಿಯಾಗಲಿ

ಕೋವಿಡ್ ಎರಡನೇ ಅಲೆಯಿಂದ ತಂದೆ-ತಾಯಿ ಅಥವಾ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ₹ 5 ಸಾವಿರ ಮಾಸಿಕ ಪಿಂಚಣಿ ಯೋಜನೆಯನ್ನು ಮಧ್ಯಪ್ರದೇಶ ಸರ್ಕಾರ ಘೋಷಿಸಿದೆ. ಇಂತಹ ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ಪಡಿತರವನ್ನೂ ಒದಗಿಸಲು ನಿರ್ಧರಿಸಿದೆ. ಇದು ಶ್ಲಾಘನೀಯ ಕೆಲಸ. ಆಂಧ್ರಪ್ರದೇಶದ ತಿರುಪತಿಯ ಆಸ್ಪತ್ರೆಯೊಂದರಲ್ಲಿ ಸಮರ್ಪಕವಾಗಿ ಆಮ್ಲಜನಕ ಸಿಗದೆ ಸಾವಿಗೀಡಾದ 11 ಕೋವಿಡ್ ರೋಗಿಗಳ ಕುಟುಂಬಕ್ಕೆ ತಲಾ ₹ 10 ಲಕ್ಷ ಪರಿಹಾರ ಘೋಷಿಸಿದ ಅಲ್ಲಿನ ಸರ್ಕಾರದ ಕಾರ್ಯವೈಖರಿ, ಸೂತಕದ ಮನೆಗಳಲ್ಲಿ ಬದುಕು ಕಟ್ಟಿಕೊಳ್ಳುವ ಭರವಸೆ ಮೂಡಿಸಿದೆ. ಆದರೆ, ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ ಜೀವ ಕಳೆದುಕೊಂಡ ಕೋವಿಡ್ ರೋಗಿಗಳ ಕುಟುಂಬಗಳಿಗೆ ಎರಡು ವಾರ ಕಳೆದರೂ ನಮ್ಮ ಸರ್ಕಾರ ಪರಿಹಾರ ನೀಡದೇ ಇರುವುದು ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿ.

ಸುಂದರ ಪ್ರಜಾಪ್ರಭುತ್ವವಿರುವ ದೇಶದಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕು, ತಮ್ಮ ಜವಾಬ್ದಾರಿ ಏನು, ಜನರನ್ನು ಹೇಗೆ ರಕ್ಷಿಸಬೇಕು ಎಂಬುದರ ಬಗ್ಗೆ ಅರಿವಿಲ್ಲದಂತೆ ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರಕ್ಕೆ ಕನಿಷ್ಠ ಜ್ಞಾನ ಅಥವಾ ನೈತಿಕತೆ ಇದೆಯೇ? ಹೈಕೋರ್ಟ್ ನೇಮಿಸಿದ್ದ ತನಿಖಾ ಸಮಿತಿ ಕೂಡ ಚಾಮರಾಜನಗರದ ದುರಂತಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿ ಮೂಲ ಕಾರಣ ಎಂದು ಹೇಳಿದೆ. ಹೀಗಿದ್ದರೂ ತಪ್ಪಿತಸ್ಥರ ವಿರುದ್ಧ ಇನ್ನೂ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ.

ಅನಿಲ್ ಕುಮಾರ್, ನಂಜನಗೂಡು

ಉಡಾಫೆಯ ಹೇಳಿಕೆ ಸಲ್ಲದು

ನ್ಯಾಯಾಧೀಶರು ಸರ್ವಜ್ಞರಲ್ಲ ಎಂಬ ಬೇಜವಾಬ್ದಾರಿಯ ಹಾಗೂ ಉಡಾಫೆಯ ಹೇಳಿಕೆ ನೀಡಿರುವ ಬಿಜೆಪಿ ಮುಖಂಡ ಸಿ.ಟಿ.ರವಿ ಅವರ ಹೇಳಿಕೆ ನೇರ ನ್ಯಾಯಾಂಗ ನಿಂದನೆಯಾಗಿದ್ದು, ರಾಜ್ಯ ಹೈಕೋರ್ಟ್ ಸ್ವಯಂಪ್ರೇರಿತವಾಗಿ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕಾಗಿದೆ. ಕೋವಿಡ್ ಲಸಿಕೆ ವಿತರಣೆಯಲ್ಲಿ ರಾಜ್ಯದಾದ್ಯಂತ ಉಂಟಾಗಿರುವ ಗೊಂದಲಗಳಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ನಡೆಸುತ್ತಿದೆ. ನ್ಯಾಯಾಲಯಗಳು ಕೇವಲ ಪ್ರಕರಣಗಳ ವಿಚಾರಣೆ ನಡೆಸುವುದಕ್ಕೆ ಸೀಮಿತವಾಗದೆ ಜನರ ಕಷ್ಟಕಾರ್ಪಣ್ಯ, ದುಃಖ ದುಮ್ಮಾನಗಳನ್ನು ಪರಿಹರಿಸುವ ಮಹತ್ವದ ಜವಾಬ್ದಾರಿ ಹೊಂದಿವೆ.

ಕೋವಿಡ್ ಲಸಿಕೆಗಳ ಅಭಾವದಿಂದ ಜನರಲ್ಲಿ ತೀವ್ರ ಗೊಂದಲ ಸೃಷ್ಟಿಯಾಗಿದೆ. ತಾವು ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿ ಎಂಬುದನ್ನು ರವಿ ಅವರು ಮರೆತಂತಿದೆ. ದೇಶದ ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂಬ ಸತ್ಯವನ್ನು ಅವರು ಅರಿಯಬೇಕಿದೆ.

ಕೆ.ವಿ.ವಾಸು, ಮೈಸೂರು

ಹೀಗಿದೆ...

ಬಸವ ಜಯಂತಿ

ವರ್ಷಕ್ಕೊಮ್ಮೆ
ವಚನಗಳ ಮೂಲಕ
ಆಚರಣೆ...
ಇಂದಿಗೂ ಆಗುತ್ತಿಲ್ಲ
12ನೇ ಶತಮಾನದ
ಆಚಾರ, ವಿಚಾರ
ಸರ್ವಧರ್ಮ ಪರಿಪಾಲನೆ...

ಚೆಲುವರಾಜು ಕೆ.
ಧನಗೆರೆ, ಕೊಳ್ಳೇಗಾಲ

ಸತ್ಯ ಒಪ್ಪಲು ಮೀನಮೇಷವೇಕೆ?

ಹೈಕೋರ್ಟ್ ಚಾಟಿ ಬೀಸಿದ ರೀತಿಯಿಂದ ಕಂಗಾಲಾಗಿ ಕೇಂದ್ರ ಸಚಿವ ಸದಾನಂದಗೌಡ ಮತ್ತು ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಅಸಮಾಧಾನದಿಂದ ಮಾತನಾಡಿದ್ದಾರೆ. ಅವರ ಕೆರಳುವಿಕೆ ಅರ್ಥವಾಗುತ್ತದೆ! ಅವರ ಹೇಳಿಕೆಗಳನ್ನು ಗಮನಿಸಿದಾಗ, ಕೆಲವು ಸಂಗತಿಗಳು ಸಾರ್ವಜನಿಕರಿಗೆ ಗೊತ್ತಾಗುವುದು ಅವಶ್ಯ ಎನಿಸುತ್ತದೆ. ಅಲ್ಲದೆ ಕೇಂದ್ರ ಸರ್ಕಾರವು ಎರಡನೇ ಅಲೆಯ ಬಗ್ಗೆ ಜಾಗರೂಕತೆಯಿಂದ ಇತ್ತು ಅಥವಾ ಇಲ್ಲವೆನ್ನುವ ಬಗ್ಗೆಯೂ ತಿಳಿಯುತ್ತದೆ. ಅಗತ್ಯ ಪ್ರಮಾಣದಲ್ಲಿ ಲಸಿಕೆ ಲಭ್ಯವಾಗದಿದ್ದಕ್ಕೆ ಕೆಲವು ರಾಷ್ಟ್ರಗಳಿಂದ ಕಚ್ಚಾ ಸಾಮಗ್ರಿಗಳು ಬರುವುದು ತಡವಾದದ್ದು ಒಂದು ಕಾರಣ ಎಂದಿದ್ದಾರೆ ಸದಾನಂದಗೌಡರು. ಹಾಗಾದರೆ ಲಸಿಕೆ ತಯಾರಿಕೆಗೆ ಅಗತ್ಯವಾದ ಕಚ್ಚಾ ವಸ್ತುಗಳಿಗಾಗಿ ಬೇಡಿಕೆ ಸಲ್ಲಿಸಿದ್ದು ಯಾವ ಯಾವ ರಾಷ್ಟ್ರಗಳಿಗೆ, ಆ ವಸ್ತುಗಳೆಲ್ಲ ಸಂಪೂರ್ಣವಾಗಿ ದೊರಕಿ ಉತ್ಪಾದನೆ ಪ್ರಾರಂಭವಾದುದು ಎಂದಿನಿಂದ?

ಎರಡನೆಯದಾಗಿ, ಎರಡನೇ ಅಲೆಯು ಸುಮಾರಾಗಿ ಎಂದಿನಿಂದ ಪ್ರಾರಂಭವಾಗಲಿದೆ ಎಂದು ತಜ್ಞರು ಮುಂಚೆಯೇ ಎಚ್ಚರಿಸಿದ್ದರೇ? ಇದನ್ನು ಗಮನದಲ್ಲಿಟ್ಟು ಸರ್ಕಾರವು ಉತ್ಪಾದನಾ ಕಂಪನಿಗಳಿಗೆ ಮುಂದಾಗಿಯೇ ತನ್ನ ಅಗತ್ಯವನ್ನು ತಿಳಿಸಿತ್ತೇ? ಮೊದಲನೇ ಅಲೆಯು ಉಪಶಮನಗೊಂಡು, ಎರಡನೇ ಅಲೆಯು ಹಠಾತ್ತನೆ ಹರಡಲು ಶುರುವಾದ ಸಂದರ್ಭದಲ್ಲಿ ಲಸಿಕೆಯ ಉತ್ಪಾದನಾ ಪ್ರಮಾಣ ಎಷ್ಟಿತ್ತು? ಎಲ್ಲ ರಾಜ್ಯಗಳಿಂದಲೂ ಹೆಚ್ಚಿನ ಬೇಡಿಕೆ ಬಂದುದು ಯಾವಾಗ? ಕರ್ನಾಟಕದಿಂದ ಯಾವಾಗ, ಎಷ್ಟು ಪ್ರಮಾಣದ ಬೇಡಿಕೆ ಇತ್ತು? ವಿರೋಧ ಪಕ್ಷಗಳ ಅಪಪ್ರಚಾರದ ಕಾರಣ ಶೇ 48ರಷ್ಟು ಮಂದಿ ಮೊದಲ ಲಸಿಕೆಯನ್ನು ಪಡೆಯಲಿಲ್ಲ, ಹಾಗಾಗಿ ಉಳಿದ ಲಸಿಕೆಯನ್ನು ಮಾತ್ರವೇ 18 ವರ್ಷ ಮೇಲ್ಪಟ್ಟವರಿಗೆ ಕೊಡಲು ಶುರುಮಾಡಿದ್ದು ಎಂದು ಸದಾನಂದಗೌಡರು ಹೇಳುತ್ತಾರೆ. ಆದರೆ, ನಾವು ಗಮನಿಸಬೇಕಾದ್ದೇನೆಂದರೆ, ಭಾರತದಂಥ ಬೃಹತ್ ರಾಷ್ಟ್ರದಲ್ಲಿ ಮೊದಲ ಲಸಿಕೆ ನೀಡಿಕೆ ಇಂತಿಷ್ಟು ಸಮಯದಲ್ಲಿ ಮುಗಿಯುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ. ಇದು ತಿಂಗಳಾನುಗಟ್ಟಲೆ ನಡೆಯುವ ಕಾರ್ಯವಾದ್ದರಿಂದ, ಅಷ್ಟರಲ್ಲಿ ಎರಡನೆಯ ಲಸಿಕೆ ನೀಡಿಕೆಯ ಅವಧಿಯೂ ಬಂದಿರುತ್ತದಾದ್ದರಿಂದ ಎರಡು ಪ್ರಕ್ರಿಯೆಗಳೂ ಜೊತೆಜೊತೆಯಾಗಿಯೇ ಸಾಗಿ, ಒಂದು ನಿರ್ದಿಷ್ಟ ಪ್ರಮಾಣದ ಜನಸಂಖ್ಯೆಯನ್ನು ಎರಡು ಬಾರಿ ಲಸಿಕೆಗೆ ಒಳಪಡಿಸುವವರೆಗೂ ಈ ಕಾರ್ಯಕ್ರಮ ಬಿಡುವಿಲ್ಲದೆ ನಡೆಯಬೇಕಾಗುತ್ತದೆ. ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿಯೇ ಮನಗಂಡಿದ್ದರೆ ಇಂದಿನ ಅವ್ಯವಸ್ಥೆ ಇರುತ್ತಿರಲಿಲ್ಲ.

ಮೊದಲನೇ ಅಲೆಯ ತೀವ್ರತೆ ಸಾಕಷ್ಟು ಕಡಿಮೆಯಾಯಿತು ಎಂದಾಗ ನಮ್ಮ ಸರ್ಕಾರಗಳು ಅದೊಂದು ಮಹತ್ಸಾಧನೆ ಎಂಬ ಸುಲಭತೃಪ್ತಿ ಪಟ್ಟುಕೊಂಡಿದ್ದೇ ಇಂದಿನ ಸಂಕಷ್ಟಗಳಿಗೆ ಕಾರಣ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇದನ್ನು ಯಾಕೆ ಒಪ್ಪಿಕೊಳ್ಳುತ್ತಿಲ್ಲ? ನ್ಯಾಯಾಲಯಗಳ ಮೇಲೆ, ವಿರೋಧ ಪಕ್ಷದವರ ಮೇಲೆ ಹರಿಹಾಯುವುದು ಸುಮ್ಮನೆ ಮೈಪರಚಿಕೊಂಡವರ ಸ್ಥಿತಿ ಅಷ್ಟೆ!

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೋವಿಡ್–19ರ ಎರಡನೇ ಅಲೆಯನ್ನು ಸರ್ಕಾರ ಸರಿಯಾಗಿ ನಿರ್ವಹಿಸುತ್ತಿದೆಯೇ?

ಸಹಕಾರ ನೀಡದಿದ್ದರೆ ಹೋಗಲಿ; ಅಪನಂಬಿಕೆ ಹುಟ್ಟುಹಾಕಿದ್ದೇಕೆ?

• ಪ್ರಲ್ಹಾದ ಜೋಶಿ



ಕೇಂದ್ರ ಸರ್ಕಾರವು ಕೋವಿಡ್‌–19 ಮೊದಲನೇ ಅಲೆ ಎದುರಿಸಲು ಆರಂಭಿಸಿದ ಸಿದ್ಧತೆಯನ್ನು ನಿಲ್ಲಿಸಿಯೇ ಇಲ್ಲ. ಎರಡನೇ ಅಲೆ ಎದುರಿಸಲು ಆಗಿನಿಂದಲೇ ಕ್ರಮಗಳನ್ನು ಕೈಗೊಳ್ಳುತ್ತಲೇ ಇದೆ. ಆದರೆ, ಕೆಲವು ರಾಜ್ಯಗಳ ನಿರ್ಲಕ್ಷ್ಯದಿಂದಾಗಿ ಸಂಕಷ್ಟ ಎದುರಾಗಿದೆ. ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿರುವ ರಾಷ್ಟ್ರಗಳು ಮೊದಲನೇ ಅಲೆ ಎದುರಿಸುವಲ್ಲಿ ವಿಫಲವಾದಾಗ ಭಾರತವು ಯಶಸ್ವಿಯಾಗಿ ಎದುರಿಸಿತ್ತು.

ಎರಡನೇ ಅಲೆ ಕುರಿತು ತಜ್ಞರು ನೀಡಿದ್ದ ವರದಿ ನಿರ್ಲಕ್ಷಿಸಲಾಯಿತು ಎಂದು ಟೀಕಿಸಲಾಗುತ್ತಿದೆ. ವರದಿ ಪ್ರಕಾರ ಕೇಂದ್ರವು ಫೆಬ್ರುವರಿಯಲ್ಲಿಯೇ ವಿವಿಧ ರಾಜ್ಯಗಳಿಗೆ ಕೋವಿಡ್‌ ಹರಡುವಿಕೆ ತಡೆಯುವಿಕೆಯ ಅಧ್ಯಯನಕ್ಕೆ 75 ತಂಡಗಳನ್ನು ಕಳುಹಿಸಿತ್ತು. ಪ್ರಕರಣಗಳು ಜಾಸ್ತಿಯಾಗಲಾರಂಭಿಸಿದಾಗಲೇ ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್‌ ಸೇರಿದಂತೆ ಕೋವಿಡ್‌ ಹೆಚ್ಚಿರುವ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ಪ್ರಧಾನಿ ಸಭೆ ಮಾಡಿದ್ದರು. ಆಗಲೇ ದೇಶದ 70 ಜಿಲ್ಲೆಗಳಲ್ಲಿ ಸೋಂಕು ಹೆಚ್ಚಾಗಿತ್ತು. ದೇಶದ ಎಲ್ಲ ಕಡೆಯೂ ಸೋಂಕು ಹರಡುವಿಕೆ ಹೆಚ್ಚಬಹುದು, ಅತಿಯಾದ ಆತ್ಮವಿಶ್ವಾಸ ಬೇಡ ಎಂದು ಎಚ್ಚರಿಸಲಾಗಿತ್ತು. ವರದಿಯಲ್ಲಿಯೂ ಇಷ್ಟೊಂದು ವ್ಯಾಪಕ ಪ್ರಮಾಣದಲ್ಲಿ ಹರಡುತ್ತದೆ ಎಂದಿರಲಿಲ್ಲ. ಪ್ರಕರಣಗಳು ಹೆಚ್ಚಾಗಿದ್ದರಿಂದ ವೈದ್ಯಕೀಯ ಸೌಲಭ್ಯದ ಕೊರತೆ ಎದುರಾಗಿದೆ.

ದೇಶದಲ್ಲಿ 5,700 ಟನ್‌ ಇದ್ದ ಆಮ್ಲಜನಕ ಉತ್ಪಾದನೆ ಈಗ 10 ಸಾವಿರ ಟನ್‌ಗೆ ಹೆಚ್ಚಾಗಿದೆ. ಹೊಸದಾಗಿ 1,280 ಆಮ್ಲಜನಕ ಘಟಕಗಳು ಕಾರ್ಯಾರಂಭ ಮಾಡಿವೆ. 2014ರವರೆಗೂ 381 ಇದ್ದ ಮೆಡಿಕಲ್‌ ಕಾಲೇಜುಗಳ ಸಂಖ್ಯೆಯನ್ನು 562ಕ್ಕೆ (ಶೇ 48) ಹೆಚ್ಚಿಸಲಾಗಿದೆ. ವೈದ್ಯಕೀಯ ಪದವಿ ಸೀಟುಗಳ ಸಂಖ್ಯೆ 54 ಸಾವಿರದಿಂದ 84,649ಕ್ಕೆ (ಶೇ 56), ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆ 30,991 ರಿಂದ 54,275ಕ್ಕೆ (ಶೇ 80) ಹೆಚ್ಚಾಗಿವೆ. 157 ಕಾಲೇಜುಗಳನ್ನು ಜಿಲ್ಲಾ ಆಸ್ಪತ್ರೆಗಳಿಗೆ ಜೋಡಿಸಲಾಗಿದೆ. ಹಿಂದಿನ ಕಾಂಗ್ರೆಸ್‌ ಸರ್ಕಾರ ಜನಸಂಖ್ಯೆಗೆ ತಕ್ಕಂತೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಲ್ಲ. ಆ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ವೇಗ ನೀಡಿದೆ. ಇದಕ್ಕೆ ಮೇಲಿನ ಅಂಕಿ–ಅಂಶಗಳೇ ಉದಾಹರಣೆಯಾಗಿವೆ.

ದೇಶದಲ್ಲಿ ಮೊದಲು ಒಂದೇ ಒಂದು ತಪಾಸಣಾ ಪ್ರಯೋಗಾಲಯವಿತ್ತು. ಈಗ ಅವುಗಳ ಸಂಖ್ಯೆ 2,600ಕ್ಕೆ ಹೆಚ್ಚಿಸಲಾಗಿದೆ. ಪಿಎಂ ಕೇರ್ಸ್‌ ಫಂಡ್‌ನಿಂದ 1 ಲಕ್ಷ ಕಾನ್ಸನ್‌ಟ್ರೇಟರ್‌ಗಳನ್ನು ಖರೀದಿಸಿ ರಾಜ್ಯಗಳಿಗೆ ನೀಡಲಾಗಿದೆ. ದೇಶದಲ್ಲಿ ಒಂದೇ ಒಂದು ಏಮ್ಸ್‌ ಆಸ್ಪತ್ರೆಯಿತ್ತು. ಈಗ ಅವುಗಳ ಸಂಖ್ಯೆಯನ್ನು 24ಕ್ಕೆ ಏರಿದೆ. ಪ್ರಧಾನಿ ಮೋದಿ ಅವರು 14 ಏಮ್ಸ್‌ ಆಸ್ಪತ್ರೆಗಳನ್ನು ಆರಂಭಿಸಿದ್ದಾರೆ. ಕೇಂದ್ರವು ವೈದ್ಯಕೀಯ ಕಾಲೇಜು ಮಂಜೂರು ಮಾಡಿದ್ದರೂ, ಹಲವು ರಾಜ್ಯಗಳಲ್ಲಿ ಅವು ಕಾರ್ಯಾರಂಭ ಮಾಡಿಲ್ಲ. ಬಜೆಟ್‌ನಲ್ಲಿ ₹3.60 ಲಕ್ಷ ಕೋಟಿ ಆರೋಗ್ಯ ಕ್ಷೇತ್ರಕ್ಕೆ ನೀಡಲಾಗಿದೆ. ಆಮ್ಲಜನಕವನ್ನು ವಿಮಾನ, ಹಡಗುಗಳ ಮೂಲಕ ತರಿಸಿಕೊಳ್ಳಲಾಗಿದೆ. ರೈಲುಗಳ ಮೂಲಕ ಸಾಗಿಸಲಾಗಿದೆ.

ಇಷ್ಟೆಲ್ಲ ಪ್ರಯತ್ನಗಳ ನಂತರವೂ ಕೋವಿಡ್‌ನಿಂದ ಸಾವು ಸಂಭವಿಸುತ್ತಿವೆ. ಸಾವಿನ ಬಗೆಗೆ ಅನುಕಂಪವಿದೆ. ಸರ್ವೋಚ್ಚ ಪ್ರಯತ್ನಗಳಿವು ಎಂದು ಹೇಳುವುದಿಲ್ಲ.

> ಕೋವಿಡ್–19 ವಿರುದ್ಧ ವಿಶ್ವವೇ ಯುದ್ಧ ಸಾರಿದೆ. ಭಾರತವೂ ಅದರಲ್ಲಿ ಮುಂಚೂಣಿಯಲ್ಲಿದೆ. ಪ್ರತಿಪಕ್ಷಗಳು ಟೀಕಿಸುವುದು ತಪ್ಪಲ್ಲ. ಆದರೆ, ಸಮಯ, ಸಂದರ್ಭ ಬಹಳ ಮುಖ್ಯ. ಇಡೀ ದೇಶವೇ ಒಗ್ಗಟ್ಟಾಗಿ ಹೋರಾಡಬೇಕಾದಾಗಲೂ ಅಪನಂಬಿಕೆ ಹುಟ್ಟುಹಾಕುವ ಕೆಲಸವನ್ನೇ ಮಾಡಿಕೊಂಡಿದ್ದಾರೆ. ಪರಿಸ್ಥಿತಿಯನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುವ ಸಂದರ್ಭ ಇದಲ್ಲ. ಇಂತಹ ಸಂದರ್ಭವನ್ನು ನಾವು ಮತ್ತು ನೀವು (ಪ್ರತಿಪಕ್ಷದವರು) ಸೇರಿಯೇ ಎದುರಿಸಬೇಕು

ನಿರೀಕ್ಷೆಗೂ ಮೀರಿ ಪ್ರಕರಣಗಳು ಹೆಚ್ಚಾಗಿದ್ದರಿಂದ ಹಲವಾರು ಸಮಸ್ಯೆಗಳು ಎದುರಾಗಿವೆ. ಆಮ್ಲಜನಕ ಬಳಕೆಯಲ್ಲಿ ದಿಢೀರ್‌ ಹೆಚ್ಚಾಗಿದೆ. ರಿಲಯನ್ಸ್‌ ಸೇರಿದಂತೆ ಹಲವಾರು ಕಂಪನಿಗಳಿಗೆ ಆಮ್ಲಜನಕ ಉತ್ಪಾದನಾ ಘಟಕಗಳನ್ನು 24 ಗಂಟೆಯಲ್ಲಿ ಮಂಜೂರು ಮಾಡಲಾಗಿದೆ. ಲಸಿಕೆಗಳ ಉತ್ಪಾದನೆ ಹೆಚ್ಚಿಸಲು ಕಂಪನಿಗಳಿಗೆ ಸರ್ಕಾರವೇ ಅನುದಾನ ನೀಡಿದೆ. ಯುದ್ಧೋಪಾದಿಯಲ್ಲಿ ಕೆಲಸಗಳು ನಡೆದಿವೆ. ಇದರಿಂದಾಗಿಯೇ ಭಾರತದಲ್ಲಿ ಸಾವಿನ ಪ್ರಮಾಣ ಕಡಿಮೆ ಇದೆ. ಅಮೆರಿಕದಲ್ಲಿ 5.25 ಲಕ್ಷ ಜನರು ಮೃತಪಟ್ಟಿದ್ದರೆ, ಭಾರತದಲ್ಲಿ 2.62 ಲಕ್ಷ ಜನರು ಮೃತಪಟ್ಟಿದ್ದಾರೆ.

ಹಲವು ರಾಜ್ಯಗಳಿಗೆ ವೆಂಟಿಲೇಟರ್‌ ನೀಡಲಾಗಿತ್ತು. ಆಮ್ಲಜನಕ ಘಟಕಗಳನ್ನು ಮಂಜೂರು ಮಾಡಲಾಗಿತ್ತು. ವೆಂಟಿಲೇಟರ್‌ಗಳು ಹಾಗೆಯೇ ಬಿದ್ದಿವೆ. ಘಟಕಗಳ ನಿರ್ಮಾಣ ಆರಂಭವಾಗಿಲ್ಲ. ಜನರ ಆರೋಗ್ಯ ರಕ್ಷಣೆ ರಾಜ್ಯಗಳಿಗೆ ಸೇರಿದ ವಿಷಯವಾದರೂ, ಕೇಂದ್ರ ಸುಮ್ಮನೆ ಕುಳಿತಿಲ್ಲ. ಆಮ್ಲಜನಕ ಉತ್ಪಾದನೆ, ರೆಮ್‌ಡಿಸಿವಿರ್‌ ಲಭ್ಯತೆ, ಲಸಿಕೆಗಳ ಉತ್ಪಾದನೆ, ಸಂಶೋಧನೆಗೆ ಒತ್ತು ನೀಡುವ ಕೆಲಸವನ್ನು ಮಾಡಿದೆ. ಕೆಲವು ರಾಜ್ಯಗಳು ಕೇಂದ್ರ ನೀಡಿದ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ.

ಕಾಂಗ್ರೆಸ್‌ ನಾಯಕ ರಾಹುಲ್‌ ಗಾಂಧಿ ಅವರು, ಅದು ‘ಮೋದಿ ಲಸಿಕೆ’, ‘ಬಿಜೆಪಿ ಲಸಿಕೆ’ ಎಂದು ಟೀಕಿಸಿದರು. ಲಸಿಕೆಯ ಕಾರ್ಯಕ್ಷಮತೆ ಪ್ರಶ್ನಿಸಿದರು. ರಾಜಸ್ಥಾನ ಸರ್ಕಾರವು, ಕೋವ್ಯಾಕ್ಸಿನ್‌ ಲಸಿಕೆ ನೀಡುವುದಿಲ್ಲ ಎಂದು ಘೋಷಿಸಿತು. ಜನರಲ್ಲಿ ಲಸಿಕೆ ಬಗೆಗೆ ಅಪನಂಬಿಕೆ ಹುಟ್ಟುಹಾಕಲಾಯಿತು. ಈಗ ಜನರಿಗೆ ಲಸಿಕೆ ನೀಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಜನರಿಗೆ ಲಸಿಕೆಯೇ ಸಿಗುತ್ತಿಲ್ಲ ಎಂದು ಟೀಕಿಸಲಾಗುತ್ತಿದೆ. ಲಸಿಕೆಯ ಬಗೆಗೆ ಜನರ ಮನದಲ್ಲಿ ಗೊಂದಲ ಹುಟ್ಟುಹಾಕಿದ್ದು ಯಾರು?

ದೇಶದಲ್ಲಿ ಈಗಾಗಲೇ 18 ಕೋಟಿ ಜನರಿಗೆ ಲಸಿಕೆ ಹಾಕಲಾಗಿದೆ. ವಿಶ್ವದ ಸಾಂಕ್ರಾಮಿಕ ರೋಗಗಳ ಪೈಕಿ ಶೇ 80ರಷ್ಟಕ್ಕೆ ಭಾರತವೇ ಲಸಿಕೆ ಕಂಡು ಹಿಡಿದಿದೆ. ಎಲ್ಲ ಹಂತಗಳ ಪರೀಕ್ಷೆ ನಂತರವೇ ಅನುಮತಿಸಿದ್ದರೂ, ಪ್ರತಿಪಕ್ಷಗಳ ಟೀಕೆಯ ಪರಿಣಾಮ ಜನರು ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬರಲಿಲ್ಲ. ಹಾಗಾಗಿ, ಕಂಪನಿಗಳೂ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆಗೆ ಆಸಕ್ತಿ ತೋರಿಸಲಿಲ್ಲ. ಲಸಿಕೆಯನ್ನು ಕೇಂದ್ರವೇ ಏಕೆ ನೀಡಬೇಕು? ಮಾರಾಟ ಮುಕ್ತಗೊಳಿಸಬೇಕು ಎಂದು ಕಾಂಗ್ರೆಸ್‌ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳೇ ಆಗ್ರಹಿಸಿದ್ದರು. ಕೇಂದ್ರ ಶೇ 50ರಷ್ಟು ಖರೀದಿಸುತ್ತಿದ್ದು, ಉಳಿದದ್ದನ್ನು ಮುಕ್ತಗೊಳಿಸಿದೆ. ಈಗ ಅದನ್ನೂ ಟೀಕಿಸಲಾಗುತ್ತಿದೆ.

ಕೋವಿಡ್‌–19 ವಿರುದ್ಧ ವಿಶ್ವವೇ ಯುದ್ಧ ಸಾರಿದೆ. ಭಾರತವೂ ಅದರಲ್ಲಿ ಮುಂಚೂಣಿಯಲ್ಲಿದೆ. ಪ್ರತಿಪಕ್ಷಗಳು ಟೀಕಿಸುವುದು ತಪ್ಪಲ್ಲ. ಆದರೆ, ಸಮಯ, ಸಂದರ್ಭ ಬಹಳ ಮುಖ್ಯ. ಇಡೀ ದೇಶವೇ ಒಗ್ಗಟ್ಟಾಗಿ ಹೋರಾಡಬೇಕಾದಾಗಲೂ ಅಪನಂಬಿಕೆ ಹುಟ್ಟುಹಾಕುವ ಕೆಲಸವನ್ನೇ ಮಾಡಿಕೊಂಡಿದ್ದಾರೆ. ಪರಿಸ್ಥಿತಿಯನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುವ ಸಂದರ್ಭ ಇದಲ್ಲ. ಇಂತಹ ಸಂದರ್ಭವನ್ನು ನಾವು ಮತ್ತು ನೀವು (ಪ್ರತಿಪಕ್ಷದವರು) ಸೇರಿಯೇ ಎದುರಿಸಬೇಕು. ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಸಕಾರಾತ್ಮಕ ಸಲಹೆಗಳನ್ನು ನೀಡಲಿ. ಮುಕ್ತ ಮನಸ್ಸಿನಿಂದ ಸ್ವೀಕರಿಸುತ್ತೇವೆ. ಒಬ್ಬೊಬ್ಬರ ಜೀವ ಉಳಿಸುವುದು ಮುಖ್ಯವಾಗಿದೆ. ಸರ್ಕಾರದ ತಪ್ಪುಗಳಿದ್ದರೆ ನಂತರದಲ್ಲಿ ಲೋಕಸಭೆಯಲ್ಲಿ ಚರ್ಚೆ ಮಾಡಲಿ.

ಲೇಖಕರು: ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ ಸಚಿವ

ನಿರೂಪಣೆ: ಬಸವರಾಜ ಹವಾಲ್ದಾರ



ಕೋವಿಡ್‌ನಿಂದ ಮೃತಪಟ್ಟವರ ಶವಗಳನ್ನು ಹೊತ್ತ ಆಂಬುಲೆನ್ಸ್‌ಗಳು ಬೆಂಗಳೂರಿನ ಬೊಮ್ಮನಹಳ್ಳಿ ಚಿತಾಗಾರದ ಮುಂದೆ ಇತ್ತೀಚೆಗೆ ಸಾಲುಗಟ್ಟಿ ನಿಂತಿದ್ದವು

ಇಷ್ಟು ಸಂಕಷ್ಟ ಸೃಷ್ಟಿಯಾಗಲು ಪ್ರಧಾನಿ ನಿರ್ಲಕ್ಷ್ಯವೇ ಕಾರಣ

• ಮಲ್ಲಿಕಾರ್ಜುನ ಖರ್ಗೆ



ಕೋವಿಡ್‌ ಎರಡನೇ ಅಲೆ ಏಕಾಏಕಿ ಅಪ್ಪಳಿಸಿದ್ದಲ್ಲ. ಎರಡನೇ ಅಲೆ ಮತ್ತು ಅದು ಸೃಷ್ಟಿಸಲಿರುವ ಭೀಕರತೆಯ ಬಗ್ಗೆ ತಜ್ಞರು ಮೊದಲೇ ಎಚ್ಚರಿಕೆ ನೀಡಿದ್ದರು. ಏನೆಲ್ಲ ಸಿದ್ಧತೆ ಮಾಡಿಕೊಳ್ಳಬೇಕು ಎಂಬ ಸಲಹೆ ನೀಡಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ಅದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ನೋಟು ಅಮಾನ್ಯೀಕರಣದ ವೇಳೆ, ನೊಬೆಲ್‌ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞರು ನೀಡಿದ ಸಲಹೆಯನ್ನೂ ಅವರು ಕಡೆಗಣಿಸಿದ್ದರು. ಈಗಲೂ ಅಷ್ಟೇ, ಇಷ್ಟು ದೊಡ್ಡ ಸಂಕಷ್ಟ ಸೃಷ್ಟಿಯಾಗಲು ಪ್ರಧಾನಿಯ ನಿರ್ಲಕ್ಷ್ಯವೇ ಕಾರಣ.

ಸದ್ಯ ಕೊರೊನಾ ಸೋಂಕು ನಿರ್ಮೂಲನೆ ಸಾಧ್ಯವಿಲ್ಲ. ಆದರೆ, ತುರ್ತಾಗಿ ಬೇಕಿರುವ ಆರೋಗ್ಯ ಸೌಲಭ್ಯ ಕಲ್ಪಿಸಿದ್ದರೆ ಇಷ್ಟೊಂದು ಸಾವು ನೋವು ಆಗುತ್ತಿರಲಿಲ್ಲ.

ಡಾ.ಮನಮೋಹನ್‌ ಸಿಂಗ್‌ ಹತ್ತು ವರ್ಷ ಪ್ರಧಾನಿಯಾಗಿದ್ದವರು. ಶ್ರೇಷ್ಠ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರು. ಕೋವಿಡ್‌ ನಿಯಂತ್ರಿಸಲು ‘ಪಂಚ ಸೂತ್ರ’ಗಳನ್ನು ನೀಡಿ ಪ್ರಧಾನಿಗೆ ಪತ್ರ ಬರೆದಿದ್ದರು. ಸಲಹೆ ಅನುಷ್ಠಾನದ ಬದಲು, ಅವರನ್ನೇ ಅವಮಾನಿಸುವ ಕೆಲಸವನ್ನು ಪ್ರಧಾನಿ ಮಾಡಿದರು. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ, ಕಾಂಗ್ರೆಸ್‌ ಮುಖಂಡ ರಾಹುಲ್‌ ಗಾಂಧಿ ಮತ್ತು ನಾನು ಪತ್ರ ಬರೆದು ಸಲಹೆ ನೀಡಿದರೂ ಅವುಗಳನ್ನು ಪುರಸ್ಕರಿಸುವ, ನೇರವಾಗಿ ಉತ್ತರಿಸುವ ಸೌಜನ್ಯವನ್ನೂ ಪ್ರಧಾನಿ ತೋರಲಿಲ್ಲ.

ಇದು ಸಂಕಷ್ಟದ ಸಮಯ. ಎಲ್ಲ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಭೆ ನಡೆಸಿ ಅವರ ಸಲಹೆ ಪಡೆದು ನಿರ್ಣಯ ಕೈಗೊಳ್ಳಬೇಕು. ಇಂತಹ ವರ್ಚುವಲ್‌ ಸಭೆ ನಡೆಸಿ ಎಂದರೂ ಪ್ರಧಾನಿ ಸ್ಪಂದಿಸುತ್ತಿಲ್ಲ.

ಲಸಿಕೆ, ಚುಚ್ಚುಮದ್ದು ಹಾಗೂ ಆಮ್ಲಜನಕದ ಕೊರತೆಯಾಗಲಿದ್ದು ಅದಕ್ಕೆ ಸಿದ್ಧತೆ ಬೇಕು ಎಂದು ಸಂಸತ್ತಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸ್ಥಾಯಿ ಸಮಿತಿ ಸರ್ವಾನುಮತದಿಂದ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಸರ್ವ ಪಕ್ಷಗಳ ಸಂಸದರು ಸದಸ್ಯರಾಗಿರುವ ಈ ಸಮಿತಿ ವರದಿ ನೀಡಿ ಒಂಬತ್ತು ತಿಂಗಳಾದರೂ ಸರ್ಕಾರ ಅದನ್ನು ಕಣ್ಣೆತ್ತಿ ನೋಡಿಲ್ಲ. ನಿರ್ಲಕ್ಷ್ಯಕ್ಕೆ ಇದಕ್ಕಿಂತ ಉದಾಹರಣೆ ಬೇಕೆ? ನಾನು ಸಹ ರಾಜ್ಯಸಭೆಯ ಸಭಾಪತಿ ವೆಂಕಯ್ಯ ನಾಯ್ಡು ಅವರಿಗೆ ಪತ್ರ ಬರೆದು ಸರ್ಕಾರದ ಗಮನ ಸೆಳೆಯುವಂತೆ ಕೋರಿದ್ದೂ ಆಗಿದೆ.

> ಲಸಿಕೆ, ಚುಚ್ಚುಮದ್ದು ಹಾಗೂ ಆಮ್ಲಜನಕದ ಕೊರತೆಯಾಗಲಿದ್ದು ಅದಕ್ಕೆ ಸಿದ್ಧತೆ ಬೇಕು ಎಂದು ಸಂಸತ್ತಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸ್ಥಾಯಿ ಸಮಿತಿ ಸರ್ವಾನುಮತದಿಂದ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಸರ್ವ ಪಕ್ಷಗಳ ಸಂಸದರು ಸದಸ್ಯರಾಗಿರುವ ಈ ಸಮಿತಿ ವರದಿ ನೀಡಿ ಒಂಬತ್ತು ತಿಂಗಳಾದರೂ ಸರ್ಕಾರ ಅದನ್ನು ಕಣ್ಣೆತ್ತಿ ನೋಡಿಲ್ಲ. ನಿರ್ಲಕ್ಷ್ಯಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಲಸಿಕೆ ಮತ್ತು ಆರೋಗ್ಯ ಸೌಲಭ್ಯಕ್ಕಾಗಿ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ₹ 35 ಸಾವಿರ ಕೋಟಿ ಮೀಸಲಿಡಲಾಗಿದೆ. ಅದರಲ್ಲಿ ಸ್ವಲ್ಪವಾದರೂ ಹಣವನ್ನು ರಾಜ್ಯಗಳಿಗೆ ನೀಡಬೇಕಿತ್ತು.

70 ವರ್ಷಗಳಲ್ಲಿ ಅಧಿಕಾರ ನಡೆಸಿದ ಎಲ್ಲ ಪಕ್ಷಗಳೂ ಆರೋಗ್ಯ ಸೌಲಭ್ಯ ಸುಧಾರಣೆಗೆ ಕೆಲಸ ಮಾಡಿವೆ. ಏಮ್ಸ್‌, ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಪ್ರದೇಶಗಳಲ್ಲಿ ದೊಡ್ಡ ಆಸ್ಪತ್ರೆ, ಸರ್ಕಾರಿ ವೈದ್ಯಕೀಯ ಕಾಲೇಜುಗಳು ಸಾಕ್ಷಿವೆ. ಇವು ನಿನ್ನೆ–ಇಂದು ಮಾಡಿದ್ದಲ್ಲ. ಕೋವಿಡ್‌ ಎರಡನೇ ಅಲೆಯಿಂದ ಸಂಕಷ್ಟಕ್ಕೀಡಾಗುವ ದೊಡ್ಡ ಸಂಖ್ಯೆಯ ಜನರಿಗೆ ಚಿಕಿತ್ಸೆ ನೀಡಲು ಈ ಎಲ್ಲ ಆಸ್ಪತ್ರೆಗಳಿಗೆ ಏನೇನು ಅವಶ್ಯಕತೆ ಇದೆ ಎಂಬುದನ್ನು ತಿಳಿದುಕೊಂಡು ಸೌಲಭ್ಯ ಕಲ್ಪಿಸ-ಬೇಕಿತ್ತು.

ಬೆಂಗಳೂರು, ಕಲಬುರ್ಗಿ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ (ಎರಡು), ರಾಜಸ್ಥಾನ, ಹಿಮಾಚಲ ಪ್ರದೇಶದಲ್ಲಿ ಇಎಸ್‌ಐಸಿ ವೈದ್ಯಕೀಯ ಕಾಲೇಜನ್ನು ನಮ್ಮ ಅವಧಿಯಲ್ಲಿ ಕಟ್ಟಿಸಿದ್ದೇವೆ. ಅವುಗಳನ್ನು ಏಮ್ಸ್‌ಗಳನ್ನಾಗಿ ಪರಿವರ್ತಿಸಿ ಇನ್ನಷ್ಟು ಸೇವೆ ಪಡೆಯಬಹುದಿತ್ತು.

ರೆಮ್‌ಡಿಸಿವಿರ್‌ ಚುಚ್ಚುಮದ್ದು, ಔಷಧಿ, ಆಮ್ಲಜನಕ ಸೌಲಭ್ಯದ ಬೆಡ್‌, ಆಮ್ಲಜನಕ ಉತ್ಪಾದನೆ ಮತ್ತು ಪೂರೈಕೆ ವ್ಯವಸ್ಥೆ ಹೆಚ್ಚಿಸುವುದು, ವೆಂಟಿಲೇಟರ್‌ ಸೇರಿದಂತೆ ಅಗತ್ಯ ವೈದ್ಯಕೀಯ ಸೌಲಭ್ಯ ಕಲ್ಪಿಸ-ಬೇಕಿತ್ತು. ಸೋಜಿಗದ ಸಂಗತಿ ಎಂದರೆ ಇಂತಹ ಸಂಕಷ್ಟದ ಸಮಯದಲ್ಲೂ ಹೊಸ ಸಂಸತ್‌ ಕಟ್ಟಡ ‘ಸೆಂಟ್ರಲ್‌ ವಿಸ್ತಾ’ಕ್ಕೆ ₹ 25 ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದಾರೆ. ಇದೇನಾ ಮೋದಿ ಅವರ ಆದ್ಯತೆ? ಈ ಕಾಮಗಾರಿ ಕೆಲದಿನ ನಿಲ್ಲಿಸಿದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ. ಸಾಯುವ ಜನರನ್ನು ಮೊದಲು ರಕ್ಷಿಸಬೇಕು. ಈ ಕಟ್ಟಡವನ್ನೇ ಆಸ್ಪತ್ರೆಯನ್ನಾಗಿ ಪರಿವರ್ತಿಸಿ, ಬೇಕಿದ್ದರೆ ‘ಮೋದಿ ಕೋವಿಡ್‌ ಆಸ್ಪತ್ರೆ’ ಎಂದು ಹೆಸರು ಇಟ್ಟುಕೊಳ್ಳಲಿ. ಮೊದಲು ನಮ್ಮ ಜನರಿಗೆ ಚಿಕಿತ್ಸೆ ಲಭ್ಯವಾಗುವಂತೆ ಮಾಡಲಿ.

ಸಂಸದರು, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಕೋವಿಡ್‌ ನಿಯಂತ್ರಣಕ್ಕೇ ವಿನಿಯೋಗಿಸಲು ಅವಕಾಶ ಕೊಡಬೇಕು.

ಇನ್ನು, ಕೋವಿಡ್‌ ಲಸಿಕೆ ನೀಡಿಕೆಯ ವಿಷಯದಲ್ಲೂ ಸರ್ಕಾರದ ವೈಫಲ್ಯ ದೊಡ್ಡಮಟ್ಟದಲ್ಲಿ-ದೆ. ಆರಂಭದಲ್ಲಿ ನಮ್ಮಲ್ಲಿ ಉತ್ಪಾದನೆಯಾದ ಲಸಿಕೆಯನ್ನು 60 ದೇಶಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿಕೊಂಡು ಮೋದಿ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡರು. ಎರಡೇ ಸಂಸ್ಥೆಗಳ ಬದಲು ದೇಶದಲ್ಲಿರುವ ಇತರೆ ಔಷಧಿ ಉತ್ಪಾದನಾ ಕಂಪನಿಗಳಲ್ಲಿಯೂ ಈ ಲಸಿಕೆಯ ಉತ್ಪಾದನೆಗೆ ಅನುಮತಿ ನೀಡಲಿಲ್ಲ. ಅದರ ದುಷ್ಪರಿಣಾಮವನ್ನು ನಾವು ಎದುರಿಸುವಂತಾಗಿ-ದೆ. ಭಾರತೀಯರಿಗೆ ಎಷ್ಟು ಲಸಿಕೆಯ ಅವಶ್ಯಕತೆ ಇದೆ ಎಂಬುದನ್ನು ತಿಳಿದು, ಅದರಂತೆ ಯೋಜನೆ ರೂಪಿಸಿದ್ದರೆ ಇಷ್ಟೊಂದು ಹಾಹಾಕಾರ ಉಂಟಾಗು-ತ್ತಿರಲಿಲ್ಲ.

18ರಿಂದ 44 ವರ್ಷ ವಯೋಮಾನದವರು ದೇಶದಲ್ಲಿ 59.46 ಕೋಟಿ ಜನರು ಇದ್ದಾರೆ. ಈ ವರೆಗೆ 1.84 ಕೋಟಿ ಜನರಿಗೆ ಮಾತ್ರ ಲಸಿಕೆ ಕೊಡಲಾಗಿದೆ (ಮೇ 1ರ ಅಂಕಿಅಂಶ). ಸರ್ಕಾರದ ಬಳಿ ಇರುವುದು 34 ಕೋಟಿ ಡೋಸ್‌ ಲಸಿಕೆ ಮಾತ್ರ.

ಆಂಬುಲೆನ್ಸ್‌, ಪಿಪಿಇ ಕಿಟ್‌, ವೆಂಟಿಲೇಟರ್‌, ಲಸಿಕೆ ಸೇರಿದಂತೆ ವೈದ್ಯಕೀಯ ಉಪಕರಣಗಳಿಗೆ ತೆರಿಗೆ ವಿನಾಯಿತಿ ನೀಡಬೇಕು. ಇವುಗಳನ್ನು ವಿದೇಶಗಳಿಂದ ತರಿಸಿಕೊಂಡರೆ ಆಮದು ಸುಂಕ ವಿಧಿಸಬಾರದು ಎಂಬ ನಮ್ಮ ಸಲಹೆ ಇನ್ನೂ ಕಾರ್ಯರೂಪಕ್ಕೆ ತಂದಿಲ್ಲ. ಅನಿವಾಸಿ ಭಾರತೀಯರು ತಾವಿರುವ ದೇಶಗಳಿಂದ ವೈದ್ಯಕೀಯ ಉಪಕರಣ ಕಳಿಸಲು ಸಿದ್ಧರಿದ್ದರೂ ಕೇಂದ್ರ ಸರ್ಕಾರ ಅನುಮತಿ ನೀಡುತ್ತಿಲ್ಲ.

ರೆಮ್‌ಡಿಸಿವಿರ್‌ ಚುಚ್ಚುಮದ್ದು ಬಿಜೆಪಿ ನಾಯಕರ ಪ್ರಭಾವ ಇರುವ ಪ್ರದೇಶ, ಅವರು ಹೇಳಿದ ಆಸ್ಪ-ತ್ರೆಗಳಿಗೆ ಮಾತ್ರ ಸಿಗುತ್ತಿದೆ. ತಮಗೆ ಬೇಕಾದವರಿಗೆ ಮಾತ್ರ ಬೆಡ್‌ ಕೊಡಿಸುತ್ತಿದ್ದಾರೆ. ಆಮ್ಲಜನಕದ ಕೊರತೆಯಾಗಿದೆ. ಖಾಸಗಿ ಆಸ್ಪತ್ರೆಗಳವರು ಇದೇ ಅವಕಾಶ ಎಂದು ಸುಲಿಗೆ ಮಾಡುತ್ತಿದ್ದಾರೆ.

ಲಾಕ್‌ಡೌನ್‌ ಕಾರಣದಿಂದ ಸಂಕಷ್ಟಕ್ಕೆ ಸಿಲುಕಿರುವ ದುಡಿಯುವ ವರ್ಗಕ್ಕೆ ಬಿಡಿಗಾಸಿನ ನೆರವೂ ನೀಡಿಲ್ಲ. ನರೇಗಾ ಕೂಲಿ ದಿನ ಹೆಚ್ಚಿಸುತ್ತಿಲ್ಲ.

ಸಂಕಷ್ಟಕ್ಕೀಡಾದ ಜನರಿಗೆ ಯುವ ಕಾಂಗ್ರೆಸ್‌ನವರು ನೆರವು ನೀಡುತ್ತಿದ್ದಾರೆ. ನಮ್ಮ ದೇಶದಲ್ಲಿ ಕೋಟಿ ಕೋಟಿ ರೂಪಾಯಿ ಆದಾಯ ಹೊಂದಿರುವ ಸಾಕಷ್ಟು ಮಠಗಳು, ತಿರುಪತಿ ಸೇರಿದಂತೆ ಇತರೆ ದೇವಸ್ಥಾನಗಳು, ಧಾರ್ಮಿಕ ಸಂಸ್ಥೆಗಳಿವೆ. ಭಕ್ತರಿಂದಲೇ ಬಂದ ಆಸ್ತಿ ಅದು. ಇಂತಹ ದೊಡ್ಡ ಧರ್ಮದತ್ತಿ ಸಂಸ್ಥೆಗಳು ತಮ್ಮ ಭಕ್ತರನ್ನು ಉಳಿಸಿಕೊಳ್ಳಲು ಮುಂದಾಗಬೇಕು. ಈಗ ನೆರವಿಗೆ ಬರದಿದ್ದರೆ ಇನ್ನು ಯಾವಾಗ ನೆರವಿಗೆ ಬರುತ್ತೀರಿ?

ಲೇಖಕರು: ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ನಿರೂಪಣೆ: ಗಣೇಶ ಚಂದನಶಿವ

ಪಿವಿ ಫ್ಯಾಕ್ಟ್‌ ಚೆಕ್‌

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **‘ಕೋವಿಡ್‌ ಲಸಿಕೆ** ಪಡೆದುಕೊಂಡರೆ ಪೋಲಿಯೋ ಸೇರಿದಂತೆ 20 ಬಗೆಯ ಕಾಯಿಲೆಗಳು ತಗಲುವುದನ್ನು ತಡೆಯಬಹುದಾಗಿದೆ ಎಂದು ಸಾಬೀತಾಗಿದೆ’ ಎಂದು ಪೋಸ್ಟ್‌ಕಾರ್ಡ್‌ ಕನ್ನಡ ತನ್ನ ಫೇಸ್‌ಬುಕ್‌ ಪುಟದಲ್ಲಿ ಪೋಸ್ಟರ್‌ ಪ್ರಕಟಿಸಿದೆ. ಈ ಪೋಸ್ಟರ್‌ ಅನ್ನು ಇತರರು ತಮ್ಮ ಫೇಸ್‌ಬುಕ್‌ ಖಾತೆಯಲ್ಲಿ, ಟ್ವೀಟ್‌ಗಳಲ್ಲಿ ಹಂಚಿಕೊಂಡಿದ್ದಾರೆ. ವಾಟ್ಸ್‌ಆ್ಯಪ್‌ ಸ್ಟೇಟಸ್‌ನಲ್ಲಿಯೂ ಈ ಪೋಸ್ಟರ್‌ ವೈರಲ್‌ ಆಗಿದೆ.

✓ **ಕೋವಿಡ್‌ಗೆಂದು** ಅಭಿವೃದ್ಧಿಪಡಿಸಿರುವ ಲಸಿಕೆಯು ಪೋಲಿಯೊವನ್ನು ತಡೆಯುತ್ತದೆ ಎಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಪೋಲಿಯೊ ತಡೆಗೆ ಮಕ್ಕಳು ಐದು ವರ್ಷಕ್ಕಿಂತ ಚಿಕ್ಕವರಿದ್ದಾಗಲೇ ಪೋಲಿಯೊ ಹನಿ ಹಾಕಲಾಗುತ್ತದೆ. ಐದು ವರ್ಷಕ್ಕಿಂತ ದೊಡ್ಡವರಿಗೆ ಪೋಲಿಯೊ ಹನಿ ಹಾಕುವುದಿಲ್ಲ. ಜಗತ್ತಿನ ಯಾವ ದೇಶದಲ್ಲೂ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಕೋವಿಡ್‌ ಲಸಿಕೆ ನೀಡುತ್ತಿಲ್ಲ. ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಬಿಟ್ಟು ಎಲ್ಲಾ ರಾಷ್ಟ್ರಗಳಲ್ಲಿ ಪೋಲಿಯೊ ನಿರ್ಮೂಲನೆಯಾಗಿದೆ. 20 ಬಗೆಯ ಕಾಯಿಲೆಗಳನ್ನು ಕೋವಿಡ್‌ ಲಸಿಕೆ ತಡೆಗಟ್ಟುತ್ತದೆ ಎಂಬುದಕ್ಕೂ ಆಧಾರ ಇಲ್ಲ.

ಗುಂಡಣ್ಣ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಕಷ್ಟ ಕ್ಷಯಿಸಿ ಸುಖ ಅಕ್ಷಯಿಸಲಿ

ಭೂಮಿಯ ಮೇಲೆ ಹುಟ್ಟಿದ ಪ್ರತಿ ಜೀವಿಯೂ ಸಾವನ್ನು ಬೆನ್ನಿಗಂಟಿಸಿಕೊಂಡು ಬರುತ್ತದೆ. ಆ ಸಾವು ಬೆನ್ನಿನಿಂದ ಬಾಯಿಗೆ ಬರುವ ಸಮಯವೇ ಜೀವಿಯ ಜೀವಿತಾವಧಿ. ಅದೆಷ್ಟು ಕಾಲ ಸಾವಿನ ಗಂಟನ್ನು ಬೆನ್ನಲ್ಲಿ ಹೊತ್ತಿರುತ್ತೇವೋ, ಅಲ್ಲಿವರೆಗೆ ಪ್ರಾಣವಾಯು ಸರಾಗವಾಗಿ ನಮ್ಮ ದೇಹದಲ್ಲಿ ಹರಿದಾಡುತ್ತಿರುತ್ತೆ. ನಾವು ಭಾರ ಅಂತ ವಿಶ್ರಮಿಸಲು ಸಮಯ ಹಾಳು ಮಾಡಿದಷ್ಟು, ಬೆನ್ನಿನಲ್ಲಿದ್ದ ಸಾವು ನೆತ್ತಿಗೇರಿ, ಬಾಯಿಗಿಳಿಯಲು ಹವಣಿಸುತ್ತಿರುತ್ತ-ದೆ. ಇದಕ್ಕಾಗೇ ನಾವು ಸಾವನ್ನು ದೂರವಿಡಲು ವಿಶ್ರಮಕ್ಕಿಂತ ಪರಿಶ್ರಮಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಇದನ್ನೇ ನಮ್ಮ ಹಿರಿಯರು ಬಹಳ ಸರಳವಾಗಿ ಕಷ್ಟಪಟ್ಟರೆ ಸುಖ ಅಂದರು, ಒಂದಿಷ್ಟು ಬುದ್ದಿ ಇರುವ ಪ್ರಾಜ್ಞರು ವಿಸ್ತಾರವಾಗಿ ‘ಪರಿಶ್ರಮದಲ್ಲಿ ಬದುಕಿದೆ’ ಎಂದರು.

‘ದುಡ್ಡೇ ದೊಡ್ಡಪ್ಪ, ದುಡಿಮೆ ಅದರಪ್ಪ’ ಅಂತ ಸುಮ್ಮನೆ ಅನುಭಾವಿ ಜನ ಹೇಳಿಲ್ಲ. ಶ್ರಮವಿಲ್ಲದೆ ಯಾವ ಸಾಧನೆಯೂ ಆಗೊಲ್ಲ, ಕಷ್ಟವಿಲ್ಲದೆ ಯಾವ ಸುಖವೂ ಅರಸಿ ಬರೊಲ್ಲ. ಹುಟ್ಟಿದ ಪ್ರತಿ ಜೀವಿಯೂ ಶ್ರಮ ಪಟ್ಟೇ ಆಹಾರವನ್ನು ಹುಟ್ಟಿಸಿಕೊಳ್ಳಬೇಕು, ಕಷ್ಟಪಟ್ಟೇ ಬದುಕನ್ನು ಕಟ್ಟಿಕೊಳ್ಳಬೇಕು. ಸೃಷ್ಟಿಯ ಈ ನಿಯಮಕ್ಕೆ ಮನುಷ್ಯನೂ ಅತೀತನಲ್ಲ. ಕಷ್ಟಪಟ್ಟರೆ ಸುಖ, ಸುಖವಷ್ಟೆ ಅನುಭವಿಸಿದರೆ ಕಷ್ಟ. ಏಕೆಂದರೆ ಭಗವಂತ ಸುಖದ ಗೂಡಲ್ಲಿ ರೋಗದ ಮೊಟ್ಟೆ ಇಟ್ಟಿದ್ದಾನೆ. ಸುಖ ಬಯಸಿದಷ್ಟು ರೋಗದ ಮೊಟ್ಟೆಗಳು ಹೆಚ್ಚಾಗುತ್ತವೆ. ಸುಖದ ಕಾವು ಹೆಚ್ಚಾದಷ್ಟು ರೋಗದ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ. ಹುಳುಗಳು ಬಲಿತಷ್ಟು ದೇಹ ರೋಗದ ಗೂಡಾಗಿ, ಸಾವಿಗೆ ಹತ್ತಿರವಾಗುತ್ತೇವೆ.

ಜೀವಿಗಳೆಲ್ಲ ಕಷ್ಟ ಪಡಲಿ ಅಂತ ಭಗವಂತ ಭೂಮಿಯನ್ನು ಸೃಷ್ಟಿಸಿಲ್ಲ. ಕಷ್ಟ-ಸುಖಗಳನ್ನು ಸಮನಾಗಿ ಅನುಭವಿಸಿ, ಉತ್ತಮ ಜೀವನ ಸಾಗಿಸಲಿ ಅಂತ ಹಗಲು-ರಾತ್ರಿ ಸೃಷ್ಟಿಸಿದ್ದಾನೆ. ಸೂರ್ಯನ ಕಣ್ಗಾವಲಿನಲ್ಲಿ ಶ್ರಮಪಡುತ್ತಾ, ಚಂದ್ರನ ಅಂಗಳದಲ್ಲಿ ವಿಶ್ರಮಿಸುತ್ತಾ ಬದುಕಲು, ಕಷ್ಟ-ಸುಖ ಎರಡನ್ನೂ ಅಳತೆ ಮಾಡಿ-ಕೊಟ್ಟಿದ್ದಾನೆ. ಭಗವಂತನ ಈ ಕಾಲನಿಯಮವನ್ನು ಮನುಷ್ಯನ ಹೊರತು, ಭೂಮಿ ಮೇಲಿರುವ ಎಲ್ಲಾ ಜೀವಿಗಳು ಅನುಸರಿಸುತ್ತವೆ. ಹೀಗಾಗಿ ಅವುಗಳಿಗೆ ಯಾವ ರೋಗಬಾಧೆಯು ಬಡಿಯುವುದಿಲ್ಲ. ಆದರೆ ಭಗವಂತನಿಗೇ ಬುದ್ಧಿ ಹೇಳುವ ಮಹಾಬುದ್ಧಿವಂತ ಮಾನವ ಮಾತ್ರ; ಶ್ರಮಪಡುವ ಕಾಲದಲ್ಲಿ ವಿಶ್ರಮಿಸುತ್ತಾ, ವಿಶ್ರಮಿಸುವ ಕಾಲದಲ್ಲಿ ಶ್ರಮಪಡುತ್ತ ರೋಗವನ್ನು ಬರಿಸಿಕೊಳ್ಳುತ್ತಾನೆ.

ಎಲ್ಲಾ ಜೀವಿಗಳಂತೆ ಸೂರ್ಯನ ಶಾಖದಲ್ಲಿ ರೋಗಾಣುವನ್ನು ಕರಗಿಸಿಕೊಂಡು, ಚಂದ್ರನ ತಂಪಲ್ಲಿ ಜೀವಶಕ್ತಿ ಪಡೆಯುವ ಸೃಷ್ಟಿ ನಿಯಮಕ್ಕೆ ಮಾನವ ಹೊಂದಿಕೊಳ್ಳಬೇಕು. ಭಗವಂತ ಕೊಟ್ಟಿರುವ ಒಂದಿಷ್ಟು ಬುದ್ಧಿಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾ, ಪರರನ್ನು ಶೋಷಿಸುತ್ತಾ ಬದುಕಲು ಯತ್ನಿಸಿದರೆ, ದೇಹದೊಳಗಿರುವ ರೋಗಾಣುಗಳು ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಇಂದು ಮಾನವ ಎದುರಿಸುತ್ತಿರುವ ಎಲ್ಲಾ ಪಿಡುಗುಗಳಿಗೂ ಅವನ ಸ್ವಾರ್ಥ--ಸುಖವೇ ಕಾರಣ. ಇನ್ನು ಮುಂದಾದರೂ ಶ್ರಮವಿಲ್ಲದೆ ವಿಶ್ರಮಿಸುವ-ಕಷ್ಟ-ಪಡದೆ ಸುಖಪಡುವ ದುಷ್ಟತನ ಬಿಟ್ಟರೆ, ಮನುಕುಲ ಮತ್ತೊಂದಿಷ್ಟು ಕಾಲ ಬದುಕಬಹುದು. ಇಲ್ಲದಿದ್ದರೆ, ಸುಖದ ಬಯಕೆಯಲ್ಲೇ ಸಾವಿನ ಬಾಯಿಗೆ ಸುಲಭ ತುತ್ತಾಗಬೇಕಾಗುತ್ತದೆ.

ವೈಶಾಖಮಾಸದಲ್ಲಿ ಚಂದ್ರನಿಡುವ ಮೂರನೇ ಹೆಜ್ಜೆಯೆ ಅಕ್ಷಯತೃತೀಯಾ. ಕೈಲಾಸ ನಿರ್ಮಿಸಿಕೊಟ್ಟ ಕುಬೇರ ಧನಾಧಿಪತಿಯಾದ, ಶ್ರೀಕೃಷ್ಣನಿಂದ ಕುಚೇಲ ಸಿರಿವಂತನಾಗಿ, ಪಾಂಡವರು ಅಕ್ಷಯಪಾತ್ರೆ ಪಡೆದಂದೇ ವ್ಯಾಸರು ಗಣಪತಿಯಿಂದ ಮಹಾಭಾರತ ಬರೆಸಿದರು. ಪರಶುರಾಮ, ಬಸವಣ್ಣ ಜನ್ಮ ತಾಳಿದ, ಆದಿತೀರ್ಥಂಕರ ವೃಷಭದೇವ ಉಪವಾಸ ಬಿಟ್ಟ, ಸ್ವರ್ಗದಿಂದ ಗಂಗೇ ಧರೆಗಿಳಿದ ಈ ಶುಭಸಂದರ್ಭದಲ್ಲಿ ಮಾನವರ ಕಷ್ಟ ಕ್ಷಯಿಸಿ-ಸುಖ ಅಕ್ಷಯಿಸಲಿ. ಅದಕ್ಕಾಗಿ ನಾವೆಲ್ಲಾ ಭಗವಂತ ಹಾಕಿಕೊಟ್ಟ ಸೃಷ್ಟಿನಿಯಮ ಮೀರದೆ, ಉತ್ತಮ-ರೀತಿಯಲ್ಲಿ ಬದುಕುವ ಸಂಕಲ್ಪ ಮಾಡಿದರೆ, ‘ಸಚ್ಚಿದಾನಂದ’ದ ನಮ್ಮ ಬದುಕು ಅಕ್ಷಯವಾಗುವುದರಲ್ಲಿ ಸಂದೇಹವಿಲ್ಲ.

ದಿನ ಭವಿಷ್ಯ

ಶನಿವಾರ ಮೇ 15, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕ ಚತುರ್ಥಿ ಗಂ. 60-00 (ದಿನಪೂರ್ತಿ) ಶನಿವಾರ ನಿತ್ಯ ನಕ್ಷತ್ರ ಆರ್ದ್ರೆ ಗಂ. 60-00 (ದಿನಪೂರ್ತಿ) ಧೃತಿ ನಾಮ ಯೋಗ ಗಂ 44-16 ವಣಿಜ ಕರಣ ಗಂ. 28-33 ವಿಷ ಗಂ. 22-16 ಅಮೃತ ಗಂ. 48-9 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 6, 9

ಮೇಷ: ಸಮಾಜದ ಒಳಿತಿಗಾಗಿ ತೆಗೆದುಕೊಂಡ ನಿರ್ಧಾರಗಳು ಫಲ ಕೊಡಲಿವೆ. ಹೃದಯಸ್ಪರ್ಶಿ ಕ್ಷಣಗಳು ನಿಮಗಾಗಿ ಕಾದಿವೆ. ಅಪರೂಪದ ನೆಮ್ಮದಿ ನಿಮ್ಮನ್ನರಸಿ ಬರಲಿದೆ. ಮಾಡುವ ಕೆಲಸದ ಬಗ್ಗೆ ಅವಲೋಕನ ಅಗತ್ಯ.

ವೃಷಭ: ನಿಮ್ಮ ಕಾರ್ಯಚಟುವಟಿಕೆಗಳು ಇತರರ ಅಪಹಾಸ್ಯಕ್ಕೆ ವಸ್ತುವಾಗುವ ಸಾಧ್ಯತೆ ಇದ್ದು ಇದರಿಂದ ಧೃತಿಗೆಡುವ ಅವಶ್ಯಕತೆ ಇಲ್ಲ. ನಿಮ್ಮ ದೃಢ ಸಂಕಲ್ಪದಿಂದ ಯಶಸ್ಸನ್ನು ಸಾಧಿಸುವಿರಿ.

ಮಿಥುನ: ಒರಟುತನದಿಂದಾಗಿ ಇತರರ ತಿರಸ್ಕಾರಕ್ಕೆ ಒಳಗಾಗುವ ಸಾಧ್ಯತೆ ಇದೆ. ಕೌಟುಂಬಿಕ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಿ. ಸಂಗಾತಿಯ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಉತ್ತಮ.

ಕರ್ಕಾಟಕ: ಬಹುದಿನಗಳ ವೃತಿಯಲ್ಲಿನ ಉದ್ವಿಘ್ನತೆ ದೂರವಾಗಲಿದೆ. ಸಂಗಾತಿಯೊಂದಿಗೆ ವಿಶ್ರಾಂತ ಸ್ಥಳಕ್ಕೆ ತೆರಳಲಿದ್ದೀರಿ. ನಿವೃತ್ತರಿಗೆ ಪುಣ್ಯ ಕ್ಷೇತ್ರ ದರ್ಶನ ಸಾಧ್ಯತೆ. ಉನ್ನತ ಸ್ಥಾನ ಲಭ್ಯವಾಗುವ ಸಾಧ್ಯತೆ.

ಸಿಂಹ: ಕಾರ್ಯಾನುಭವ ಮತ್ತು ಕ್ಷಮತೆಯಿಂದಾಗಿ ಉತ್ತಮ ಅವಕಾಶಗಳು ಒದಗಿ ಬರುವುದು. ಸಾಧಕ–ಬಾಧಕಗಳನ್ನು ತೂಗಿ ನೋಡುವುದು ಉತ್ತಮ. ಮಗನಿಂದ ಶುಭವಾರ್ತೆ ಕೇಳುವಿರಿ.

ಕನ್ಯಾ: ಉತ್ತಮ ಕಾರ್ಯವೊಂದನ್ನು ಹಮ್ಮಿಕೊಂಡಿದ್ದಲ್ಲಿ ಹಿರಿಯರ ಆಶೀರ್ವಾದದಿಂದ ಯಶಸ್ವಿಯಾಗುವಿರಿ. ದೂರದ ಬಂಧುಗಳ ಆಗಮನ ಸಾಧ್ಯತೆ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆ ಇರಲಿ.

ತುಲಾ: ನಿಮ್ಮ ಮಾತುಗಳಿಂದಾಗಿಯೇ ವೃಥಾ ಆರೋಪ ಎದುರಿಸುವ ಸಾಧ್ಯತೆ. ಮಾತಿನ ಮೇಲೆ ಹಿಡಿತವಿರಲಿ. ನಿಷ್ಕಲ್ಮಷ ಮನಸ್ಸಿನಿಂದ ವ್ಯವಹರಿಸಿ. ಅತಿಯಾದ ಸಂತೋಷ ಮೈಮರೆಸುವ ಸಾಧ್ಯತೆ.

ವೃಶ್ಚಿಕ: ರಾಜಕಾರಣಿಗಳು ಶ್ರೇಯಸ್ಸನ್ನು ನಿರೀಕ್ಷಿಸಬಹುದು. ಉತ್ತಮ ಹುದ್ದೆ ದೊರಕುವ ಸಾಧ್ಯತೆ. ಸ್ನೇಹಿತರ ಸಹಾಯ ದೊರೆಯಲಿದೆ. ಮಾಧ್ಯಮ ಮತ್ತು ಪ್ರಚಾರ ವ್ಯವಹಾರಗಳಲ್ಲಿರುವವರಿಗೆ ಉತ್ತಮ ಪ್ರಗತಿ.

ಧನು: ಗೃಹಿಣಿಯರ ಅಭಿಲಾಷೆಗಳನ್ನು ಪೂರೈಸುವುದು ಉತ್ತಮ. ಮನೆಯವರ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಉದ್ವೇಗಕ್ಕೊಳಗಾಗದೆ ಶಾಂತ ಮನಸ್ಸಿನಿಂದ ಎಲ್ಲದಕ್ಕೂ ಪರಿಹಾರ.

ಮಕರ: ಸಂಗಾತಿಯ ಸಮೀಪವೇ ಇದ್ದು ಮನದಿಚ್ಛೆಯನ್ನು ಪೂರೈಸಿ. ನಿಮ್ಮ ಇಚ್ಛೆಗೆ ಉತ್ತಮ ಸಹಕಾರ ದೊರೆಯಲಿದೆ. ನೆಮ್ಮದಿಯ ದಿನವಾಗಲಿದೆ. ಇಚ್ಛೆಯ ಪೂರೈಕೆಗಾಗಿ ಪಕ್ಷಿಗಳಿಗೆ ಕಾಳುಗಳನ್ನು ನೀಡಿ.

ಕುಂಭ: ಸಭೆಯೊಂದರಲ್ಲಿ ಭಾಗವಹಿಸಿ ವಿಷಯವೊಂದರ ಕುರಿತು ಅಭಿಪ್ರಾಯ ಮಂಡಿಸುವ ಸಾಧ್ಯತೆ. ಕಳೆದುಕೊಂಡ ವಸ್ತುಗಳು ಕೈ ಸೇರುವ ಸಂಭವ. ಸಂಸಾರ ಸಮೇತ ದೂರದ ಪ್ರಯಾಣ ಮಾಡಲಿದ್ದೀರಿ. ಮಾನಸಿಕ ನೆಮ್ಮದಿ.

ಮೀನ: ವ್ಯವಹಾರಗಳು ಸುಗಮವಾಗಿ ನೆರವೇರುವವು. ಬರಬೇಕಾಗಿರುವ ಹಣ ನಿಮ್ಮ ಕೈ ಸೇರುವುದರಲ್ಲಿ ಅನುಮಾನವಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗದ ವಿಷಯದಲ್ಲಿ ಮಾಡಿದ ಪ್ರಯತ್ನಗಳು ಫಲ ನೀಡಲಿವೆ.

ನಿಮ್ಮ ಜನ್ಮದಿನ 15-ಮೇ: ಈ ದಿನ ಅತ್ಯಂತ ಶುಭಕರ. ವ್ಯವಹಾರದಲ್ಲಿ ಹೊಸದೊಂದು ಆದಾಯ ಮೂಲವನ್ನು ಕಂಡುಕೊಳ್ಳುವಿರಿ. ನೌಕರಿಯಲ್ಲಿರುವವರಿಗೆ ದಕ್ಷತೆಯ ಪ್ರತೀಕವಾಗಿ ಬಡ್ತಿ ದೊರಕುವ ಸಾಧ್ಯತೆ. ಆರೋಗ್ಯ ಭಾಗ್ಯ ಉತ್ತಮವಾಗಿರುವುದು. ಹಣಕಾಸಿನ ವಿಷಯದಲ್ಲಿ ವಿಶೇಷ ಕಾಳಜಿ ವಹಿಸಬೇಕಾದೀತು.


ಪದಬಂಧ 4597 – ವಿದ್ಯಾ ವಿನಯ್‌

ಎಡದಿಂದ ಬಲಕ್ಕೆ

1.ನೆಲ ಅಥವಾ ಬೆಟ್ಟದಲ್ಲಿ ಕೊರೆದು ಮಾಡಿದ ಗುಪ್ತದಾರಿ (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5.ಕಳೆಯುವ ಲೆಕ್ಕ (5)
7.ರಗಳೆ ಮಾಡಿದವನ ಮುಂದಿರುವ ವಿಷ! (3)
8.ಇದಂತೂ ಕೆಲಸಕ್ಕೆ ಬಾರದ ಮಾತು (5)
10.ಆಸೆ ಹೀಗೆ ಬಂದಿದೆ (3)
11.ಅದೇ ತಾನೆ ಲಗ್ನವಾದ ಗಂಡ ಹೆಂಡತಿ (5)
14.ಸುಗಂಧಯುಕ್ತ ಜಲ (3)
15.ಈತ ಕೊಳ್ಳೆ ಹೊಡೆಯುವವನು (5)

ಮೇಲಿಂದ ಕೆಳಕ್ಕೆ

1.ಕೇಳಲು ಹಿತಕರವಾದುದು (3)
2.ಗಣಿತವನ್ನು ಬಲ್ಲವನು (3)
4.ತುಂಬಾ ಅಪರೂಪವಾದುದು (3)
6.ಸೊಗಸಾಗಿಯೂ ಕಾಣುತ್ತಿರುವ ಶುಭಚಿಹ್ನೆ (3)
7.ಜಾಗಟೆ ಸದ್ದಿಗೇ ಈ ಗೊಂದಲವೇ! (3)
8.ಧಾನ್ಯ ಕುಟ್ಟಲು ಬಳಸುತ್ತಿದ್ದ ಸಾಧನ (3)
9.ಬೊಕ್ಕಸದ ಹತ್ತಿರವಿರುವ ಅಸುರ (3)
10.ಸ್ಲೇಟಿನ ಮೇಲೆ ಬರೆಯಲು ಬಳಸುವ ಸಾಧನ (3)
12.ದಂಗೆಯೊಳಗಿರುವ ಪಲ್ಲಕ್ಕಿ (3)
13.ತೀರದಲ್ಲೆಲ್ಲಾ ಕವಿದಿರುವ ಅಂಧಕಾರ (3)



4596ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮನೋರಥ 3.ಒಡ್ಡೋಲಗ 5.ಕುಲುಮೆ 6.ರಿಕಾಪು 8.ದುರುಳ 9.ನಿಮಿಷ 10.ನಗದು 12.ಸಂಭಾವ್ಯ 14.ರಣಭೇರಿ 15.ನತದೃಷ್ಟ

ಮೇಲಿಂದ ಕೆಳಕ್ಕೆ: 1.ಮದಕರಿ 2.ಥಳುಕು 3.ಒಲುಮೆ 4.ಗಟ್ಟಿಕುಳ 7.ಪುರುಷ 8.ದುಮ್ಮಾನ 9.ನಿರುತ್ತರ 11.ದುರಾದೃಷ್ಟ 12.ಸಂಚಾರಿ 13.ವ್ಯಸನ

ಸುಡೊಕು 4983

				5		2		8
5		4	1		8		3	
	8	3		7			5	4
	6			3		1		2
2		5		1	7			
	3			8		5		6
		8			6		2	
3		2	7	4				
	5			2		4		1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4982 ಸುಡೊಕು


7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಾಂತೇವಾಡ:ನಕ್ಸಲ್ ಹತ

ದಾಂತೇವಾಡ (ಪಿಟಿಐ): ಛತ್ತೀಸಗಡದ ದಾಂತೇವಾಡ ಜಿಲ್ಲೆಯಲ್ಲಿ ಶುಕ್ರವಾರ ನಡೆದ ಎನ್‌ಕೌಂಟರ್‌ನಲ್ಲಿ ನಕ್ಸಲ್ ಒಬ್ಬ ಹತನಾಗಿದ್ದು, ಸ್ಥಳದಿಂದ 2 ಕೆ.ಜಿ. ಸುಧಾರಿತ ಸ್ಫೋಟಕ ಸಾಮಗ್ರಿ, ದೇಸಿ ಬಂದೂಕು ವಶಪಡಿಸಿಕೊಳ್ಳಲಾಗಿದೆ.

ಮುಸ್ತಲ್‌ನಾರ್ ಸಮೀಪ ಬೆಳಿಗ್ಗೆ 7.30ರ ಸುಮಾರಿಗೆ ಗುಂಡಿನ ದಾಳಿ ನಡೆಯಿತು. ರಾಮಚಂದ್ರ ಕರ್ತಿ (20) ಎಂಬಾತನ ಮೃತದೇಹ ಸ್ಥಳದಲ್ಲಿ ಪತ್ತೆಯಾಯಿತು ಎಂದು ಜಿಲ್ಲಾ ಪೊಲೀಸ್ ವರಿಷ್ಠ ಅಭಿಷೇಕ್ ಪಲ್ಲವ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು 41



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,696
ಇಂದಿನ ಅಂತ್ಯ	14,677
▼	18
ದಿನದ ಗರಿಷ್ಠ	14,749

ವಿನಿಮಯ ದರ

$ ಡಾಲರ್	73.29
£ ಪೌಂಡ್	103.07
€ ಯುರೊ	88.76
¥ ಯೆನ್ (100ಕ್ಕೆ)	66.92

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1490 (1487)
ಸೂರ್ಯಕಾಂತಿ (ರಿಫೈನ್ಡ್)	₹1710 (1710)
ಪಾಮೋಲಿನ್	₹1385 (1380)

ಮುಂಬೈ ಧಾರಣೆ

ಶೇಂಗಾ

14-05-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1450 (1450)
ಪಾಮ್ ವಾರದ ಡೆಲಿವರಿ	1383 (1378)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,600 (47,550)
ಬೆಳ್ಳಿ ಕೆ.ಜಿ
70,500 (70,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೆಟ್ರೋಲ್, ಡೀಸೆಲ್ ಬೆಲೆ ಮತ್ತೆ ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಶುಕ್ರವಾರ ಏರಿಕೆ ಆಗಿದೆ. ಇದರ ಪರಿಣಾಮವಾಗಿ ದೆಹಲಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಸಾರ್ವಕಾಲಿಕ ದಾಖಲೆಯ ಮಟ್ಟವನ್ನು ತಲುಪಿದೆ.

ಶುಕ್ರವಾರದ ಹೆಚ್ಚಳದಿಂದಾಗಿ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ಬೆಲೆಯು ₹ 95.41, ಡೀಸೆಲ್ ಬೆಲೆಯು ₹ 87.94 ಆಗಿದೆ. ಪೆಟ್ರೋಲ್ ಬೆಲೆಯಲ್ಲಿ 30 ಪೈಸೆ, ಡೀಸೆಲ್ ಬೆಲೆ 37 ಪೈಸೆ ಹೆಚ್ಚಳ ಆಗಿದೆ.

ದೆಹಲಿಯಲ್ಲಿ ಲೀಟರ್ ಪೆಟ್ರೋಲ್ ಬೆಲೆಯು ₹ 92.34ಕ್ಕೆ, ಡೀಸೆಲ್ ಬೆಲೆಯು ₹ 82.95ಕ್ಕೆ ತಲುಪಿದೆ.



ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಕೆಲವು ಕಡೆಗಳಲ್ಲಿ ಲೀಟರ್ ಪೆಟ್ರೋಲ್ ಬೆಲೆಯು ಈಗಾಗಲೇ ₹ 100ರ ಗಡಿ ದಾಟಿದೆ. ಶುಕ್ರವಾರದ ಹೆಚ್ಚಳದ ಪರಿಣಾಮವಾಗಿ ಮುಂಬೈನಲ್ಲಿ ಪೆಟ್ರೋಲ್ ದರವು ₹ 100ರತ್ತ ಸಮೀಪಿಸಿದೆ. ಈಗ ಮುಂಬೈನಲ್ಲಿ ಪೆಟ್ರೋಲ್ ಬೆಲೆ ₹ 98.65.

ಕೋವಿಡ್ ಲಸಿಕೆ: ಬ್ಯಾಂಕ್ ಸಿಬ್ಬಂದಿಗೆ ಆದ್ಯತೆ

ನವದೆಹಲಿ (ಪಿಟಿಐ): ಕೋವಿಡ್-19ಕ್ಕೆ ಲಸಿಕೆ ನೀಡುವಾಗ ಬ್ಯಾಂಕ್ ಹಾಗೂ ವಿಮಾ ಕಂಪನಿಗಳ ಉದ್ಯೋಗಿಗಳಿಗೆ ಆದ್ಯತೆ ನೀಡುವಂತೆ ಕೇಂದ್ರ ಹಣಕಾಸು ಸಚಿವಾಲಯವು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ. ಬ್ಯಾಂಕ್ ಮತ್ತು ವಿಮಾ ಕಂಪನಿಗಳ ಉದ್ಯೋಗಿಗಳು ಸಂಕಷ್ಟದ ಈ ಸಂದರ್ಭದಲ್ಲಿ ಹೆಚ್ಚಿನ ಅಪಾಯ ಎದುರಿಸುತ್ತಿದ್ದಾರೆ ಎಂದು ಸಚಿವಾಲಯ ಹೇಳಿದೆ.

ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ದೇಬಶಿಶ್ ಪಾಂಡಾ ಅವರು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದು, 'ಇವರಿಗೆ ಆದ್ಯತೆ ಮೇಲೆ ಲಸಿಕೆ ನೀಡಲು ವ್ಯವಸ್ಥೆ ಕಲ್ಪಿಸುವುದನ್ನು ಪರಿಗಣಿಸಬೇಕು' ಎಂದು ಹೇಳಿದ್ದಾರೆ.

'ನಮ್ಮ ಬ್ಯಾಂಕ್ ಹಾಗೂ ವಿಮಾ ಕಂಪನಿ ಸಿಬ್ಬಂದಿ, ಪಾವತಿ ಸೇವೆ ಒದಗಿಸುವವರು, ಬ್ಯಾಂಕ್ ಮಿತ್ರರು ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳು ಅಡೆತಡೆ ಇಲ್ಲದೆ ಸಿಗುವಂತೆ ನೋಡಿಕೊಳ್ಳುತ್ತಿದ್ದಾರೆ' ಎಂದು ಪಾಂಡಾ ಅವರು ಟ್ವೀಟ್ ಮಾಡಿದ್ದಾರೆ.

ಈ ವಲಯದ ಸಿಬ್ಬಂದಿ ತಮ್ಮ ಕರ್ತವ್ಯ ನಿರ್ವಹಿಸಲು ಮುಕ್ತವಾಗಿ ಓಡಾಟ ನಡೆಸುವ ವ್ಯವಸ್ಥೆ ಇರಬೇಕು. ರಾಜ್ಯಗಳು ಈ ಬಗ್ಗೆ ಗಮನ ನೀಡಬೇಕು ಎಂದು ಪಾಂಡಾ ಅವರು ಪತ್ರದಲ್ಲಿ ಹೇಳಿದ್ದಾರೆ. ದೇಶದ ಬ್ಯಾಂಕಿಂಗ್ ವಲಯದಲ್ಲಿ 13.5 ಲಕ್ಷ ನೌಕರರು ಇದ್ದಾರೆ. ಈ ಪೈಕಿ ಕಳೆದ ವರ್ಷ ಕೋವಿಡ್‌ನಿಂದಾಗಿ ಒಟ್ಟು 600 ಮಂದಿ ಸಾವನ್ನಪ್ಪಿದ್ದಾರೆ ಎಂದು ಭಾರತೀಯ ಬ್ಯಾಂಕ್‌ಗಳ ಒಕ್ಕೂಟ (ಐಬಿಎ) ಮಾಹಿತಿ ನೀಡಿದೆ.

ತಗ್ಗಿದ 'ಅಕ್ಷಯ ತೃತೀಯಾ' ವ್ಯಾಪಾರ

ನವದೆಹಲಿ (ಪಿಟಿಐ): ಕೋವಿಡ್ ಪೂರ್ವದ ಸ್ಥಿತಿಗೆ ಹೋಲಿಸಿದರೆ ಈ ವರ್ಷದ ಅಕ್ಷಯ ತೃತೀಯಾ ದಿನ (ಶುಕ್ರವಾರ) ಶೇಕಡ 10ರಷ್ಟು ವ್ಯಾಪಾರ ಮಾತ್ರ ನಡೆದಿದೆ ಎಂದು ಚಿನ್ನಾಭರಣಗಳ ಉದ್ಯಮ ಅಂದಾಜಿಸಿದೆ.

ಕೋವಿಡ್‌ಗೂ ಮೊದಲು ಅಕ್ಷಯ ತೃತೀಯಾ ದಿನ ದೇಶದಲ್ಲಿ 25ರಿಂದ 30 ಟನ್ ಚಿನ್ನ, ಚಿನ್ನಾಭರಣ, ಮುತ್ತುಗಳ ವ್ಯಾಪಾರ ನಡೆಯುತ್ತಿತ್ತು. ಆದರೆ, ಈ ವರ್ಷ 3ರಿಂದ 4 ಟನ್ ಮಾತ್ರ ವ್ಯಾಪಾರ ಆಗಿದೆ ಎಂಬುದು ಉದ್ಯಮದ ಅಂದಾಜು. ಕಲ್ಯಾಣ್ ಜ್ಯುವೆಲರ್ಸ್‌ನಂತಹ ದೊಡ್ಡ ಕಂಪನಿಗಳು ಶುಕ್ರವಾರ ಆನ್‌ಲೈನ್ ಮೂಲಕ ಆಭರಣಗಳ ಬುಕಿಂಗ್ ತೆಗೆದುಕೊಂಡಿದ್ದು, ನಂತರದಲ್ಲಿ ಅವುಗಳನ್ನು ಗ್ರಾಹಕರಿಗೆ ತಲುಪಿಸಲಿವೆ.



'ಆನ್‌ಲೈನ್ ಮೂಲಕ ಗ್ರಾಹಕರು ಚಿನ್ನದ ಬುಕಿಂಗ್ ಮಾಡಿದ್ದಾರೆ. ಆದರೆ, ಒಟ್ಟಾರೆಯಾಗಿ ಹೇಳುವುದಾದರೆ, ಕೋವಿಡ್‌ನ ಎರಡನೆಯ ಅಲೆ ಹಾಗೂ ನಗದು ಕೊರತೆಯ ಕಾರಣದಿಂದಾಗಿ ಗ್ರಾಹಕರ ಸ್ಪಂದನ ಹೆಚ್ಚಿನ ಪ್ರಮಾಣದಲ್ಲಿ ಇಲ್ಲ' ಎಂದು ಪಿಎನ್‌ಜಿ ಜ್ಯುವೆಲರ್ಸ್ ಕಂಪನಿ ಅಧ್ಯಕ್ಷ ಸೌರಭ್ ಗಾಡ್ಗೀಳ್ ತಿಳಿಸಿದರು.

'ಪರಿಸ್ಥಿತಿ ತಿಳಿಯಾದ ನಂತರ ಗ್ರಾಹಕರಲ್ಲಿ ಖರೀದಿಯ ಹುಮ್ಮಸ್ಸು ಮತ್ತೆ ಬರುತ್ತದೆ. ಚಿನ್ನದ ಬೆಲೆಯು ಈಗಿನ ಹಂತದಿಂದ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯೂ ಇದೆ' ಎಂದರು.

'ಅಕ್ಷಯ ತೃತೀಯಾ ದಿನ ದಕ್ಷಿಣ ಭಾರತದ ರಾಜ್ಯಗಳಲ್ಲಿ ದೊಡ್ಡ ಮಟ್ಟದ ವಹಿವಾಟು ನಡೆಯುತ್ತಿತ್ತು. ಆದರೆ ಈ ರಾಜ್ಯಗಳಲ್ಲಿ ಲಾಕ್‌ಡೌನ್ ನಿರ್ಬಂಧಗಳು ಜಾರಿಯಲ್ಲಿವೆ. ಎರಡರಿಂದ ಮೂರು ರಾಜ್ಯಗಳಲ್ಲಿ ಮಾತ್ರ ಮಳಿಗೆಗಳನ್ನು ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ತೆರೆಯಲು ಅವಕಾಶವಿದೆ. ಈ ಅವಧಿಯು ಚಿನ್ನ ಖರೀದಿಗೆ ಹೇಳಿ ಮಾಡಿಸಿದ ಸಮಯ ಅಲ್ಲ' ಎಂದು ಕಲ್ಯಾಣ್ ಜ್ಯುವೆಲರ್ಸ್ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ರಮೇಶ್ ಕಲ್ಯಾಣರಾಮನ್ ಹೇಳಿದರು.

ಸ್ವತಂತ್ರ ನಿರ್ದೇಶಕರ ಸಂಖ್ಯೆ ಇಳಿಕೆ

ನವದೆಹಲಿ (ಪಿಟಿಐ): 2019 ಹಾಗೂ 2018ನೆಯ ಇಸವಿಗಳಿಗೆ ಹೋಲಿಸಿದರೆ 2020ರಲ್ಲಿ ಸ್ವತಂತ್ರ ನಿರ್ದೇಶಕರ ಸಂಖ್ಯೆ ಕಡಿಮೆ ಆಗಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ನಿರ್ದೇಶಕರನ್ನು ನೇಮಕ ಮಾಡದಿರುವುದು ಸಂಖ್ಯೆ ಕಡಿಮೆ ಆಗಿರುವುದಕ್ಕೆ ಮುಖ್ಯ ಕಾರಣ ಎಂದು ವರದಿಯೊಂದು ಹೇಳಿದೆ.

2018ರಲ್ಲಿ ಇದ್ದ ಸ್ವತಂತ್ರ ನಿರ್ದೇಶಕರ ಸಂಖ್ಯೆ 2,494 ಆಗಿತ್ತು. 2019ರಲ್ಲಿ ಇವರ ಸಂಖ್ಯೆಯು 2,396ಕ್ಕೆ ಇಳಿಕೆಯಾಯಿತು. 2020ರಲ್ಲಿ 2,249ಕ್ಕೆ ತಗ್ಗಿತು ಎಂದು ಸಾಂಸ್ಥಿಕ ಹೂಡಿಕೆದಾರರ ಸಲಹಾ ಸೇವಾ ಸಂಸ್ಥೆ (ಐಐಎಎಸ್) ಸಿದ್ಧಪಡಿಸಿರುವ ವರದಿ ಹೇಳಿದೆ. ನಿಫ್ಟಿ–500 ಕಂಪನಿಗಳ ಆಡಳಿತ ಮಂಡಳಿಗಳನ್ನು ಅಧ್ಯಯನ ನಡೆಸಿ ಅದು ಈ ವರದಿ ಸಿದ್ಧಪಡಿಸಿದೆ.

2020ರ ಡಿಸೆಂಬರ್‌ವರೆಗಿನ ಮಾಹಿತಿಯ ಪ್ರಕಾರ, ನಿಫ್ಟಿ–500 ಕಂಪನಿಗಳಲ್ಲಿ ಒಟ್ಟು 141 ಸ್ವತಂತ್ರ ನಿರ್ದೇಶಕರ ನೇಮಕಾತಿಯು ಬಾಕಿ ಇತ್ತು. ಸ್ವತಂತ್ರ ನಿರ್ದೇಶಕರನ್ನು ನೇಮಿಸಬೇಕು ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮಗಳು ಹೇಳುತ್ತವೆ. ಆದರೆ, 2020ರ ಡಿಸೆಂಬರ್ 31ರ ವೇಳೆಗೆ ಶೇಕಡ 14ರಷ್ಟು ಕಂಪನಿಗಳು (70 ಕಂಪನಿಗಳು) ಆಡಳಿತ ಮಂಡಳಿಯಲ್ಲಿನ ನೇಮಕಾತಿ ವಿಚಾರದಲ್ಲಿ ನಿಯಮಗಳನ್ನು ಸರಿಯಾಗಿ ಪಾಲಿಸಿರಲಿಲ್ಲ. ಈ 70 ಕಂಪನಿಗಳ ಪೈಕಿ 55 ಕಂಪನಿಗಳು ಸರ್ಕಾರಿ ಮಾಲೀಕತ್ವದವು.

ಕ್ಯಾಂಪ್ಕೊ: 17ರಿಂದ ಖರೀದಿ ಪುನರಾರಂಭ

ಮಂಗಳೂರು: ಲಾಕ್‌ಡೌನ್‌ನಿಂದಾಗಿ ಕೆಲವು ದಿನಗಳಿಂದ ಖರೀದಿ ಸ್ಥಗಿತಗೊಳಿಸಿದ್ದ ಕ್ಯಾಂಪ್ಕೊ, ಮೇ 17ರಿಂದ ಕೃಷಿ ಉತ್ಪನ್ನಗಳ ಖರೀದಿ ಪುನರಾರಂಭಿಸಲು ನಿರ್ಧರಿಸಿದೆ.

ಕೇರಳ ಮತ್ತು ಕರ್ನಾಟಕದಲ್ಲಿರುವ ಸಂಸ್ಥೆಯ ಎಲ್ಲ ಶಾಖೆಗಳಲ್ಲಿ ಅಡಿಕೆ ಮತ್ತು ಕೊಕ್ಕೊ ಬೀಜಗಳನ್ನು ಖರೀದಿಸಲಾಗುವುದು. ನಿತ್ಯ ಗರಿಷ್ಠ 25 ಸದಸ್ಯರಿಂದ (ಉಪ ಶಾಖೆಗಳಲ್ಲಿ ವಾರದಲ್ಲಿ ಒಂದು ದಿನ ಗರಿಷ್ಠ 15 ಸದಸ್ಯರಿಂದ) ಸರದಿಯ ಪ್ರಕಾರ ಉತ್ಪನ್ನಗಳನ್ನು ಖರೀದಿ ಮಾಡಲಾಗುತ್ತದೆ. ಪ್ರತಿ ಸದಸ್ಯರಿಂದ ಗರಿಷ್ಠ ಒಂದು ಕ್ವಿಂಟಲ್ ಅಡಿಕೆಯನ್ನು ಸಂಸ್ಥೆ ಖರೀದಿಸಲಿದೆ.

ಕೊಕ್ಕೊ ಖರೀದಿಗೆ ಯಾವುದೇ ನಿರ್ಬಂಧ ಇಲ್ಲ. ಆದರೆ ಕಾಳುಮೆಣಸಿನ ಖರೀದಿ ಸ್ಥಗಿತಗೊಳಿಸಲಾಗಿದೆ ಎಂದು ಅಧ್ಯಕ್ಷ ಎ. ಕಿಶೋರ್ ಕುಮಾರ್ ಕೊಡ್ಗಿ, ವ್ಯವಸ್ಥಾಪಕ ನಿರ್ದೇಶಕ ಎಚ್.ಎಂ. ಕೃಷ್ಣಕುಮಾರ್ ತಿಳಿಸಿದ್ದಾರೆ.

ನದಿಗಳಲ್ಲಿ ಶವ ಪತ್ತೆ: ವಿಪತ್ತು ದಳ ಗಸ್ತಿಗೆ ಸೂಚನೆ

ಲಖನೌ (ಪಿಟಿಐ): ನದಿಗಳಲ್ಲಿ ಶವಗಳ ಅಂತ್ಯಸಂಸ್ಕಾರ ಮಾಡುವುದನ್ನು ತಡೆಯುವ ನಿಟ್ಟಿನಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ನದಿಗಳ ದಡದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ದಳ (ಎಸ್‌ಡಿಆರ್‌ಎಫ್) ಹಾಗೂ ಪ್ರಾಂತೀಯ ಸಶಸ್ತ್ರ ಪೊಲೀಸ್ ಪಡೆಗೆ (ಪಿಎಸಿ) ಗಸ್ತು ತಿರುಗಲು ಶುಕ್ರವಾರ ಆದೇಶ ನೀಡಿದ್ದಾರೆ.

ಇತ್ತೀಚೆಗೆ ಗಂಗಾ ನದಿಯಲ್ಲಿ ಸಾಲುಸಾಲು ಹೆಣಗಳು ತೇಲಿಕೊಂಡು ಬಂದ ಬೆನ್ನಲ್ಲೇ ಆದಿತ್ಯನಾಥ್ ಈ ರೀತಿ ಆದೇಶ ಹೊರಡಿಸಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಮತ್ತು ಪ್ರಾಂತೀಯ ಸಶಸ್ತ್ರ ಪೊಲೀಸ್ ಪಡೆಯು (ಪಿಎಸಿ) ನದಿಗಳ ಸುತ್ತಮುತ್ತ ಗಸ್ತು ತಿರುಗಬೇಕು ಮತ್ತು ನದಿಗಳಲ್ಲಿ ಯಾವುದೇ ಶವಗಳನ್ನು ವಿಲೇವಾರಿ ಮಾಡದಂತೆ ನೋಡಿಕೊಳ್ಳಬೇಕು' ಎಂದು ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ.

ಕೊರೊನಾ ಸೋಂಕಿತನಿಗೆ ಕಲ್ಲೇಟು

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ: ತಾಲ್ಲೂಕಿನ ಕಾರಾಪುರ ಗ್ರಾಮದಲ್ಲಿ ಕೊರೊನಾ ಸೋಂಕಿತರೊಬ್ಬರನ್ನು ಊರಿನಿಂದ ಆಚೆ ಹೋಗುವಂತೆ ಬಲವಂತ ಮಾಡಿದ್ದಲ್ಲದೇ, ಅವರ ಮೇಲೆ ಬುಧವಾರ ಕಲ್ಲಿನಿಂದ ಹಲ್ಲೆ ನಡೆಸಲಾಗಿದೆ.

ಆರೋಪಿಗಳಾದ, ಕಾರಾಪುರದ ದಾಸೇಗೌಡ ಮತ್ತು ಬಲರಾಮ ಪರಾರಿಯಾಗಿದ್ದು, ಅವರ ವಿರುದ್ಧ ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪಿಎಸ್‌ಐ ಜಯಪ್ರಕಾಶ್ ತಿಳಿಸಿದರು.

ಸೋಂಕಿತ ವ್ಯಕ್ತಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಆ ಬಳಿಕ ಎಚ್.ಡಿ.ಕೋಟೆ ತಾಲ್ಲೂಕಿನ ಏಕಲವ್ಯ ವಸತಿ ಶಾಲೆಯ ಕೊವೀಡ್ ಆರೈಕೆ ಕೇಂದ್ರಕ್ಕೆ ದಾಖಲಿಸಲಾಗಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾಹಿತಿ ನೀಡಿದರು.

'ಅವರ ಕುಟುಂಬಕ್ಕೂ ರಕ್ಷಣೆ ಒದಗಿಸಲಾಗಿದೆ. ಅವರಿಗೆ ಆಹಾರದ ಕಿಟ್ ವಿತರಿಸಿ, ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಎನ್.ಬೆಳತ್ತೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸ್ವಾಮಿ ತಿಳಿಸಿದರು.

ಈ ಬಗ್ಗೆ ದೂರವಾಣಿಯಲ್ಲಿ 'ಪ್ರಜಾವಾಣಿ' ಜೊತೆ ಮಾತನಾಡಿದ ಸೋಂಕಿತ, 'ನನಗೆ ಸೋಂಕು ಇರುವುದು ಬುಧವಾರ ಮಧ್ಯಾಹ್ನ ತಿಳಿಯಿತು. ಆಂಬುಲೆನ್ಸ್‌ಗೆ ಕಾಯುತ್ತಾ ಒಬ್ಬನೇ ಕುಳಿತಿದ್ದೆ. ಆಗ ಊರಿನಿಂದ ಹೊರಹೋಗುವಂತೆ ಹೇಳಿ, ಕಲ್ಲಿನಿಂದ ಹೊಡೆದರು. ರಕ್ಷಣೆಗೆ ಬಂದ ತಂದೆ-ತಾಯಿ ಮೇಲೂ ಹಲ್ಲೆ ಮಾಡಿ, ಮನೆಗೂ ಕಲ್ಲು ಎಸೆದರು' ಎಂದು ದೂರಿದರು.

ಶೀರೂರು ಮಠದ ಉತ್ತರಾಧಿಕಾರಿ ಪಟ್ಟಾಭಿಷೇಕ


ನೂತನ ಯತಿ ವೇದವರ್ಧನ ತೀರ್ಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಹಿರಿಯಡಕ (ಉಡುಪಿ): ಅಷ್ಟಮಠಗಳಲ್ಲಿ ಒಂದಾಗಿರುವ ಶೀರೂರು ಮಠದ ಉತ್ತರಾಧಿಕಾರಿಯ ಪಟ್ಟಾಭಿಷೇಕ ಶುಕ್ರವಾರ ನೆರವೇರಿತು. 16 ವರ್ಷದ ಅನಿರುದ್ಧ ಸರಳತ್ತಾಯ ಅವರಿಗೆ ವೇದವರ್ಧನ ತೀರ್ಥ ಸ್ವಾಮೀಜಿ ಎಂದು ಮರು ನಾಮಕರಣ ಮಾಡಲಾಯಿತು. ಅವರು ಶೀರೂರು ಮಠದ 31ನೇ ಯತಿಯಾಗಿದ್ದಾರೆ.

ಮಧ್ಯಾಹ್ನ 12.45ಕ್ಕೆ ಹಿರಿಯಡಕದ ಶೀರೂರು ಮೂಲಮಠದಲ್ಲಿ ಪಟ್ಟಾಭಿಷೇಕದ ವಿಧಿವಿಧಾನಗಳು ನಡೆದವು. ದ್ವಂದ್ವ ಮಠವಾದ ಸೋದೆ ವಾದಿರಾಜ ಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ, ನೂತನ ಯತಿಗೆ ಪಟ್ಟಾಭಿಷೇಕ ಮಾಡಿದರು. ಇದಕ್ಕೂ ಮುನ್ನ ಪುರುಷಸೂಕ್ತ ಹೋಮ, ವಿರಜಾ ಹೋಮ, ವೇದವ್ಯಾಸ ಮಂತ್ರ ಹೋಮ ಸೇರಿ ಧಾರ್ಮಿಕ ವಿಧಿವಿಧಾನಗಳು ನಡೆದವು.

ನೂತನ ಯತಿ ಧರ್ಮಸ್ಥಳದ ನಿಡ್ಲೆಯವರು.



ನೂತನ ಯತಿಯ ಶಿರದ ಮೇಲೆ ಹರಿವಾಣದಲ್ಲಿ ಶೀರೂರು ಮಠದ ಉಪಾಸ್ಯಮೂರ್ತಿ ಸಹಿತ ಸಾಲಿಗ್ರಾಮನ್ನು ಇರಿಸಿ ಪಟ್ಟಾಭಿಷೇಕ ನೆರವೇರಿಸಲಾಯಿತು

ವಿದ್ವಾನ್ ಎಂ.ಉದಯಕುಮಾರ್ ಹಾಗೂ ವಿದ್ಯಾ ದಂಪತಿಯ ಪುತ್ರ. 10ನೇ ತರಗತಿಯವರೆಗೆ ಉಡುಪಿಯ ವಿದ್ಯೋದಯ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಮುಂದಿನ ವೇದಾಧ್ಯಯನವನ್ನು ಶಿರಸಿಯ ಸೋಂದಾ ಕ್ಷೇತ್ರದಲ್ಲಿ ಮುಂದುವರಿಸಲಿದ್ದಾರೆ.

ಕೋವಿಡ್‌ನಿಂದ ಅನಾಥ–ದೆಹಲಿ ಸರ್ಕಾರದಿಂದ ಆಸರೆ

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಕುಟುಂಬವು ಆದಾಯ ಮೂಲವನ್ನೇ ಕಳೆದುಕೊಂಡರೆ, ಅಂತಹ ಕುಟುಂಬಗಳಿಗೆ ದೆಹಲಿ ಸರ್ಕಾರ ಹಣಕಾಸಿನ ನೆರವು ನೀಡಲಿದ್ದು, ಮಕ್ಕಳ ವಿದ್ಯಾಭ್ಯಾಸ ಮತ್ತು ಇತರ ವೆಚ್ಚಗಳನ್ನು ಭರಿಸಲು ಮುಂದಾಗಿದೆ.

ಶುಕ್ರವಾರ ಆನ್‌ಲೈನ್‌ನಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಕೋವಿಡ್‌ನಿಂದ ಹಲವಾರು ಮಕ್ಕಳು ತಮ್ಮ ಪೋಷಕರನ್ನು ಕಳೆದುಕೊಂಡಿರುವುದು ನನಗ ಗಮನಕ್ಕೆ ಬಂದಿದೆ. ನಾನು ಈಗಲೂ ಇಲ್ಲಿದ್ದೇನೆ, ಯಾರೂ ಅನಾಥರಲ್ಲ, ಅವರ ವಿದ್ಯಾಭ್ಯಾಸ ಮತ್ತು ಪ್ರೌಢ ಹಂತದವರೆಗೆ ಅವರಿಗೆ ಎಲ್ಲಾ ನೆರವು ನೀಡಲಾಗುವುದು' ಎಂದು ಭರವಸೆ ನೀಡಿದರು.

ದೆಹಲಿಯಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯ ಹಾದಿಯಲ್ಲಿದ್ದು, ಕೋವಿಡ್ ವಿರುದ್ಧ ಹೋರಾಟ ಇನ್ನೂ ಮುಗಿದಿಲ್ಲ ಎಂದರು.

ಆ್ಯಂಬುಲೆನ್ಸ್ ಸಂಚಾರಕ್ಕೆ ನಿರ್ಬಂಧ ಬೇಡ: ತೆಲಂಗಾಣ ಹೈಕೋರ್ಟ್

ಹೈದರಾಬಾದ್: ಕೋವಿಡ್–19 ರೋಗಿಗಳನ್ನು ಸಾಗಿಸುವ ನೆರೆಯ ರಾಜ್ಯಗಳ ಆ್ಯಂಬುಲೆನ್ಸ್‌ಗಳ ಸಂಚಾರಕ್ಕೆ ನಿರ್ಬಂಧ ವಿಧಿಸದಂತೆ ತೆಲಂಗಾಣ ಹೈಕೋರ್ಟ್ ಶುಕ್ರವಾರ, ತೆಲಂಗಾಣ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ನ್ಯಾಯಾಲಯದ ಈ ಆದೇಶದಿಂದ ಕೋವಿಡ್–19 ರೋಗಿಗಳು ಅಲ್ಪಮಟ್ಟಿಗೆ ನಿರಾಳರಾಗಿದ್ದಾರೆ. ಪ್ರಮುಖವಾಗಿ ಆಂಧ್ರಪ್ರದೇಶದ ರೋಗಿಗಳು ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಇದ್ದ ತೊಡಕು ನಿವಾರಣೆಯಾಗಿದೆ.

'ಆಂಬ್ಯುಲೆನ್ಸ್‌ಗಳನ್ನು ತಡೆಯುವ ಹಕ್ಕನ್ನು ಯಾರು ನೀಡಿದ್ದಾರೆ' ಎಂದು ತೆಲಂಗಾಣ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಹಿಮಾ ಕೊಹ್ಲಿ ಪ್ರಶ್ನಿಸಿದರು.

ಕೇರಳದಲ್ಲಿ ಭಾರಿ ಮಳೆ: ಹೆಚ್ಚಿನ ನಿಗಾ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಭಾರಿ ಮಳೆ ಸುರಿಯುತ್ತಿರುವುದರಿಂದ ಅಲ್ಲಿನ ಸರ್ಕಾರ ಕಟ್ಟೆಚ್ಚರವಹಿಸಿದ್ದು, ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರನ್ನು ಶುಕ್ರವಾರ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ. ಅಲ್ಲದೆ ಪರಿಹಾರ ಶಿಬಿರಗಳನ್ನೂ ತೆರೆದಿದೆ.

ರಾಜ್ಯದ ಹಲವು ಭಾಗಗಳಲ್ಲಿ ಗುರುವಾರ ರಾತ್ರಿಯಿಂದ ನಿರಂತರ ಮಳೆ ಸುರಿಯುತ್ತಿದೆ.

ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ರಾಜಧಾನಿ ತಿರುವನಂತಪುರದ ಕರಮಣ ಮತ್ತು ಕಿಲ್ಲಿ ನದಿಗಳು ಉಕ್ಕಿ ಹರಿಯುತ್ತಿವೆ. ಅರುವಿಕ್ಕರ ಅಣೆಕಟ್ಟೆಗೆ ಒಳಹರಿವು ಹೆಚ್ಚಾಗಿದ್ದರಿಂದ ಅದರ ಗೇಟುಗಳನ್ನು ತೆರೆಯಾಗಿದೆ.

ಈ ನದಿಗಳ ಬದಿಯಲ್ಲಿ ವಾಸಿಸುತ್ತಿರುವ ಹಲವರನ್ನು ಮತ್ತು ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಮತ್ತು ಪರಿಹಾರ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. ರಾತ್ರಿ ಮಳೆಯಿಂದಾಗಿ ದಕ್ಷಿಣ ಕೊಲ್ಲಂ ಜಿಲ್ಲೆಯ ಅನೇಕ ಭಾಗಗಳಲ್ಲಿ ಮರಗಳು ಬುಡಮೇಲಾಗಿವೆ.

ಸಮುದ್ರದಲ್ಲಿ ಗುರುವಾರ ರಾತ್ರಿಯಿಂದ ಹೆಚ್ಚಿನ ಅಲೆಗಳು ಬರುತ್ತಿದ್ದು, ಕೊಲ್ಲಂ, ಆಲಪ್ಪುಳ, ಎರ್ನಾಕುಲಂ ಜಿಲ್ಲೆಗಳ ಕರಾವಳಿಯ ಹಲವು ಮನೆಗಳಿಗೆ ಹಾನಿ ಮಾಡಿವೆ.

ಮುನ್ನೆಚ್ಚರಿಕೆ ಕ್ರಮವಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ಒಂಬತ್ತು ತಂಡಗಳು ಕೇರಳಕ್ಕೆ ಬಂದಿವೆ.

ಜನರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ 3071 ಕಟ್ಟಡಗಳನ್ನು ಪರಿಹಾರ ಶಿಬಿರಗಳಿಗೆ ಗುರುತಿಸಲಾಗಿದೆ. ಇವುಗಳಲ್ಲಿ ಸುಮಾರು 4.23 ಲಕ್ಷ ಮಂದಿಗೆ ಆಶ್ರಯ ಕಲ್ಪಿಸಬಹುದಾಗಿದೆ. ಆದರೆ, ಕೋವಿಡ್–19 ಕಾರಣಕ್ಕೆ ಜನರು ಈ ಸ್ಥಳಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ ಎಂದು ಕಂದಾಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮೇ 31ಕ್ಕೆ ಕೇರಳಕ್ಕೆ ಮುಂಗಾರು

ನವದೆಹಲಿ (ಪಿಟಿಐ): ಕೇರಳಕ್ಕೆ ನೈಋತ್ಯ ಮುಂಗಾರು ಮೇ 31ಕ್ಕೆ ಆಗಮಿಸುವ ಸಾಧ್ಯತೆ ಇದೆ. ಇದು ಸಾಮಾನ್ಯ ದಿನಕ್ಕಿಂತಲೂ ಒಂದು ದಿನ ಮೊದಲು ಮುಂಗಾರು ಪ್ರವೇಶವಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಶುಕ್ರವಾರ ತಿಳಿಸಿದೆ.

'ತೌಕ್ತೆ' ಚಂಡಮಾರುತ: ಎನ್‌ಡಿಆರ್‌ಎಫ್‌ನಿಂದ 53 ತಂಡ

ನವದೆಹಲಿ (ಪಿಟಿಐ): ಅರಬ್ಬಿ ಸಮುದ್ರದಲ್ಲಿ ಸೃಷ್ಟಿಯಾಗುತ್ತಿರುವ 'ತೌಕ್ತೆ' ಚಂಡಮಾರುತದ ಪರಿಣಾಮಗಳನ್ನು ಎದುರಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 53 ತಂಡಗಳನ್ನು ಸಜ್ಜುಗೊಳಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಈ ತಂಡಗಳನ್ನು ಕೇರಳ, ಕರ್ನಾಟಕ, ತಮಿಳುನಾಡು, ಗುಜರಾತ್ ಮತ್ತು ಮಹಾರಾಷ್ಟ್ರದ ಕರಾವಳಿ ಪ್ರದೇಶಗಳಲ್ಲಿ ನಿಯೋಜಿಸಲಾಗುತ್ತಿದೆ ಎಂದು ಎನ್‌ಡಿಆರ್‌ಎಫ್ ಪ್ರಧಾನ ನಿರ್ದೇಶಕ ಎಸ್.ಎನ್. ಪ್ರಧಾನ್ ಟ್ವೀಟ್ ಮಾಡಿದ್ದಾರೆ.

ಈ 53 ತಂಡಗಳ ಪೈಕಿ 24 ತಂಡಗಳನ್ನು ಈಗಾಗಲೇ ನಿಯೋಜಿಸಲಾಗಿದೆ. ಉಳಿದ ತಂಡಗಳು ಸಜ್ಜಾಗಿದ್ದು, ಅಗತ್ಯ ಬಂದಾಗ ಬಳಸಿಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಪ್ರತಿ ಎನ್‌ಡಿಆರ್‌ಎಫ್ ತಂಡವು 40 ಸಿಬ್ಬಂದಿಯನ್ನು ಹೊಂದಿರುತ್ತದೆ. ಅವರ ಬಳಿ ಮರ, ಕಂಬ ಕತ್ತರಿಸುವ ಸಾಧನಗಳು ಇರುತ್ತವೆ. ದೋಣಿ, ಮೂಲ ವೈದ್ಯಕೀಯ ಸಾಮಗ್ರಿ ಸೇರಿದಂತೆ ಇತರ ಪರಿಹಾರ ಸಾಧನಗಳು ಈ ತಂಡಗಳಲ್ಲಿ ಇರುತ್ತವೆ.

ಅರಬ್ಬಿ ಸಮುದ್ರದಲ್ಲಿ ಲಕ್ಷದೀಪದ ಸಮೀಪ ಒತ್ತಡ ಸೃಷ್ಟಿಯಾಗಿದ್ದು, ದೇಶದ ಕರಾವಳಿ ತೀರದ ರಾಜ್ಯಗಳು ಎಚ್ಚರದಿಂದ ಇರಬೇಕು ಎಂದು ಭಾರತೀಯ ಹವಾಮಾನ ಇಲಾಖೆಯ ಸೂಚಿಸಿದೆ.


ಶನಿವಾರ ಬೆಳಿಗ್ಗೆಯಷ್ಟರಲ್ಲಿ ಅಲ್ಲಿ ವಾಯುಭಾರ ಕುಸಿತವಾಗಿ ನಂತರದ 24 ಗಂಟೆಗಳಲ್ಲಿ ಚಂಡಮಾರುತ ತೀವ್ರಗೊಳ್ಳುವ ಸಾಧ್ಯತೆ ಇದೆ ಎಂದು ಇಲಾಖೆ ಎಚ್ಚರಿಸಿದೆ.

ಇದು ಕ್ರಮೇಣ ತೀವ್ರಗೊಂಡು ಉತ್ತರ-ವಾಯವ್ಯ ಗುಜರಾತ್ ಮತ್ತು ನೆರೆಯ ಪಾಕಿಸ್ತಾನ ತೀರದತ್ತ ಸಾಗಲಿದೆ. ಇದೇ 18ರ ಸಂಜೆ ವೇಳೆಗೆ ಚಂಡಮಾರುತವು ಗುಜರಾತ್ ತೀರಕ್ಕೆ ಅಪ್ಪಳಿಸುವ ಸಾಧ್ಯತೆ ಇದೆ.

ಈ ಚಂಡಮಾರುತಕ್ಕೆ 'ತೌಕ್ತೆ' ಎಂದು ಹೆಸರಿಸಲಾಗಿದೆ. ಇದು ಮ್ಯಾನ್ಮಾರ ಪದವಾಗಿದ್ದು, 'ಹಲ್ಲಿ' ಎಂದರ್ಥ. ಇದು ಭಾರತೀಯ ಕರಾವಳಿಯುದ್ದಕ್ಕೂ ಪ್ರವೇಶಿಸುತ್ತಿರುವ ಈ ವರ್ಷದ ಮೊದಲ ಚಂಡಮಾರುತವಾಗಲಿದೆ.

'ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆ ರದ್ದು: ಇನ್ನೂ ನಿರ್ಧಾರ ಇಲ್ಲ'

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನೂ ರದ್ದುಪಡಿಸಬೇಕು ಎಂದು ಕೆಲವು ಪೋಷಕರು ಒತ್ತಾಯಿಸತೊಡಗಿದ್ದು, ಪರೀಕ್ಷೆ ರದ್ದುಪಡಿಸುವ ನಿಟ್ಟಿನಲ್ಲಿ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಮಂಡಳಿ ಸ್ಪಷ್ಟಪಡಿಸಿದೆ.



'ಪರೀಕ್ಷೆ ರದ್ದುಪಡಿಸುವಂತಹ ನಿರ್ಧಾರಕ್ಕೆ ಬರಲಾಗಿಲ್ಲ. ಯಾವುದೇ ನಿರ್ಧಾರ ಕೈಗೊಂಡರೂ ಅದನ್ನು ಅಧಿಕೃತವಾಗಿ ಸಾರ್ವಜನಿಕರಿಗೆ ತಿಳಿಸಲಾಗುವುದು. ಊಹಾಪೋಹಗಳಿಗೆ ಕಿವಿಗೊಡಬಾರದು' ಎಂದು ಸಿಬಿಎಸ್‌ಇಯ ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ಇಲ್ಲಿ ತಿಳಿಸಿದರು.

ಕೋವಿಡ್ ಪಿಡುಗು ವ್ಯಾಪಿಸಿದ ಕಾರಣ ಏಪ್ರಿಲ್ 14ರಂದು 10ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಿ ಆದೇಶ ಹೊರಡಿಸಲಾಗಿತ್ತು ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಮುಂದೂಡಲಾಗಿತ್ತು. 'ಜೂನ್ 1ರ ಬಳಿಕ ಪರಿಸ್ಥಿತಿಗಳ ಅವಲೋಕನ ನಡೆಸಲಾಗುವುದು. ಪರೀಕ್ಷೆ ನಡೆಯುವುದಕ್ಕೆ 15 ದಿನ ಮುಂಚಿತವಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗುವುದು' ಎಂದು ಆ ದಿನ ತಿಳಿಸಲಾಗಿತ್ತು.

ಪ್ರತಿ ಡೋಸ್‌ಗೆ ₹995: ಉತ್ಪಾದನೆಗೆ ಡಾ.ರೆಡ್ಡೀಸ್ ಲ್ಯಾಬೊರೇಟರೀಸ್ ಚಾಲನೆ

‘ಸ್ಪುಟ್ನಿಕ್ ವಿ’: 3.6 ಕೋಟಿ ಡೋಸ್ ಶೀಘ್ರ ಲಭ್ಯ

ಪ್ರಜಾವಾಣಿ ವಾರ್ತೆ



ಸ್ಪುಟ್ನಿಕ್ ವಿ ಲಸಿಕೆ

ಹೈದರಾಬಾದ್: ರಷ್ಯಾ ಅಭಿವೃದ್ಧಿಪಡಿಸಿರುವ ಕೋವಿಡ್–19 ವಿರುದ್ಧದ ಲಸಿಕೆ ‘ಸ್ಪುಟ್ನಿಕ್ ವಿ’ ಪ್ರತಿ ಡೋಸ್‌ಗೆ ₹995 ನಿಗದಿಪಡಿಸಲಾಗಿದ್ದು, ಮುಂದಿನ ಕೆಲ ತಿಂಗಳಲ್ಲಿ 3.6 ಕೋಟಿ ಡೋಸ್‌ಗಳು ಲಭ್ಯವಾಗುವ ನಿರೀಕ್ಷೆ ಇದೆ.

ಲಸಿಕೆಗೆ ₹948 ಮತ್ತು ಶೇಕಡ 5ರಷ್ಟು ಜಿಎಸ್‌ಟಿ ನಿಗದಿಪಡಿಸಲಾಗಿದೆ. ಇದರಿಂದಾಗಿ ₹995 ದರ ನಿಗದಿಯಾಗಿದೆ. ಮುಂದಿನ ದಿನಗಳಲ್ಲಿ ಈ ದರ ಇನ್ನೂ ಕಡಿಮೆಯಾಗಬಹುದು ಎಂದು ಈ ಲಸಿಕೆಯನ್ನು ಭಾರತದಲ್ಲಿ ತಯಾರಿಸುತ್ತಿರುವ ಡಾ.ರೆಡ್ಡೀಸ್ ಲ್ಯಾಬೊರೇಟರೀಸ್ ತಿಳಿಸಿದೆ.

‘ಸ್ಪುಟ್ನಿಕ್ ವಿ’ ಲಸಿಕೆಯ ಮೊದಲ ಡೋಸ್ ಅನ್ನು ಶುಕ್ರವಾರ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ದೀಪಕ್ ಸಪ್ರಾ ಅವರಿಗೆ ಹಾಕುವ ಮೂಲಕ ಚಾಲನೆ ನೀಡಲಾಯಿತು.

‘ಮೇ 1ರಂದು ಮೊದಲ ಹಂತದ ಭಾಗವಾಗಿ ರಷ್ಯಾದ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಫಂಡ್ (ಆರ್‌ಡಿಐಎಫ್) ವತಿಯಿಂದ 1.5 ಲಕ್ಷ ಡೋಸ್‌ಗಳನ್ನು ಸ್ವೀಕರಿಸಲಾಗಿದೆ. ಕೇಂದ್ರೀಯ ಔಷಧ ಪ್ರಯೋಗಾಲಯವು ಇದಕ್ಕೆ ಅನುಮೋದನೆ ನೀಡಿದೆ’ ಎಂದು ಡಾ. ರೆಡ್ಡೀಸ್ ಲ್ಯಾಬೊರೇಟರೀಸ್‌ನ ಸಿಇಒ ಎಂ.ವಿ. ರಮನ್ ತಿಳಿಸಿದ್ದಾರೆ.

‘ಆಮದು ದರದ ಆಧಾರದ ಮೇಲೆ ಲಸಿಕೆಗೆ ದರ ನಿಗದಿಪಡಿಸಲಾಗಿದೆ. ವಿವಿಧ ರಾಜ್ಯಗಳ ಜತೆ ಕಂಪನಿ ಚರ್ಚೆ ನಡೆಸುತ್ತಿದೆ. ಆರ್‌ಡಿಐಎಫ್ ಜತೆಯೂ ಸಮಾಲೋಚನೆ ನಡೆಯುತ್ತಿದೆ. ಮುಂದಿನ ಕೆಲ ತಿಂಗಳಲ್ಲಿ 3.6 ಕೋಟಿ ಡೋಸ್‌ಗಳು ಆರ್‌ಡಿಐಎಫ್‌ನಿಂದ ಲಭ್ಯವಾಗುವ ನಿರೀಕ್ಷೆ ಇದೆ’ ಎಂದಿದ್ದಾರೆ.

‘ಸ್ಥಳೀಯವಾಗಿ ಉತ್ಪಾದನೆ ಆರಂಭವಾದರೆ ದರಗಳು ಕಡಿಮೆಯಾಗಬಹುದು. ಈ ಲಸಿಕೆಯನ್ನು ಉತ್ಪಾದಿಸಲು ಆರ್‌ಡಿಐಎಫ್ ಭಾರತದ ಆರು ಔಷಧ ಕಂಪನಿಗಳ ಜತೆ ಒಪ್ಪಂದ ಮಾಡಿಕೊಂಡಿದೆ’ ಎಂದು ಅವರು ತಿಳಿಸಿದ್ದಾರೆ.

‘ಜೂನ್ ಮಧ್ಯದ ವೇಳೆಗೆ ಲಸಿಕೆ ಮಾರಾಟಕ್ಕೆ ಲಭ್ಯವಾಗಬಹುದು. ಲಸಿಕೆ ಪೂರೈಕೆ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜತೆಯೂ ಚರ್ಚೆ ನಡೆದಿದೆ’ ಎಂದು ಅವರು ತಿಳಿಸಿದ್ದಾರೆ.

‘ಆರಂಭದಲ್ಲಿ 35 ನಗರಗಳಲ್ಲಿ ಲಸಿಕೆ ಲಭ್ಯವಾಗಲಿದೆ. ಸ್ಪುಟ್ನಿಕ್ ವಿ ಲಸಿಕೆಯನ್ನು ಮೈನಸ್ 18 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ಸಂಗ್ರಹಿಸಿಡಬೇಕಾಗಿರುವುದರಿಂದ ಸಮರ್ಪಕ ಸೌಲಭ್ಯಗಳನ್ನು ಕಲ್ಪಿಸುವುದು ಸಹ ಅಗತ್ಯವಾಗಿದೆ’ ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ದೀಪಕ್ ಸಪ್ರಾ ತಿಳಿಸಿದ್ದಾರೆ.

ಈ ಲಸಿಕೆಯ ಎರಡು ಡೋಸ್‌ಗಳು ಕೋವಿಡ್–19 ವಿರುದ್ಧ ಶೇ 91.6ರಷ್ಟು ಪರಿಣಾಮಕಾರಿ ಎಂದು ವೈಜ್ಞಾನಿಕ ನಿಯತಕಾಲಿಕೆ ‘ದಿ ಲ್ಯಾನ್ಸೆಟ್’ ವರದಿ ಮಾಡಿದೆ.

ದೇಶದಲ್ಲಿ ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಲಸಿಕೆಗಳ ಕೊರತೆ ಕಂಡು ಬಂದಿದ್ದರಿಂದ ‘ಸ್ಪುಟ್ನಿಕ್ ವಿ’ ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಬಳಕೆ ಮಾಡಲು ಭಾರತೀಯ ಔಷಧ ನಿಯಂತ್ರಣ ನಿರ್ದೇಶನಾಲಯವು (ಡಿಸಿಜಿಐ) ಏಪ್ರಿಲ್‌ನಲ್ಲಿ ಅನುಮೋದನೆ ನೀಡಿತ್ತು. ಭಾರತಕ್ಕೆ 2.50 ಕೋಟಿ ಡೋಸ್‌ಗಳನ್ನು ಕಳುಹಿಸುವಂತೆ ಡಾ. ರೆಡ್ಡೀಸ್ ಲ್ಯಾಬೊರೇಟರಿಸ್, ರಷ್ಯಾದ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಫಂಡ್ (ಆರ್‌ಡಿಐಎಫ್) ಒಪ್ಪಂದ ಮಾಡಿಕೊಂಡಿದೆ. ಒಪ್ಪಂದದ ಅನ್ವಯ 1600 ಸ್ವಯಂಸೇವಕರ ಮೇಲೆ ಎರಡು ಮತ್ತು ಮೂರನೇ ಹಂತದ ಸ್ಪುಟ್ನಿಕ್–ವಿ ಲಸಿಕೆಯ ಪ್ರಯೋಗಗಳನ್ನು 2020ರ ಸೆಪ್ಟೆಂಬರ್‌ನಲ್ಲಿ ನಡೆಸಿತ್ತು.

ಶೇಕಡ 80ರಷ್ಟು ವೃದ್ಧರಿಗೆ ಆರೋಗ್ಯದ ಆತಂಕ

ನವದೆಹಲಿ: ಶೇ. 80ರಷ್ಟು ವೃದ್ಧರು ತಮ್ಮ ಆರೋಗ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿರುವುದು ಸಮೀಕ್ಷೆಯಿಂದ ತಿಳಿದು ಬಂದಿದೆ.

ಸರ್ಕಾರೇತರ ಸಂಸ್ಥೆ ‘ಏಜ್‌ವೆಲ್ ಫೌಂಡೇಷನ್’ ಈ ಬಗ್ಗೆ ಸಮೀಕ್ಷೆ ನಡೆಸಿದೆ. ಸಹಾಯವಾಣಿ ಮೂಲಕ ಸುಮಾರು 5 ಸಾವಿರ ಮಂದಿಯ ಜತೆ ಸಮಾಲೋಚನೆ ನಡೆಸಿ ಈ ಬಗ್ಗೆ ವಿಶ್ಲೇಷಣೆ ವರದಿಯನ್ನು ಅದು ಸಿದ್ಧಪಡಿಸಿದೆ.

ಕಳೆದ ಒಂದು ತಿಂಗಳಲ್ಲಿ ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಐವರಲ್ಲಿ ನಾಲ್ವರು ಹಿರಿಯ ಜೀವಿಗಳು ತಮ್ಮ ಆರೋಗ್ಯದ ಬಗ್ಗೆ ಆತಂಕವನ್ನು ಬಹಿರಂಗಪಡಿಸಿದ್ದಾರೆ.

ಶೇ 70.2ರಷ್ಟು ವೃದ್ಧರು ನಿದ್ರೆಯ ಕೊರತೆಯಿಂದ ಬಳಲುತ್ತಿದ್ದಾರೆ. ಶೇಕಡ 63ರಷ್ಟು ಮಂದಿ ಒಂಟಿತನ ಮತ್ತು ಪ್ರತ್ಯೇಕತೆಯಿಂದ ಖಿನ್ನತೆಗೆ ಒಳಗಾಗಿದ್ದಾರೆ. ಜತೆಗೆ, ಬದಲಾದ ಜೀವನ ಶೈಲಿ, ನಿರ್ಬಂಧಗಳು ಮತ್ತು ಇತರ ಕಾರಣಗಳಿಂದಲೂ ಅನಾರೋಗ್ಯಕ್ಕೆ ಒಳಗಾಗಿರುವುದಾಗಿ ಶೇಕಡ 53ರಷ್ಟು ಮಂದಿ ಹೇಳಿದ್ದಾರೆ.

‘ಕೋವಿಡ್–19ನಿಂದಾಗಿ ಬಹುತೇಕ ಹಿರಿಯ ಜೀವಿಗಳ ಶಾಂತಿ, ನೆಮ್ಮದಿ ಹಾಳಾಗಿದೆ. ಕೌನ್ಸೆಲಿಂಗ್ ರೂಪದಲ್ಲಿ ಅವರಿಗೆ ನೆರವು ಅಗತ್ಯವಾಗಿದೆ. ಆರೋಗ್ಯ ರಕ್ಷಣೆಯ ಜತೆಗೆ ಭಾವನಾತ್ಮಕ ಬೆಂಬಲವೂ ಅವರಿಗೆ ಅಗತ್ಯವಾಗಿದೆ’ ಎಂದು ಏಜ್‌ವೆಲ್ ಫೌಂಡೇಷನ್‌ನ ಹಿಮಾನ್ಶು ರಥ್ ತಿಳಿಸಿದ್ದಾರೆ.

ಕೋವಿಡ್: ಚೇತರಿಕೆ ಪ್ರಮಾಣದಲ್ಲಿ ಹೆಚ್ಚಳ

ನವದೆಹಲಿ (ಪಿಟಿಐ): ‘ದೇಶದಲ್ಲಿ ಕೋವಿಡ್–19 ಹೊಸ ಪ್ರಕರಣಗಳಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಿದೆ. ದೇಶದಲ್ಲಿ ಇದುವರೆಗೆ 2 ಕೋಟಿಗಿಂತಲೂ ಹೆಚ್ಚು ಮಂದಿ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ಕಳೆದ ನಾಲ್ಕು ದಿನಗಳಲ್ಲಿ ಒಟ್ಟು ಮೂರನೇ ಬಾರಿ ಹೊಸ ಪ್ರಕರಣಗಳಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿದೆ. ಭಾರತದಲ್ಲಿ ಇದುವರೆಗೆ ಒಟ್ಟು 2,00,79,599 ಮಂದಿ ಗುಣಮುಖರಾಗಿದ್ದಾರೆ. ದೇಶದಲ್ಲಿ ಒಂದೇ ದಿನ 3,43,144 ಹೊಸ ಪ್ರಕರಣಗಳು ವರದಿಯಾಗಿವೆ. ನಿತ್ಯ 3,44,776 ಮಂದಿ ಚೇತರಿಸಿಕೊಳ್ಳುತ್ತಿದ್ದು, ಹತ್ತು ರಾಜ್ಯಗಳಲ್ಲಿ ಚೇತರಿಕೆಯ ಪ್ರಮಾಣ ಶೇ 71.16ಕ್ಕೆ ಏರಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಮಹಾರಾಷ್ಟ್ರದಲ್ಲಿ ಒಂದೇ ದಿನ 42,582 ಪ್ರಕರಣಗಳು, ಕೇರಳದಲ್ಲಿ 39,955 ಹಾಗೂ ಕರ್ನಾಟಕದಲ್ಲಿ 35,297 ಹೊಸ ಪ್ರಕರಣಗಳು ಪತ್ತೆಯಾಗಿವೆ. ದೇಶದಲ್ಲಿ ಇದುವರೆಗೆ 31 ಕೋಟಿ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಕೋವಿಡ್ ಪ್ರಕರಣಗಳ ಪ್ರಮಾಣ ಶೇ 7.72ರಷ್ಟು ಹೆಚ್ಚಾಗಿದೆ. ಆದರೆ, ನಿತ್ಯದ ವರದಿಯಾಗುವ ಹೊಸ ಪ್ರಕರಣಗಳಲ್ಲಿ ಶೇ 20.08ರಷ್ಟು ಪ್ರಮಾಣ ಇಳಿಕೆಯಾಗಿದೆಎಂದು ಸಚಿವಾಲಯವು ತಿಳಿಸಿದೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 37,04,893ಕ್ಕೆ ಇಳಿಕೆಯಾಗಿದ್ದು, ಕಳೆದ 24 ಗಂಟೆಗಳ ಅವಧಿಯಲ್ಲಿ ಸಕ್ರಿಯ ಪ್ರಕರಣಗಳಲ್ಲಿ 5,632 ಪ್ರಕರಣಗಳಷ್ಟು ಕುಸಿತವಾಗಿದೆ. ಅಂತೆಯೇ ಮರಣದ ಪ್ರಮಾಣ ಶೇ 1.09ರಷ್ಟಿದೆ. 24ಗಂಟೆಗಳ ಅವಧಯಲ್ಲಿ ಒಟ್ಟು 4 ಸಾವಿರ ಮಂದಿ ಸಾವಿಗೀಡಾಗಿದ್ದಾರೆ. ಹತ್ತು ರಾಜ್ಯಗಳಲ್ಲಿ ಮರಣದ ಪ್ರಮಾಣ ಶೇ 72.70ರಷ್ಟು ಇದ್ದುಲ, ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಅಂದರೆ 850 ಮಂದಿ ಸಾವಿಗೀಡಾಗಿದ್ದಾರೆ. ಕರ್ನಾಟಕದಲ್ಲಿ 344 ಮಂದಿ ಸಾವಿಗೀಡಾಗಿದ್ದಾರೆ.

ಲಸಿಕೆ ಪೂರೈಕೆಗೆ ಸರ್ಕಾರ ಎಲ್ಲ ಯತ್ನ ನಡೆಸುತ್ತಿದೆ: ಪ್ರಧಾನಿ ಮೋದಿ


ನರೇಂದ್ರ ಮೋದಿ

ನವದೆಹಲಿ: ಜನರಿಗೆ ಕೋವಿಡ್ ತಡೆ ಲಸಿಕೆಯನ್ನು ಅತ್ಯಂತ ತ್ವರಿತವಾಗಿ ಹಾಕಿಸಲು ಸರ್ಕಾ ರವು ಎಲ್ಲ ಪ್ರಯತ್ನಗಳನ್ನೂ ನಡೆಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಲಸಿಕೆ ಕೊರತೆಯಿಂದಾಗಿ ದೇಶದೆಲ್ಲೆಡೆ ಲಸಿಕೆ ಅಭಿಯಾನಕ್ಕೆ ಹಿನ್ನಡೆಯಾಗಿರುವ ಸಂದರ್ಭದಲ್ಲಿ ಅವರು ಹೀಗೆ ಹೇಳಿದ್ದಾರೆ.

ಅವರು ರೈತರನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಶುಕ್ರವಾರ ಮಾತನಾಡಿದರು.

‘ನೂರು ವರ್ಷಗಳ ಬಳಿಕ ಸಾಂಕ್ರಾಮಿಕವು ಜಗತ್ತನ್ನು ಪರೀಕ್ಷೆಗೆ ಒಡ್ಡಿದೆ. ಅಗೋಚರ ಶತ್ರು ನಮ್ಮ ಮುಂದೆ ಇದೆ. ಪ್ರೀತಿಪಾತ್ರರಾದ ಹಲವ ರನ್ನು ಈ ಶತ್ರುವಿನಿಂದಾಗಿ ನಾವು ಕಳೆದು ಕೊಂಡಿದ್ದೇವೆ. ನೀವು ಅನುಭವಿಸಿದ ನೋವು ನಿಮ್ಮ ಪ್ರಧಾನ ಸೇವಕನಾದ ನನಗೆ ಅರ್ಥವಾಗುತ್ತದೆ’ ಎಂದು ಪ್ರಧಾನಿ ಹೇಳಿದ್ದಾರೆ.


ಕೋವಿಡ್‌ನಿಂದ ರಕ್ಷಣೆ ಪಡೆಯಲು ಇರುವ ಅತ್ಯುತ್ತಮ ಮಾರ್ಗ ಲಸಿಕೆ ಹಾಕಿಸಿಕೊಳ್ಳುವುದೇ ಆಗಿದೆ ಎಂದು ಹೇಳಿದ ಅವರು, ತಮ್ಮ ಸರದಿ ಬಂದಾಗ ಜನರು ಲಸಿಕೆ ಹಾಕಿಸಿಕೊಳ್ಳಬೇಕು ಎಂದುಕೋರಿದರು.

ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಜನರಿಗೆ ಕೋವಿಡ್ ಲಸಿಕೆಗಳು ಲಭ್ಯವಾಗುವುದನ್ನು ಖಾತರಿಪಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಯತ್ನಿಸುತ್ತಿವೆ ಎಂದು ಅವರು ಹೇಳಿದ್ದಾರೆ. ಆದರೆ, ಲಸಿಕೆಗಳ ಕೊರತೆಯಿಂದಾಗಿ ಹಲವು ರಾಜ್ಯಗಳು ಲಸಿಕೆ ನೀಡಿಕೆಯನ್ನು ಮುಂದೂಡಿವೆ ಮತ್ತು ಲಸಿಕೆ ಖರೀದಿಗಾಗಿ ಜಾಗತಿಕ ಟೆಂಡರ್ ಮೊರೆಹೋಗಿವೆ.

ಗ್ರಾಮೀಣ ಪ್ರದೇಶಗಳಲ್ಲಿಯೂ ಸೋಂಕು ತೀವ್ರವಾಗಿ ಹರಡುತ್ತಿರುವುದರ ಬಗ್ಗೆ ಮೋದಿ ಅವರು ಜನರಿಗೆ ಎಚ್ಚರಿಕೆ ನೀಡಿದರು.

ಪಂಚಾಯಿತಿ ರಾಜ್ ಸಂಸ್ಥೆಗಳು ತಮ್ಮ ಗ್ರಾಮಗಳ ವ್ಯಾಪ್ತಿಯಲ್ಲಿ ನೈರ್ಮಲ್ಯ ಕಾಯ್ದುಕೊಳ್ಳಬೇಕು ಮತ್ತು ಸೋಂಕಿನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

‘ಲಸಿಕೆ: ಟೀಕೆ ಮಾಡಿದವರಿಂದಲೇ ಈಗ ಕಣ್ಣೀರು’



ಮಂಗಳೂರು: ‘ಆರಂಭದಲ್ಲಿ ಬಿಜೆಪಿಯ ಲಸಿಕೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡಿದವರೇ ಇಂದು ಲಸಿಕೆ ಸಿಗುತ್ತಿಲ್ಲ ಎಂದು ಕಣ್ಣೀರು ಹಾಕುತ್ತಿದ್ದಾರೆ. ಜನರ ದಾರಿ ತಪ್ಪಿಸುವ ಜತೆಗೆ, ಪ್ರಾಣದ ಜೊತೆ ಚೆಲ್ಲಾಟ ಆಡುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ಸಂಸದ ನಳಿನ್‌ಕುಮಾರ್ ಕಟೀಲ್ ಟೀಕಿಸಿದರು.

ಕೋವಿಡ್‌ನಿಂದ ಹಲವರು ಮೃತರಾಗಲು ಇದೇ ಪಕ್ಷಗಳು ಕಾರಣವಾಗಿವೆ. ಆಗ ಜನರ ದಾರಿ ತಪ್ಪಿಸಿದ ಕಾರಣಕ್ಕೆ ಜನರು ಲಸಿಕೆ ತೆಗೆದುಕೊಂಡಿರಲಿಲ್ಲ ಎಂದರು.


ರಾಜ್ಯದ ಸೆಮಿ ಲಾಕ್‌ಡೌನ್ ವಿಸ್ತರಣೆ ಕುರಿತು ಯಾವುದೇ ಸಲಹೆ ನೀಡಿಲ್ಲ. ಬೆಂಗಳೂರು ಸೇರಿ ಪ್ರಮುಖ ಐದು ಜಿಲ್ಲೆಗಳಲ್ಲಿ ಲಾಕ್‌ಡೌನ್ ನಿಯಮಗಳನ್ನು ಇನ್ನಷ್ಟು ಕಟ್ಟುನಿಟ್ಟು ಮಾಡಿದರೆ ಉತ್ತಮ. ಈ ಅಂಶವನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ. ಕೋವಿಡ್ ರೋಗಿಗಳಿಗೆ ಆಂಬುಲೆನ್ಸ್ ಸೇವೆ ಉಚಿತವಾಗಿ ಸಿಗಲಿ ಎಂಬ ಸಲಹೆ ನೀಡಿದ್ದೇನೆ’ ಎಂದರು.

ಕೋವಿಡ್: 41,779 ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಾಲ್ಕು ದಿನಗಳಿಂದ ಇಳಿಕೆ ಕಂಡಿದ್ದ ಕೋವಿಡ್ ಪೀಡಿತರ ಸಂಖ್ಯೆ ಶುಕ್ರವಾರ ಏರಿಕೆಯಾಗಿದೆ. 24 ಗಂಟೆಗಳ ಅವಧಿಯಲ್ಲಿ 41,779 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನ ಅವಧಿಯಲ್ಲಿ 1.27 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 32.86ರಷ್ಟಿದೆ. 11 ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, 14,316 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆಯಾಗಿದೆ. ಸದ್ಯ 5.98 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.



ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 121 ಮಂದಿ ಸೇರಿದಂತೆ ರಾಜ್ಯದಲ್ಲಿ 373 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಬಳ್ಳಾರಿಯಲ್ಲಿ 26 ಮಂದಿ, ಕಲಬುರ್ಗಿಯಲ್ಲಿ 21 ಮಂದಿ, ಹಾಸನದಲ್ಲಿ 20 ಮಂದಿ, ತುಮಕೂರಿನಲ್ಲಿ 19 ಮಂದಿ, ಉತ್ತರ ಕನ್ನಡದಲ್ಲಿ 15 ಮಂದಿ, ಬಾಗಲಕೋಟೆಯಲ್ಲಿ 14 ಮಂದಿ, ಮಂಡ್ಯ ಹಾಗೂ ರಾಮನಗರದಲ್ಲಿ ತಲಾ 13 ಮಂದಿ, ಬೆಂಗಳೂರು ಗ್ರಾಮಾಂತರ ಹಾಗೂ ಮೈಸೂರಿನಲ್ಲಿ ತಲಾ 12 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 21,085ಕ್ಕೆ ಏರಿಕೆಯಾಗಿದೆ.

ತುಮಕೂರು (2,668), ಬಳ್ಳಾರಿ (2,421), ಮೈಸೂರು (2,340), ಬೆಳಗಾವಿ (1,592), ಮಂಡ್ಯ (1,385), ಹಾಸನ (1,339), ಉಡುಪಿ (1,219), ದಕ್ಷಿಣ ಕನ್ನಡ (1,215) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಸೋಂಕಿತರಲ್ಲಿ 35,879 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖ ಹೊಂದಿದವರ ಸಂಖ್ಯೆ 15.10 ಲಕ್ಷ ದಾಟಿದೆ.

ಟಿವಿಎಸ್‌ನಿಂದ 135 ಆಮ್ಲಜನಕ ಕಾನ್ಸೆಂಟ್ರೇಟರ್ ಕೊಡುಗೆ

ಮೈಸೂರು: ಟಿವಿಎಸ್ ಮೋಟಾರ್ ಕಂಪನಿಯ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ ವತಿಯಿಂದ, ಮೈಸೂರು ಜಿಲ್ಲಾಡಳಿತಕ್ಕೆ 135 ಆಮ್ಲಜನಕ ಕಾನ್ಸೆಂಟ್ರೇಟರ್ ಯಂತ್ರಗಳನ್ನು ಕೊಡುಗೆ ನೀಡಿದೆ.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಅಡಿಯಲ್ಲಿ ಇವುಗಳನ್ನು ನೀಡಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರಿಗೆ ಶುಕ್ರವಾರ ಹಸ್ತಾಂತರಿಸಲಾಯಿತು.

ಗೋವಾ: ಮತ್ತೆ 13 ಕೋವಿಡ್ ಪೀಡಿತರ ಸಾವು

ಪಣಜಿ (ಪಿಟಿಐ): ಇಲ್ಲಿನ ಗೋವಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಇನ್ನೂ 13 ಮಂದಿ ಕೋವಿಡ್ ಪೀಡಿತರು ಶುಕ್ರವಾರ ಬೆಳಗಿನ ಜಾವ ಮೃತಪಟ್ಟಿದ್ದಾರೆ. ಕಳೆದ ನಾಲ್ಕು ದಿನದಲ್ಲಿ ಮೃತರಾದವರ ಸಂಖ್ಯೆ 75ಕ್ಕೆ ಏರಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಸಂಭವಿಸಿದ ಸಾವುಗಳ ಕುರಿತ ಅರ್ಜಿಗಳ ವಿಚಾರಣೆಯು ಬಾಂಬೆ ಹೈಕೋರ್ಟ್‌ನ ಗೋವಾ ಪೀಠದ ಎದುರು ನಡೆದಿರುವಂತೆಯೇ ಇತ್ತ ಸಾವಿನ ಸರಣಿ ಮುಂದುವರಿದಿದೆ. ಆಸ್ಪತ್ರೆಯಲ್ಲಿ ಸಂಭವಿಸಿದ ಈಚಿನ ಸಾವುಗಳಿಗೆ ಸರ್ಕಾರ ನಿಖರ ಕಾರಣವನ್ನು ತಿಳಿಸಿಲ್ಲ. ಆದರೆ, ಹೈಕೋರ್ಟ್‌ಗೆ ನೀಡಿರುವ ಮಾಹಿತಿಯಲ್ಲಿ ಆಸ್ಪತ್ರೆಗೆ ಆಮ್ಲಜನಕ ಪೂರೈಕೆ ವ್ಯವಸ್ಥೆಯಲ್ಲಿ ಸಮಸ್ಯೆಗಳಿವೆ ಎಂದು ಹೇಳಿದೆ.

ಶಿಲೀಂಧ್ರ ಸೋಂಕಿಗೂ ಸಿಗದ ಔಷಧ

ಒಂದನೇ ಪುಟದಿಂದ

'ಇದು ಜೀವ ಉಳಿಸುವ ಔಷಧ. ವ್ಯಕ್ತಿಯೊಬ್ಬನಿಗೆ ಒಂದು ದಿನಕ್ಕೆ ನಾಲ್ಕು ಸೀಸೆಗಳು ಬೇಕಾಗುತ್ತವೆ. ಇದನ್ನು ಕನಿಷ್ಠ 15 ದಿನಗಳು ನೀಡಬೇಕಾಗುತ್ತದೆ. ಒಂದು ಸೀಸೆಗೆ ₹ 5 ಸಾವಿರದಿಂದ ₹ 7 ಸಾವಿರ ದರ ಇದೆ’ ಎಂದು ವಿವರಿಸಿದರು.

‘ಕೆಲವು ಕಂಪನಿಗಳು ಮಾತ್ರ ಈ ಔಷಧವನ್ನು ಉತ್ಪಾದನೆ ಮಾಡುತ್ತಿವೆ. ಹೊರ ರಾಜ್ಯಗಳಿಂದ ಬರಬೇಕಿದೆ. ಈ ಔಷಧವನ್ನು ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಕೂಡ ಮನವಿ ಸಲ್ಲಿಸಲಾಗಿದೆ. ಶಿಲೀಂಧ್ರ ಸೊಂಕು ಹೆಚ್ಚಿನ ಜನರಿಗೆ ಇಲ್ಲಿ ಕಾಣಿಸಿಕೊಂಡಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಶೇ 60ರಷ್ಟು ಸಾವು ಸಂಭವ ಸಾಧ್ಯತೆ’: ‘ಶಿಲೀಂಧ್ರ ಸೋಂಕು ಮಾರಣಾಂತಿಕವಾಗಿದೆ. ಸಕಾಲಕ್ಕೆ ಚಿಕಿತ್ಸೆ ನೀಡದಿದ್ದಲ್ಲಿ ಶೇ 60ರಷ್ಟು ಸಾವಿನ ಸಾಧ್ಯತೆಯಿದೆ. ತುರ್ತಾಗಿ ಔಷಧ ಒದಗಿಸಬೇಕಾಗುತ್ತದೆ. ಕೆಲವು ದಿನಗಳು ನಿಯಮಿತವಾಗಿ ಈ ಔಷಧ ಸೇವನೆ ಮುಂದುವರಿಸಬೇಕು. ಆಗಷ್ಟೇ ವ್ಯಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯ’ ಎಂದು ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಕ್ರಿಟಿಕಲ್ ಕೇರ್ ವಿಭಾಗದ ಹಿರಿಯ ಸಲಹೆಗಾರ ಡಾ. ಪ್ರದೀಪ್ ರಂಗಪ್ಪ ತಿಳಿಸಿದರು.



‘ಮಹಾರಾಷ್ಟ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಔಷಧವನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ. ಒಬ್ಬ ರೋಗಿಗೆ ಸುಮಾರು 60 ಸೀಸೆಗಳು ಬೇಕಾಗುತ್ತವೆ. ಹಾಗಾಗಿ, ದೊಡ್ಡ ಪ್ರಮಾಣದಲ್ಲಿ ರಾಜ್ಯಕ್ಕೆ ಇದರ ಅಗತ್ಯವಿದೆ. ಮೂರರಿಂದ ನಾಲ್ಕು ದಿನಗಳ ಅವಧಿಯಲ್ಲಿ ಪೂರೈಕೆಯಾಗದಿದ್ದಲ್ಲಿ ರೋಗಿಗಳಿಗೆ ಸಮಸ್ಯೆಯಾಗಲಿದೆ’ ಎಂದು ಪೀಪಲ್ಸ್ ಟ್ರೀ ಆಸ್ಪತ್ರೆಯ ಡಾ. ರವಿ ಸಚ್ಚಿದಾನಂದ ಅವರು ವಿವರಿಸಿದರು.

‘ರೋಗಿಗಳ ಅಗತ್ಯ ಅರಿತು ನೀಡಬೇಕು’: ‘ಲಿಪೋಸೋಮಲ್ ಆಂಫೊಟೆರಿಸಿನ್ ಬಿ’ ಔಷಧದ ಬಳಕೆ ಇಷ್ಟು ದಿನ ಕಡಿಮೆಯಿತ್ತು. ಹೀಗಾಗಿ, ಉತ್ಪಾದನೆ ಕೂಡ ಅಷ್ಟಾಗಿ ಆಗುತ್ತಿರಲಿಲ್ಲ. ಇದರಿಂದಾಗಿ ಕೊರತೆ ಉಂಟಾಗಿದೆ. ತುರ್ತಾಗಿ ಅಗತ್ಯ ಇರುವವರಿಗೆ ಮಾತ್ರ ನೀಡಬೇಕು. ‘ರೆಮ್‌ಡಿಸಿವಿರ್’ ಔಷಧವನ್ನು ಎಲ್ಲರಿಗೂ ನೀಡಿದ ಪರಿಣಾಮ ಕೊರತೆ ಗಂಭೀರ ಸ್ವರೂಪ ಪಡೆದುಕೊಂಡಿತು. ಈ ಔಷಧ ಕೂಡ ಅದೇ ರೀತಿ ಆಗುವ ಸಾಧ್ಯತೆಯಿದೆ. ಕೆಲವು ಆಸ್ಪತ್ರೆಗಳು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಂಡಲ್ಲಿ ಕೂಡ ಸಮಸ್ಯೆಯಾಗಲಿದೆ’ ಎಂದು ಕರ್ನಾಟಕ ಕೆಮಿಸ್ಟ್ ಆ್ಯಂಡ್ ಡ್ರಗಿಸ್ಟ್ ಅಸೋಸಿಯೇಷನ್‌ನ ಉಪಾಧ್ಯಕ್ಷ ದೇವಿದಾಸ್ ಪ್ರಭು ತಿಳಿಸಿದರು.

ಕೋವಿಡ್: ವೈದ್ಯಕೀಯ ಸಲಕರಣೆಗಳ ಬೆಲೆ ದುಪ್ಪಟ್ಟು

ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ರಾಜ್ಯದಲ್ಲಿ ಕೋವಿಡ್–19 ಸಕ್ರಿಯ ಪ್ರಕರಣಗಳು ಹೆಚ್ಚಾಗುತ್ತಲೇ ಸಾಗಿವೆ. ಚಿಕಿತ್ಸೆಗೆ ಬಳಸುವ ವೈದ್ಯಕೀಯ ಸಲಕರಣೆಗಳ ಬೇಡಿಕೆಯೂ ಹೆಚ್ಚಿದೆ. ಇದನ್ನೇ ಬಂಡವಾಳವಾಗಿಸಿಕೊಂಡಿರುವ ಕಂಪನಿ ಹಾಗೂ ಔಷಧ ಅಂಗಡಿಗಳವರು, ಅವುಗಳನ್ನು ಎರಡರಿಂದ ಮೂರು ಪಟ್ಟು ಹೆಚ್ಚಿನ ಬೆಲೆ ಮಾರಾಟ ಮಾಡುತ್ತಿದ್ದಾರೆ.

ಪಲ್ಸ್ ಆಕ್ಸಿಮೀಟರ್, ಸ್ಟೀಮ್ ಇನ್‌ಹೇಲರ್, ಥರ್ಮೋಮೀಟರ್ ಮುಂತಾದ ಬಹಳಷ್ಟು ಸಲಕರಣೆಗಳ ಮೇಲೆ ಕಂಪನಿ ಹೆಸರೂ ಇಲ್ಲ, ಬಾಕ್ಸ್‌ಗಳ ಮೇಲೆ ಎಂಆರ್‌ಪಿ ಯೂ ಇರುವುದಿಲ್ಲ. ಔಷಧ ಅಂಗಡಿಗಳವರು ನಿಗದಿಪಡಿಸಿದ್ದೇ ದರ ಎನ್ನುವಂತಾಗಿದೆ.

ಕೋವಿಡ್ ಬಾಧಿತ ಬಹಳಷ್ಟು ಮಂದಿ ಹೋಂ ಐಸೋಲೇಷನ್‌ನಲ್ಲಿರುತ್ತಿದ್ದಾರೆ. ಪಲ್ಸ್ ಆಕ್ಸಿಮೀಟರ್, ಥರ್ಮೋಮೀಟರ್ ತೆಗೆದುಕೊಳ್ಳುವಂತೆ ವೈದ್ಯರು ಸೂಚಿಸುತ್ತಿದ್ದಾರೆ. ಜೊತೆಗೆ ಸ್ಟೀಮ್ ತೆಗೆದುಕೊಂಡರೆ ಒಳ್ಳೆಯದೆಂಬ ಸಲಹೆಯನ್ನೂ ನೀಡುತ್ತಾರೆ. ಹಾಗಾಗಿ, ಅವುಗಳ ಬೇಡಿಕೆ ಹೆಚ್ಚಿದೆ.



ಪಲ್ಸ್ ಆಕ್ಸಿಮೀಟರ್

ಪ್ರಜಾವಾಣಿ ವಿಶೇಷ

ಫೆಬ್ರವರಿ ತಿಂಗಳಿನಲ್ಲಿ ₹500 ರಿಂದ ₹700ರವರೆಗೆ ದೊರೆಯುತ್ತಿದ್ದ ಪಲ್ಸ್ ಆಕ್ಸಿಮೀಟರ್ ಈಗ ₹1800 ರಿಂದ 2,500ಕ್ಕೆ ಮಾರಾಟ ಮಾಡಲಾಗುತ್ತಿದೆ. ಅದರಲ್ಲೂ ಮೇಡ್ ಇನ್ ಚೈನಾ ಹಾವಳಿ ಮಿತಿ ಮೀರಿದೆ. ಕೆಲವು ಆಕ್ಸಿಮೀಟರ್‌ಗಳ ಮೇಲೆ ಕಂಪನಿಯ ಹೆಸರು, ದರ ನಮೂದಿಸಿದ್ದರೆ, ಇನ್ನು ಕೆಲವುಗಳ ಮೇಲೆ ಕಂಪನಿಯ ಹೆಸರೂ ಇರುವುದಿಲ್ಲ, ದರವೂ ಇಲ್ಲ.

> **ಎಲೆಕ್ಟ್ರಾನಿಕ್ ಡಿವೈಸ್‌ಗಳಾಗಿದ್ದರಿಂದ ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು**
> **ದಯಾನಂದ,** ಔಷಧ ನಿಯಂತ್ರಕ, ಧಾರವಾಡ ವೃತ್ತ

₹70 ರಿಂದ ₹150ರವರೆಗೆ ಸಿಗುತ್ತಿದ್ದ ಥರ್ಮೋಮೀಟರ್ ಈಗ ₹120 ರಿಂದ 200ವರೆಗೆ ದೊರೆಯುತ್ತಿದೆ. ₹400 ರಿಂದ 700ರವರೆಗಿದ್ದ ಸ್ಟೀಮ್ ಇನ್‌ಹೇಲರ್ ಬೆಲೆಯು ₹600 ರಿಂದ ₹1000ವರೆಗೆ ಆಗಿದೆ. ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಜನಸಾಮಾನ್ಯರು ಕೊಳ್ಳಲು ಮುಂದಾಗದಿರುವುದರಿಂದ ಅವುಗಳ ಬೆಲೆ ಹೆಚ್ಚಳದಿಂದ ಬಚಾವಾಗಿದ್ದಾರೆ.

ಪಲ್ಸ್ ಆಕ್ಸಿಮೀಟರ್, ಸ್ಟೀಮ್ ಇನ್‌ಹೇಲರ್‌ಗಳು ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ ಡಿವೈಸ್‌ಗಳೆಂದು ಪರಿಗಣಿಸಲ್ಪಡುತ್ತವೆ. ಅವುಗಳನ್ನು ವೈದ್ಯಕೀಯ ಸಲಕರಣೆಗಳು ಎಂದು ಘೋಷಿಸಿದಾಗ ನಮ್ಮ ನಿಯಂತ್ರಣಕ್ಕೆ ಬರುತ್ತವೆ. ಪಲ್ಸ್ ಆಕ್ಸಿಮೀಟರ್ ಅನ್ನು ಇತ್ತೀಚೆಗೆ ವೈದ್ಯಕೀಯ ಸಲಕರಣೆ ಎಂದು ಘೋಷಿಸಲಾಗಿದೆ. ಇನ್ನು ಆದೇಶ ಪ್ರತಿ ಬಂದಿಲ್ಲ ಎನ್ನುತ್ತಾರೆ ಧಾರವಾಡ ವೃತ್ತ ಔಷಧ ನಿಯಂತ್ರಕ ದಯಾನಂದ.

ಕೋವಿಡ್‌ಗೆ ಸಂಬಂಧಿಸಿ ವೈದ್ಯಕೀಯ ಸಲಕರಣೆಗಳ ಬೆಲೆ ಹೆಚ್ಚಿರುವುದು ಬಡ ಹಾಗೂ ಮಧ್ಯಮ ವರ್ಗದವರಿಗೆ ಹೊರೆಯಾಗುತ್ತಿದೆ. ಬಹಳಷ್ಟು ಜನರಿಗೆ ಹೋಂ ಐಸೋಲೇಷನ್‌ನಲ್ಲಿರುವಂತೆ ತಿಳಿಸುತ್ತಿರುವುದರಿಂದ ಪ್ರತಿ ಮನೆಯವರೂ ಇವುಗಳನ್ನು ಖರೀದಿಸುವಂತಾಗಿದೆ. ಬೆಲೆ ನಿಯಂತ್ರಣಕ್ಕೆ ಸರ್ಕಾರ ಮುಂದಾಗಬೇಕು ಎಂಬುದು ಆಮ್ ಆದ್ಮಿ ಪಾರ್ಟಿ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ ನರಗುಂದ ಆಗ್ರಹ.

‘ಮೂರು ತಿಂಗಳ ಹಿಂದೆ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದೇವೆ. ಈಗ ತಯಾರಕರೇ ಬೆಲೆ ಹೆಚ್ಚಿಸಿದ್ದಾರೆ. ಹಾಗಾಗಿ, ನಾವೂ ಬೆಲೆ ಹೆಚ್ಚಿಸಿದ್ದೇವೆ. ಹೆಚ್ಚಿನ ಬೆಲೆ ನೀಡಿದರೂ ಸಿಗುತ್ತಿಲ್ಲ’ ಎನ್ನುತ್ತಾರೆ ಹೆಸರು ಬಹಿರಂಗ ಪಡಿಸಲು ಬಯಸದ ವ್ಯಾಪಾರಿಯೊಬ್ಬರು.

ಪೆಂಟಗನ್‌ನಿಂದ ಭಾರತಕ್ಕೆ 159 ಕಾನ್ಸಂಟ್ರೇಟರ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ರಕ್ಷಣಾ ಪಡೆಗಳು ಮುಂದಿನ ವಾರ 159 ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಭಾರತಕ್ಕೆ ರವಾನಿಸಲಿದ್ದು, ಸಿದ್ಧತೆ ಆರಂಭವಾಗಿದೆ.

‘ಟ್ರಾವಿಸ್ ವಾಯುನೆಲೆಯಿಂದ ವಾಣಿಜ್ಯ ವಿಮಾನವೊಂದರ ಮೂಲಕ ಈ ಕಾನ್ಸಂಟ್ರೇಟರ್‌ಗಳನ್ನು ಸೋಮವಾರ ಭಾರತಕ್ಕೆ ರವಾನಿಸಲಾಗುವುದು’ ಎಂದು ಪೆಂಟಗನ್‌ನ ಪತ್ರಿಕಾ ಕಾರ್ಯದರ್ಶಿ ಜಾನ್ ಕಿರ್ಬಿ ತಿಳಿಸಿದರು.

ಶಾಸಕರ ನಿಧಿಯ ₹ 100 ಕೋಟಿ ಲಸಿಕೆಗೆ: ಕಾಂಗ್ರೆಸ್

ಒಂದನೇ ಪುಟದಿಂದ

‘ಎಲ್ಲರಿಗೂ ಲಸಿಕೆ ನೀಡುವುದರಿಂದ ಮಾತ್ರ ಕೋವಿಡ್ ನಿಯಂತ್ರಣ ಸಾಧ್ಯ ಎಂದು ತಜ್ಞರು ಅಭಿಪ್ರಾಯ ನೀಡಿದ್ದಾರೆ. ಈಗಾಗಲೇ ದೇಶದ ಅರ್ಧದಷ್ಟು ಜನರಿಗೆ ಲಸಿಕೆ ನೀಡಿದ್ದರೆ, ಕೊರೊನಾ ವಿರುದ್ಧದ ಹೋರಾಟಕ್ಕೆ ಬಲ ಬಂದಿರುತ್ತಿತ್ತು. ರಾಜ್ಯಕ್ಕೆ ಏಳು ಕೋಟಿ ಲಸಿಕೆ ಬೇಕಿದೆ. ಅದಕ್ಕೆ ₹ 2,100 ಕೋಟಿ ವೆಚ್ಚವಾಗುತ್ತದೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಕೋವಿಡ್ ದೇಶಕ್ಕೆ ಕಾಲಿರಿಸಿ ಒಂದು ವರ್ಷಕ್ಕೂ ಹೆಚ್ಚು ಸಮಯ ಕಳೆದಿದೆ. ಆದರೆ. ಲಸಿಕೆ ಉತ್ಪಾದನೆ ಮತ್ತು ವಿತರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರಿಯಾದ ಸಿದ್ಧತೆಯನ್ನೇ ಮಾಡಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರಗಳು ನಿದ್ರಾವಸ್ಥೆಯಲ್ಲಿವೆ’ ಎಂದು ಟೀಕಿಸಿದರು.

‘ಎರಡೂ ಸರ್ಕಾರಗಳಿಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಛೀಮಾರಿ ಹಾಕಿವೆ. ಕಳೆದ ವರ್ಷದ ಅಕ್ಟೋಬರ್ ಅಥವಾ ನವೆಂಬರ್‌ನಿಂದಲೇ ಲಸಿಕೆ ಉತ್ಪಾದಿಸಿದ್ದರೆ ಈ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ’ ಎಂದರು.

ಬಿಜೆಪಿ ಸರ್ಕಾರಗಳು ವಿಫಲ: ‘ರಾಜ್ಯದ ಜನರಿಗೆ ಉಚಿತವಾಗಿ ಕೋವಿಡ್ ಲಸಿಕೆ ವಿತರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ. ಈ ಕಾರಣದಿಂದ ₹ 100 ಕೋಟಿಯಷ್ಟು ಅನುದಾನವನ್ನೇ ಲಸಿಕೆ ವಿತರಣೆಗೆ ಬಿಟ್ಟುಕೊಡುವ ನಿರ್ಧಾರವನ್ನು ಕಾಂಗ್ರೆಸ್ ಶಾಸಕರು ಕೈಗೊಂಡಿದ್ದಾರೆ’ ಎಂದಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಸಿ ಲಸಿಕೆ ವಿತರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಮತಿ ನೀಡಬೇಕು. ಈ ಸಂಬಂಧ ನೀಲನಕ್ಷೆಯನ್ನು ಸಲ್ಲಿಸಲಾಗುವುದು. ಅತ್ಯಂತ ಪಾರದರ್ಶಕವಾಗಿ ಅನುದಾನದ ಬಳಕೆ ಮಾಡಲಾಗುವುದು’ ಎಂದರು.

‘ಕೋವಿಡ್ ಲಸಿಕೆ ಪೂರೈಕೆಗೆ ಜಾಗತಿಕ ಟೆಂಡರ್ ಕರೆಯುವುದಾಗಿ ಉಪ ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಈ ಪ್ರಕ್ರಿಯೆಯು ಪಾರದರ್ಶಕವಾಗಿರಬೇಕು. ಲಸಿಕೆ ಪೂರೈಕೆಯಲ್ಲಿ ‘ಪರ್ಸೆಂಟೇಜ್’ ಚರ್ಚೆ ನಡೆಯುತ್ತಿದೆ. ಮುಖ್ಯಮಂತ್ರಿಯವರ ಗಮನಕ್ಕೆ ಬಾರದೆಯೂ ನಡೆಯುತ್ತಿರಬಹುದು. ಜನರ ಹಣ ಲಪಟಾಯಿಸುವುದನ್ನು ನೋಡಿಕೊಂಡು ಸುಮ್ಮನೆ ಕೂರುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು.

ಮನೋವೈದ್ಯರಿಂದ ಕೌನ್ಸೆಲಿಂಗ್ ಮಾಡಿಸಲು ಮುಂದಾದ ಜಿಲ್ಲಾಡಳಿತ

ಗುಣಮುಖರಾದರೂ ಆಮ್ಲಜನಕದ ಸಂಗ ಬಿಡಲೊಲ್ಲರು

• ವೆಂಕಟೇಶ ಜಿ.ಎಚ್.

ಬಾಗಲಕೋಟೆ: ಇಲ್ಲಿನ ಜಿಲ್ಲಾ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಆಮ್ಲಜನಕ ಸಂಪರ್ಕಿತ ಹಾಸಿಗೆಯಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾದ ಕೋವಿಡ್ ಸೋಂಕಿತರು ಮನೆಗೆ ಹೋಗಲು ಒಪ್ಪುತ್ತಿಲ್ಲ. ಇದರಿಂದಾಗಿ ಆಮ್ಲಜನಕವುಳ್ಳ ಹಾಸಿಗೆಯ ತುರ್ತು ನೆರವು ಬೇಕಿರುವವರಿಗೆ ಚಿಕಿತ್ಸೆ ನೀಡಲು ತೀವ್ರ ತೊಂದರೆ ಆಗಿದೆ.

ಮನೆಗೆ ಹೋಗುವಂತೆ ಮನವೊಲಿಸಲು ಆಪ್ತಸಮಾಲೋಚನೆಗೆ ಮನೋವೈದ್ಯರನ್ನು ಜಿಲ್ಲಾಡಳಿತ ನೇಮಕ ಮಾಡಿದೆ.

‘ನೀವು ಹೇಳಿದ್ದೀರೆಂದು ಮನೆಗೆ ಹೋಗುತ್ತೇವೆ. ಅಲ್ಲಿ ಮತ್ತೆ ಉಸಿರಾಟಕ್ಕೆ ತೊಂದರೆ ಆದರೆ ಯಾರು ಹೊಣೆ. ಇನ್ನೆರಡು ದಿನ ಇರುತ್ತೇವೆ’ ಎಂದು ಗುಣಮುಖರಾದವರು ಹೇಳುತ್ತಿದ್ದಾರೆ. ಉಸಿರಾಟಕ್ಕೆ ಆಮ್ಲಜನಕದ ನೆರವು ನಿಲ್ಲಿಸದಂತೆ ಒತ್ತಾಯಿಸುತ್ತಾರೆ. ತಕ್ಷಣ ಡಿಸ್ಚಾರ್ಜ್ ಮಾಡದಂತೆ ಪ್ರಭಾವಿಗಳಿಂದ ಒತ್ತಡ ಹಾಕಿಸುತ್ತಿದ್ದಾರೆ. ಇದು ಜಿಲ್ಲಾಡಳಿತಕ್ಕೆ ತಲೆನೋವಾಗಿ ಪರಿಣಮಿಸಿದೆ.



> **ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯುತ್ತಿರುವವರೇ ಹೆಚ್ಚಾಗಿ ಈ ವರ್ತನೆ ತೋರುತ್ತಿದ್ದಾರೆ. ಹಾಸಿಗೆ ಖಾಲಿ ಮಾಡಿದರೆ, ಇನ್ನೊಂದು ಜೀವ ಉಳಿಯಲಿದೆ ಎಂಬುದನ್ನು ಅರಿಯಬೇಕು**
> **ಕ್ಯಾಪ್ಟನ್ ಡಾ.ಕೆ.ರಾಜೇಂದ್ರ,** ಜಿಲ್ಲಾಧಿಕಾರಿ

ಇಲ್ಲಿನ ಕುಮಾರೇಶ್ವರ ಆಸ್ಪತ್ರೆಯಲ್ಲಿ ಎರಡು ದಿನಗಳ ಹಿಂದೆ ಮಹಿಳೆಯೊಬ್ಬರು ಆಮ್ಲಜನಕ ಸಿಲಿಂಡರ್ ಅಪ್ಪಿಕೊಂಡು ಆಸ್ಪತ್ರೆಯಿಂದ ಬಿಡುಗಡೆ ಮಾಡದಂತೆ ದೊಡ್ಡ ರಂಪವನ್ನೇ ಮಾಡಿದ್ದಾರೆ.

‘ಸೋಂಕಿತರು ಗುಣಮುಖರಾಗಿದ್ದು, ಆಸ್ಪತ್ರೆಯಿಂದ ಬಿಡುಗಡೆ ಮಾಡಬಹುದು ಎಂದು ಚಿಕಿತ್ಸೆ ನೀಡಿದ ವೈದ್ಯರು ಶಿಫಾರಸು ಮಾಡಿದ ನಂತರವೇ ಮನೆಗೆ ತೆರಳಲು ಅವರಿಗೆ ಹೇಳಲಾಗುತ್ತಿದೆ. ಆದರೂ ಒಪ್ಪುತ್ತಿಲ್ಲ. ಕೆಲವರಿಗೆ ಕೌನ್ಸೆಲಿಂಗ್ ಮಾಡಿಸಿ, ಇನ್ನೂ ಕೆಲವರನ್ನು ಬಲವಂತವಾಗಿ ಮನೆಗೆ ಕಳುಹಿಸಿದ್ದೇವೆ’ ಎಂದು ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ಹೇಳುತ್ತಾರೆ.

‘ಹೀಗೆ ಗುಣಮುಖರಾದವರನ್ನು ಪರಿಶೀಲಿಸಿ ಆಸ್ಪತ್ರೆಯಿಂದ ಮನೆಗೆ ಕಳುಹಿಸಲೆಂದೇ ಹಿರಿಯ ವೈದ್ಯೆ ಡಾ.ಜಯಶ್ರೀ ಎಮ್ಮಿ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿದ್ದೇವೆ. ಅವರ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಆಸ್ಪತ್ರೆಯಲ್ಲಿದ್ದ 26 ಮಂದಿಯನ್ನು ಗುರುವಾರ ಬಿಡುಗಡೆ ಮಾಡಲಾಗಿದೆ’ ಎನ್ನುತ್ತಾರೆ.

ಜೇಬಿನಲ್ಲಿ ಸ್ಪ್ಯಾನರ್; ಬೆಚ್ಚಿಬಿದ್ದ ಅಧಿಕಾರಿಗಳು!

ಇಲ್ಲಿನ ಜಿಲ್ಲಾ ಆಸ್ಪತ್ರೆಯ ಕೋವಿಡ್ ವಾರ್ಡ್‌ಗಳಿಗೆ ಜಿಲ್ಲಾಧಿಕಾರಿ, ಎಸ್ಪಿ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳು ಭೇಟಿ ನೀಡಿದ್ದರು. ಈ ವೇಳೆ ಅಲ್ಲಿ ಸೋಂಕಿತರ ನೋಡಿಕೊಳ್ಳಲು ಬಂದಿದ್ದ ಸಂಬಂಧಿಕರು ಜೇಬಿನಲ್ಲಿ, ಕೈಯಲ್ಲಿ ಸ್ಪ್ಯಾನರ್ ಇಟ್ಟುಕೊಂಡು ಅಡ್ಡಾಡುವುದು ಕಂಡುಬಂದಿತು.

ವಿಚಾರಿಸಿದಾಗ, ರೋಗಿಗೆ ಅಳವಡಿಸಿರುವ ಸಿಲಿಂಡರ್‌ನ ದ್ವಾರ ಸಡಿಲಿಸಿ ನಿಗದಿಗಿಂತ ಹೆಚ್ಚಿನ ಪ್ರಮಾಣದ ಜೀವವಾಯು ಹರಿಯುವಂತೆ ಮಾಡಲು ಸ್ಪ್ಯಾನರ್ ಬಳಸುತ್ತಿದ್ದೇವೆ’ ಎಂದಾಗ ಅಧಿಕಾರಿಗಳು ಬೆಚ್ಚಿಬಿದ್ದರು. ಅವಧಿಗೆ ಮುನ್ನ ಸಿಲಿಂಡರ್‌ಗಳು ಖಾಲಿಯಾಗುವುದರ ಹಿಂದಿನ ರಹಸ್ಯವೂ ಗೊತ್ತಾಯಿತು.

ಕೋವಿಶೀಲ್ಡ್: 12 ವಾರದ ಬಳಿಕ ಎರಡನೇ ಡೋಸ್

ಒಂದನೇ ಪುಟದಿಂದ

ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ) ಮತ್ತು ರಾಷ್ಟ್ರೀಯ ತಜ್ಞರ ಸಮಿತಿ (ಎನ್‌ಇಜಿವಿಎಸಿ) ಶಿಫಾರಸಿನ ಅನುಸಾರ ಕೇಂದ್ರ ಸರ್ಕಾರವು ‘ಕೋವಿಶೀಲ್ಡ್’ ಲಸಿಕೆಯ ಎರಡನೇ ಡೋಸ್ ಅನ್ನು 12ರಿಂದ 16 ವಾರಗಳ ಅವಧಿಯಲ್ಲಿ ನೀಡಬೇಕು ಎಂದು ಸೂಚಿಸಿದೆ.

ಮೊದಲ ಡೋಸ್ ಪಡೆದ ನಂತರ 12 ವಾರ ಪೂರ್ಣಗೊಳಿಸದವರು ಎರಡನೇ ಡೋಸ್ ಪಡೆಯಲು ಲಸಿಕೆ ಕೇಂದ್ರಗಳಿಗೆ ಬರಬಾರದು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ತಿಳಿಸಿದ್ದಾರೆ.

ಎರಡು ಡೋಸ್‌ಗಳ ನಡುವಿನ ಪರಿಷ್ಕೃತ ಸಮಯದ ಅಂತರವು ‘ಕೋವಿಶೀಲ್ಡ್’ ಲಸಿಕೆಗೆ ಮಾತ್ರ ಅನ್ವಯ. ‘ಕೋವ್ಯಾಕ್ಸಿನ್’ ಲಸಿಕೆಯನ್ನು ಈ ಮೊದಲಿನಂತೆ ನೀಡಲಾಗುತ್ತದೆ ಎಂದು ನಿರ್ದೇಶಕರು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಆಸ್ಪತ್ರೆಗಳ ಭಾರ ತಗ್ಗಿಸಲು ಬಿಎಂಸಿ–92 ವೈದ್ಯ ಪಡೆಯ ಹೊಸ ಮಾರ್ಗ

ಒಂದನೇ ಪುಟದಿಂದ

ಕೆಸಿವಿಟಿ ಹೆಸರಿನಲ್ಲಿ ರಾಜ್ಯದಾದ್ಯಂತ ಸ್ವಯಂಸೇವಕರ ತಂಡವೊಂದನ್ನು ಕಟ್ಟುವ ಪ್ರಯತ್ನದ ಭಾಗವಾಗಿ ಮೇ 4ರಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಆರಂಭವಾಗಿತ್ತು.

ಒಂದು ವಾರದಲ್ಲಿ ಅದರ ಸ್ವರೂಪ ಬದಲಾಗಿದೆ. ಶುಕ್ರವಾರ ಸಂಜೆಯ ವೇಳೆಗೆ 82 ವೈದ್ಯರು, 1,300 ಸ್ವಯಂಸೇವಕರು ಈ ತಂಡವನ್ನು ಸೇರಿಕೊಂಡಿದ್ದಾರೆ.

ಅಮೆರಿಕ, ಬ್ರಿಟನ್‌ನಲ್ಲಿರುವ ಬಿಎಂಸಿ– 92 ಸದಸ್ಯರು ದೇಣಿಗೆ ಸಂಗ್ರಹಿಸಿ 400 ಆಮ್ಲಜನಕ ಸಾಂದ್ರಕಗಳನ್ನು ಕಳುಹಿಸುತ್ತಿದ್ದಾರೆ.

‘ಆತಂಕದಲ್ಲಿ ಇರುವವರಿಗೆ ಆಪ್ತ ಸಮಾಲೋಚನೆ ಮತ್ತು ದೃಢೀಕೃತ ಮಾಹಿತಿ ಒದಗಿಸುವ ಸಹಾಯವಾಣಿ ಆರಂಭಿಸುವುದು ನಮ್ಮ ಆಲೋಚನೆಯಾಗಿತ್ತು. ನಾನು ಬಿಎಂಸಿ 1992ರ ಪದವೀಧರನಾಗಿದ್ದು, ಇದನ್ನು ಗೆಳೆಯರ ಗುಂಪಿನಲ್ಲಿ ಹಂಚಿಕೊಂಡೆ. ತಕ್ಷಣದಲ್ಲೇ ಅಮೆರಿಕ, ಬ್ರಿಟನ್‌ನಲ್ಲಿರುವ ವೈದ್ಯ ಗೆಳೆಯರು ಕಾರ್ಯಪ್ರವೃತ್ತರಾದರು. ಬೆಂಗಳೂರು ಸೇರಿದಂತೆ ದೇಶದಲ್ಲಿರುವ ವೈದ್ಯ ಗೆಳೆಯರೂ ಸಹಕಾರ ನೀಡಿದರು. ಇದರಿಂದ ಒಂದು ಪರ್ಯಾಯ ವ್ಯವಸ್ಥೆ ಕಟ್ಟುವ ಯೋಜನೆ ಸಿದ್ಧವಾಯಿತು’ ಎಂದು ಈ ಯೋಜನೆಯನ್ನು ಮುನ್ನಡೆಸುತ್ತಿರುವವರಲ್ಲಿ ಒಬ್ಬರಾದ ಡಾ.ಎಚ್.ವಿ. ವಾಸು ‘ಪ್ರಜಾವಾಣಿ’ಗೆ ತಿಳಿಸಿದರು.

ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಅನುಭವ ಹೊಂದಿರುವವರು, ಮಾಹಿತಿ ತಂತ್ರಜ್ಞಾನ ಉದ್ಯಮದಲ್ಲಿರುವವರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಜನರು ಸ್ವಯಂಸೇವಕರಾಗಿ ಬಂದಿದ್ದಾರೆ. 20 ಮಂದಿ ವೈದ್ಯಕೀಯ ಕ್ಷೇತ್ರದ ತಜ್ಞ ಆಪ್ತ ಸಮಾಲೋಚಕರು, 500 ಮಂದಿ ಕೋವಿಡ್ ಸಮಾಲೋಚಕರು ಉಚಿತವಾಗಿ ಸೇವೆ ಒದಗಿಸಲು ಸಜ್ಜಾಗಿದ್ದಾರೆ.

‘ವಿಕ್ರಂ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ಉಮೇಶ್, ಬ್ರಿಟನ್‌ನಲ್ಲಿರುವ ಅರಿವಳಿಕೆ ತಜ್ಞ ಡಾ. ರವಿ ಸೇರಿದಂತೆ ಹಲವು ಪ್ರಖ್ಯಾತ ವೈದ್ಯರು ಈ ತಂಡ ಸೇರಿಕೊಂಡಿದ್ದಾರೆ. ಬಿಎಂಸಿ–92 ಗುಂಪಿನ ಜತೆಗೆ ಬೇರೆ ವೈದ್ಯರೂ ಕೈಜೋಡಿಸಿದ್ದಾರೆ. ಎಲ್ಲ ವೈದ್ಯರೂ ಕನ್ನಡ ಬಲ್ಲವರೇ ಆಗಿದ್ದಾರೆ’ ಎಂದು ಡಾ.ವಾಸು ಮಾಹಿತಿ ನೀಡಿದರು.

ಈ ತಂಡ ನಾಲ್ಕು ದಿನಗಳಿಂದ 500 ಕೋವಿಡ್ ರೋಗಿಗಳಿಗೆ ನೆರವು ಒದಗಿಸಿದೆ. ಮುಂದಿನ ಒಂದು ವಾರದೊಳಗೆ ನಿತ್ಯ 5,000 ಕರೆಗಳನ್ನು ಸ್ವೀಕರಿಸಿ, ನೆರವು ಒದಗಿಸುವ ಗುರಿ ಹೊಂದಿದೆ.

ಜಿಲ್ಲೆಗಳಲ್ಲಿ ಮಾಹಿತಿ ಮಾತ್ರ

ಕೆಸಿವಿಟಿ ತಂಡ ಬೆಂಗಳೂರಿನಲ್ಲಿ ಮಾತ್ರ ಕೋವಿಡ್ ರೋಗಿಗಳ ಚಿಕಿತ್ಸೆ ಹಾಗೂ ಆರೈಕೆಗೆ ವೈದ್ಯಕೀಯ ನೆರವು ಒದಗಿಸುತ್ತಿದೆ. ಇತರ ಜಿಲ್ಲೆಗಳಲ್ಲಿ ಸಮಾಲೋಚನೆ ಮತ್ತು ದೃಢೀಕೃತ ಮಾಹಿತಿಯನ್ನು ಹಂಚಿಕೊಳ್ಳುವ ಕೆಲಸವನ್ನಷ್ಟೇ ಮಾಡುತ್ತಿದೆ.

ಸಂಕ್ಷಿಪ್ತ ಸುದ್ದಿ

ಹಸ್ಸಿ ಗುಣಮುಖ: ಸ್ವದೇಶಕ್ಕೆ ತೆರಳಲು ಸಜ್ಜು

ನವದೆಹಲಿ (ಪಿಟಿಐ): ಐಪಿಎಲ್ ಫ್ರಾಂಚೈಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಮೈಕೆಲ್ ಹಸ್ಸಿ ಅವರು ಕೋವಿಡ್‌ನಿಂದ ಚೇತರಿಸಿಕೊಂಡಿದ್ದು, ಭಾನುವಾರ ತವರು ದೇಶ ಆಸ್ಟ್ರೇಲಿಯಾಕ್ಕೆ ತೆರಳಲು ಸಜ್ಜಾಗಿದ್ದಾರೆ. ಆದರೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ವೃದ್ಧಿಮಾನ್ ಅವರ ಪರೀಕ್ಷಾ ವರದಿ ಮತ್ತೊಮ್ಮೆ 'ಪಾಸಿಟಿವ್' ಬಂದಿದ್ದು, ಪ್ರತ್ಯೇಕವಾಸದಲ್ಲಿ ಮುಂದುವರಿಯಲಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಹಾಗೂ ಅದರ ಬಳಿಕ ನಡೆಯುವ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೆ ಸಹಾ ಅವರು ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದೇ 25ರಂದು ಅವರು, ಭಾರತ ತಂಡವು ತಂಗಿರುವ ಮುಂಬೈನ ಬಯೋಬಬಲ್ ಸೇರಿಕೊಳ್ಳುವ ಆಶಯ ಹೊಂದಿದ್ದಾರೆ. ಆದರೆ ಇದು ಅವರ ಫಿಟ್‌ನೆಸ್ ಮೇಲೆ ಅವಲಂಬಿತವಾಗಿದೆ.

ಐಪಿಎಲ್ ಟೂರ್ನಿಯನ್ನು ಅನಿರ್ದಿಷ್ಟ ಅವಧಿಗೆ ಸ್ಥಗಿತಗೊಳಿಸಲಾಗಿದೆ. ಟೂರ್ನಿಯ ವೇಳೆ ಹಸ್ಸಿ ಮತ್ತು ಸಹಾ ಅವರಿಗೆ ಕೋವಿಡ್ ದೃಢಪಟ್ಟಿತ್ತು.

ಪಾಸ್ ಇಲ್ಲದೆ ಪಯಣಿಸಿದ ಪೃಥ್ವಿ

ಮುಂಬೈ (ಪಿಟಿಐ): ಪಾಸ್ ಇಲ್ಲದೆ ಮಹಾರಾಷ್ಟ್ರದಿಂದ ಗೋವಾಗೆ ಕಾರಿನಲ್ಲಿ ಪಯಣಿಸಿದ ಭಾರತ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್ ಪೃಥ್ವಿ ಶಾ ಪೊಲೀಸರ ಕೈಗೆ ಸಿಕ್ಕಿಬಿದ್ದಿರುವುದು ತಡವಾಗಿ ಬೆಳಕಿಗೆ ಬಂದಿದೆ. ಬುಧವಾರ ಅಂಬೋಲಿಯಲ್ಲಿ ಅವರು ಪೊಲೀಸರ ಕಣ್ಣಿಗೆ ಬಿದ್ದಿದ್ದು ಸಮರ್ಪಕ ಪಾಸ್ ಪಡೆದ ನಂತರ ಪ್ರಯಾಣ ಮುಂದುವರಿಸಿದ್ದಾರೆ.


ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಕೋವಿಡ್‌ನಿಂದಾಗಿ ಅರ್ಧಕ್ಕೆ ನಿಂತ ನಂತರ ಮುಂಬೈಯಲ್ಲಿರುವ ಮನೆಗೆ ಮರಳಿದ್ದ ಪೃಥ್ವಿ ಶಾ ಅವರು ಇ-ಪಾಸ್ ಇಲ್ಲದೇ ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯಿಂದ ಗೋವಾಗೆ ಬೆಳಗ್ಗಿನ ವೇಳೆ ಪಯಣಿಸುತ್ತಿದ್ದರು.

ಕೋವಿಡ್ ತಡೆಗಟ್ಟುವ ಕ್ರಮದ ಅಂಗವಾಗಿ ಮಹಾರಾಷ್ಟ್ರ ಸರ್ಕಾರ ಪ್ರಯಾಣಕ್ಕೆ ಪಾಸ್ ಕಡ್ಡಾಯಗೊಳಿಸಿದೆ. ಪಾಸ್‌ಗೆ ಅರ್ಜಿ ಸಲ್ಲಿಸಿದ್ದ ಶಾ ಅದು ಸಿಗುವ ಮೊದಲೇ ಪಯಣ ಬೆಳೆಸಿದ್ದರು. ಅರ್ಜಿ ಸಲ್ಲಿಸಿದ್ದರ ಮಾಹಿತಿ ಮಾತ್ರ ಅವರಲ್ಲಿತ್ತು.

ಅಂಬೋಲಿಯಲ್ಲಿ ಪೊಲೀಸರು ಅಡ್ಡಹಾಕಿದ ನಂತರ ಮತ್ತೊಮ್ಮೆ ಅರ್ಜಿ ಸಲ್ಲಿಸಿದರು. ಒಂದು ತಾಸಿನಲ್ಲಿ ಪಾಸ್ ಸಿಕ್ಕಿದ ನಂತರ ಪ್ರಯಾಣ ಮುಂದುವರಿಸಿದರು.

ಫುಟ್‌ಬಾಲ್: ಭಾರತ 19 ವರ್ಷದೊಳಗಿನವರ ತಂಡಕ್ಕೆ ಶ್ರೇಯಸ್

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ಮಿಡ್‌ಫೀಲ್ಡರ್ ಶ್ರೇಯಸ್ ಕೇತ್ಕರ್ ಅವರು ಭಾರತ 19 ವರ್ಷದೊಳಗಿನವರ ಫುಟ್‌ಬಾಲ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ತರಬೇತಿಗಳು ಪುನರಾರಂಭವಾದ ಬಳಿಕ ಅವರು ತಂಡದೊಂದಿಗೆ ಅಭ್ಯಾಸ ನಡೆಸಲಿದ್ದಾರೆ.



ಶ್ರೇಯಸ್ ಕೇತ್ಕರ್

'ಭಾರತ 19 ವರ್ಷದೊಳಗಿನವರ ತಂಡದೊಂದಿಗೆ ತರಬೇತಿ ಪಡೆಯಲು ಆಯ್ಕೆಯಾಗಿದ್ದು ಖುಷಿ ನೀಡಿದೆ. ಭವಿಷ್ಯದಲ್ಲಿ ರಾಷ್ಟ್ರೀಯ ಸೀನಿಯರ್ ತಂಡಕ್ಕೂ ಆಡುವ ವಿಶ್ವಾಸವಿದೆ' ಎಂದು ಶ್ರೇಯಸ್ ಹೇಳಿದ್ದಾರೆ.

'2022ರ 19 ವರ್ಷದೊಳಗಿನವರ ಎಎಫ್‌ಸಿ ಕಪ್ ಟೂರ್ನಿಗೆ ಭಾರತ ತಂಡಕ್ಕೆ ಆಯ್ಕೆಯಾಗುವುದು ನನ್ನ ಮೊದಲ ಗುರಿ' ಎಂದೂ ಶ್ರೇಯಸ್ ನುಡಿದರು.

ಕಾಬೂಲ್: ಈದ್ ಪ್ರಾರ್ಥನೆ ವೇಳೆ ಸ್ಫೋಟ, 12 ಸಾವು

ಕಾಬೂಲ್ (ಪಿಟಿಐ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್ ಹೊರವಲಯದಲ್ಲಿರುವ ಮಸೀದಿಯಲ್ಲಿ ಶುಕ್ರವಾರ ಈದ್ ಉಲ್ ಫಿತ್ರ್ ಅಂಗವಾಗಿ ಪ್ರಾರ್ಥನೆ ನಡೆಯುತ್ತಿದ್ದ ಸಂದರ್ಭ ಬಾಂಬ್ ಸ್ಫೋಟ ಸಂಭವಿಸಿದ್ದು, ಕನಿಷ್ಠ 12 ಮಂದಿ ಸಾವನ್ನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ಮಸೀದಿಯ ಇಮಾಮ್ ಸೇರಿದಂತೆ 12 ಮಂದಿ ಸಾವನ್ನಪ್ಪಿದ್ದು, 15 ಮಂದಿ ಗಾಯಗೊಂಡಿದ್ದಾರೆ' ಎಂದು ಕಾಬೂಲ್ ಪೊಲೀಸ್ ವಕ್ತಾರ ಫರ್ದಾವ್ಸ್ ಫರಮಾರ್ಜ್ ಹೇಳಿದ್ದಾರೆ.

ಕಾಬೂಲ್ ಪ್ರಾಂತ್ಯದ ಶಕರ್ ದಾರಾ ಜಿಲ್ಲೆಯ ಮಸೀದಿಯೊಳಗೆ ಸ್ಫೋಟ ಸಂಭವಿಸಿದೆ ಎಂದು ಅವರು ಹೇಳಿದರು.

ಗುರುವಾರ ತಾಲಿಬಾನ್ ಮತ್ತು ಸರ್ಕಾರಿ ಪಡೆಗಳ ನಡುವೆ ತಾತ್ಕಾಲಿಕ ಒಪ್ಪಂದ ಜಾರಿಗೆ ಬಂದ ನಂತರವೂ ಈ ಸ್ಫೋಟ ನಡೆದಿರುವುದು ಆತಂಕಕ್ಕೆ ಎಡೆ ಮಾಡಿದೆ. ಈದ್ ಆಚರಣೆ ಹಿನ್ನೆಲೆಯಲ್ಲಿ ಯುದ್ಧದ ವಾತಾವರಣವನ್ನು ಬದಿಗೊತ್ತಿ ಶಾಂತಿ ಒಪ್ಪಂದಕ್ಕೆ ಬರಲಾಗಿತ್ತು. ಎರಡು ದಶಕಗಳ ತಾಲಿಬಾನ್ ಮತ್ತು ಸರ್ಕಾರದ ನಡುವಿನ ಸಂಘರ್ಷದಲ್ಲಿ ಇದು ನಾಲ್ಕನೆಯ ಒಪ್ಪಂದವಾಗಿತ್ತು.

ಮಹಿಳಾ ಕ್ರಿಕೆಟ್: ರಾಮನ್ ತೆಗೆದುಹಾಕಲು ವೈಯಕ್ತಿಕ ಹಿತಾಸಕ್ತಿ ಕಾರಣ?

ಕೋಚ್ ಆಯ್ಕೆಯಲ್ಲಿ ಪಕ್ಷಪಾತ?

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಕೋಚ್ ಸ್ಥಾನದಿಂದ ಡಬ್ಲ್ಯು.ವಿ.ರಾಮನ್ ಅವರನ್ನು ತೆಗೆದುಹಾಕಿರುವುದು ವಿವಾದದ ಸ್ವರೂಪ ಪಡೆದುಕೊಂಡಿದೆ. ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಮತ್ತು ಆಯ್ಕೆ ಸಮಿತಿಯ ಪ್ರಮುಖರ ಮೇಲೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲಿ (ಬಿಸಿಸಿಐ) ಅಸಮಾಧಾನ ಮೂಡಿದೆ ಎನ್ನಲಾಗುತ್ತಿದೆ.

ಭಾರತದ ಉತ್ತಮ ಕೋಚ್‌ಗಳಲ್ಲಿ ಒಬ್ಬರು ಎಂದು ಹೇಳಲಾಗುವ ರಾಮನ್ ಅವರು ಆಸ್ಟ್ರೇಲಿಯಾದಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡ ಫೈನಲ್ ಪ್ರವೇಶಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಗುರುವಾರ ಅವರನ್ನು ಕೋಚ್ ಹುದ್ದೆಯಿಂದ ತೆಗೆದು ರಮೇಶ್ ಪೊವಾರ್‌ಗೆ ಆ ಸ್ಥಾನ ನೀಡ ಲಾಗಿತ್ತು.

ಮದನ್ ಲಾಲ್ ನೇತೃತ್ವದ ಕ್ರಿಕೆಟ್ ಸಲಹಾ ಸಮಿತಿ ಮತ್ತು ನೀತು ಡೇವಿಡ್ ಮುಂದಾಳತ್ವದ ಆಯ್ಕೆ ಸಮಿತಿ ಹೊಸ ಕೋಚ್ ನೇಮಕ ಮಾಡಿತ್ತು. ಪೊವಾರ್ ಅವರನ್ನು 2018ರಲ್ಲಿ ಕೋಚ್ ಹುದ್ದೆಯಿಂದ ತೆಗೆದುಹಾಕಲಾಗಿತ್ತು.

ಭಾರತ ಕ್ರಿಕೆಟ್‌ನಲ್ಲಿ ಸುಧಾರಣೆ ತರಲು ಲೋಧಾ ಸಮಿತಿ ಮಾಡಿರುವ ಶಿಫಾರಸುಗಳಲ್ಲಿ 70 ವರ್ಷ ದಾಟಿದವರನ್ನು ಪ್ರಮುಖ ಹುದ್ದೆಗಳಲ್ಲಿ ಮುಂದುವರಿಸಬಾರದು ಎಂದು ಹೇಳಲಾಗಿತ್ತು. ಲೋಧಾ ಶಿಫಾರಸುಗಳನ್ನು ಸುಪ್ರಿಂ ಕೋರ್ಟ್‌ನಲ್ಲಿ ಪ್ರಶ್ನಿಸುವಾಗ ಬಿಸಿಸಿಐ ಈ ವಿಷಯದ ಕುರಿತು ತಕರಾರು ಎತ್ತಲಿಲ್ಲ. ಈ ಹಿನ್ನೆಲೆಯಲ್ಲಿ ಮದನ್‌ಲಾಲ್ ಅವರನ್ನು ಸಿಎಸಿಯಲ್ಲಿ ಮುಂದುವರಿಸಿದ್ದು ಹೇಗೆ ಎಂಬ ಪ್ರಶ್ನೆ ಎದ್ದಿದೆ.

ಅವರು ಕಳೆದ ಮಾರ್ಚ್ 20ರಂದು 70ನೇ ಜನ್ಮದಿನ ಆಚರಿಸಿದ್ದರು. ಹೀಗಾಗಿ ಮದನ್‌ಲಾಲ್ ಗುರುವಾರ ಸಭೆಗೆ ಹಾಜರಾದದ್ದು ಹೇಗೆ ಎಂಬ ಸಂದೇಹ ಪ್ರಶ್ನೆಗೆ ಉತ್ತರ ಹುಡುಕಬೇಕಾಗಿದೆ. ಸಿಎಸಿ ಮತ್ತು ಆಯ್ಕೆ ಸಮಿತಿ ಪೊವಾರ್‌ಗೆ ಮಣೆ ಹಾಕಿದ್ದರ ಬಗ್ಗೆ ತಕರಾರು ಇಲ್ಲದಿದ್ದರೂ ರಾಮನ್ ಅವರನ್ನು ತೆಗೆದುಹಾಕಿದ್ದರ ಬಗ್ಗೆ ಬಿಸಿಸಿಐ ಗಂಭೀರ ಚಿಂತನೆ ನಡೆಸಿದೆ.

ಮುಂಬೈ ಕ್ರಿಕೆಟ್ ಸಂಸ್ಥೆಯ ಸಹಕಾರ್ಯದರ್ಶಿ ಸಂಜಯ್ ನಾಯಕ್ ಅವರ ತಂಗಿ ಹಾಗೂ ಭಾರತ ತಂಡದ ಮಾಜಿ ಆಟಗಾರ್ತಿ ಸುಲಕ್ಷಣಾ ನಾಯಕ್ ವಿವಿಧ ನೇಮಕಾತಿಗೆ ಸಂಬಂಧಪಟ್ಟು ಸಿಎಸಿಯ ಮೂರು ಸಭೆಗಳಲ್ಲಿ ಪಾಲ್ಗೊಂಡಿದ್ದಾರೆ. ಅವರ ಆಶಯದಂತೆ ರಾಮನ್ ಅವರನ್ನು ತೆಗೆದುಹಾಕಿರಬಹುದು ಎಂದು ಆಯ್ಕೆ ಸಮಿತಿಯಲ್ಲಿದ್ದ ಸದಸ್ಯರೊಬ್ಬರು ಹೇಳಿದ್ದಾರೆ.

ಇಂಗ್ಲೆಂಡ್ ಪ್ರವಾಸ: ಇಂದ್ರಾಣಿಗೆ ಸ್ಥಾನ

ನವದೆಹಲಿ (ಪಿಟಿಐ): ಜಾರ್ಖಂಡ್‌ನ ವಿಕೆಟ್ ಕೀಪರ್ ಬ್ಯಾಟರ್ ಇಂದ್ರಾಣಿ ರಾಯ್ ಅವರಿಗೆ ಮಹಿಳಾ ಕ್ರಿಕೆಟ್‌ನ ಟೆಸ್ಟ್, ಏಕದಿನ ಮತ್ತು ಟಿ20 ತಂಡದಲ್ಲಿ ಅವಕಾಶ ನೀಡಲಾಗಿದ್ದು ಶಫಾಲಿ ವರ್ಮಾ ಮತ್ತು ಶಿಖಾ ಪಾಂಡೆ ಅವರನ್ನು ಕರೆಸಿಕೊಳ್ಳಲಾಗಿದೆ. ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿರುವ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಸರಣಿಗೆ ತಂಡವನ್ನು ನೀತು ಡೇವಿಡ್ ಅಧ್ಯಕ್ಷತೆಯ ಆಯ್ಕೆ ಸಮಿತಿ ಶುಕ್ರವಾರ ಆರಿಸಿದೆ.

ತಂಡಗಳು: ಟೆಸ್ಟ್ ಮತ್ತು ಏಕದಿನ: ಮಿಥಾಲಿ ರಾಜ್ (ನಾಯಕಿ), ಸ್ಮೃತಿ ಮಂದಾನ, ಹರ್ಮನ್‌ಪ್ರೀತ್ ಕೌರ್ (ಉಪನಾಯಕಿ), ಪೂನಂ ರಾವತ್, ಪ್ರಿಯಾ ಪೂನಿಯಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಸ್ನೇಹಾ ರಾಣಾ, ತಾನಿಯಾ ಭಾಟಿಯಾ, (ವಿಕೆಟ್ ಕೀಪರ್), ಇಂದ್ರಾಣಿ ರಾಯ್ (ವಿಕೆಟ್ ಕೀಪರ್), ಜೂಲನ್ ಗೋಸ್ವಾಮಿ, ಶಿಖಾ ಪಾಂಡೆ, ಪೂಜಾ ವಸ್ತ್ರಕಾರ್, ಅರುಂಧತಿ ರೆಡ್ಡಿ, ಪೂನಂ ಯಾದವ್, ಏಕ್ತಾ ಬಿಷ್ತ್, ರಾಧಾ ಯಾದವ್.

ಟಿ20: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ರಿಚಾ ಘೋಷ್, ಹರ್ಲೀನ್ ಡಿಯೋಲ್, ಸ್ನೇಹಾ ರಾಣಾ, ತಾನಿಯಾ ಭಾಟಿಯಾ (ವಿಕೆಟ್ ಕೀಪರ್), ಇಂದ್ರಾಣಿ ರಾಯ್ (ವಿಕೆಟ್ ಕೀಪರ್), ಶಿಖಾ ಪಾಂಡೆ, ಪೂಜಾ ವಸ್ತ್ರಕಾರ್, ಅರುಂಧತಿ ರೆಡ್ಡಿ, ಪೂನಂ ಯಾದವ್, ಏಕ್ತಾ ಬಿಷ್ತ್, ರಾಧಾ ಯಾದವ್, ಸಿಮ್ರನ್ ದಿಲ್ ಬಹದ್ದೂರ್.



ಡಬ್ಲ್ಯು.ವಿ.ರಾಮನ್

ರಾಮನ್–ನೀತು ಜಟಾಪಟಿ?

ಸ್ಫೋಟಕ ಶೈಲಿಯ ಬ್ಯಾಟರ್ ಶೆಫಾಲಿ ವರ್ಮಾ ಮತ್ತು ಪ್ರಮುಖ ಬೌಲರ್ ಶಿಖಾ ಪಾಂಡೆ ಅವರನ್ನು ಕೈಬಿಟ್ಟು ದಕ್ಷಿಣ ಆಫ್ರಿಕಾ ಎದುರಿನ ಸರಣಿಗೆ ತಂಡವನ್ನು ಆಯ್ಕೆ ಮಾಡಿದ ನೀತು ಡೇವಿಡ್ ನೇತೃತ್ವದ ಸಮಿತಿಯ ವಿರುದ್ಧ ರಾಮನ್ ಧ್ವನಿ ಎತ್ತಿದ್ದರು. ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪೂರ್ಣ ಪ್ರಮಾಣದಲ್ಲಿ ಸಿದ್ಧರಾಗದೇ ಇದ್ದ ಲೆಗ್ ಸ್ಪಿನ್ನರ್ ಸಿ. ಪ್ರತ್ಯೂಷಾ ಮತ್ತು ಎಡಗೈ ವೇಗಿ ಮೋನಿಕಾ ಪಟೇಲ್ ಆಯ್ಕೆಗೂ ಬೇಸರ ವ್ಯಕ್ತಪಡಿಸಿದ್ದರು ಎಂದು ವಿವಿಧ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ಗಂಗೂಲಿಗೆ ಪತ್ರ ಬರೆದ ರಾಮನ್

ನವದೆಹಲಿ (ಪಿಟಿಐ): ಕ್ರಿಕೆಟ್ ತಂಡದಲ್ಲಿ ತಾರಾ ವರ್ಚಸ್ಸಿನ ಆಟಗಾರರಿಗೆ ವಿಶೇಷ ಆದ್ಯತೆ ಕೊಡುವ ಧೋರಣೆಯು ಸರಿಯಲ್ಲ. ಎಲ್ಲರನ್ನೂ ಒಂದೇ ತರಹ ನೋಡಬೇಕು ಎಂದು ಭಾರತ ಮಹಿಳಾ ತಂಡದ ಮಾಜಿ ಕೋಚ್ ಡಬ್ಲ್ಯು.ವಿ. ರಾಮನ್ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರಿಗೆ ಬರೆದ ಪತ್ರದಲ್ಲಿ ಈ ಮಾತನ್ನು ಉಲ್ಲೇಖಿಸಿದ್ದಾರೆ.

ಮಹಿಳಾ ತಂಡಕ್ಕೆ ಗುರುವಾರ ನಡೆದಿದ್ದ ಕೋಚ್ ನೇಮಕ ಸಂದರ್ಶನದಲ್ಲಿ ರಾಮನ್ ಅವರಿಗೆ ಮತ್ತೊಂದು ಅವಕಾಶ ನೀಡಿರಲಿಲ್ಲ. ರಮೇಶ್ ಪೊವಾರ್ ಅವರನ್ನು ಕೋಚ್ ಆಗಿ ನೇಮಕ ಮಾಡಲಾಗಿತ್ತು. ಇದರಿಂದಾಗಿ ರಾಮನ್ ತೀವ್ರ ಬೇಸರಗೊಂಡಿದ್ದಾರೆಂದು ಅವರ ಆಪ್ತರು ತಿಳಿಸಿದ್ದಾರೆ.

'ತಂಡವಾಗಿ ಆಡುವುದಕ್ಕೆ ರಾಮನ್ ಪ್ರಾಮುಖ್ಯತೆ ಕೊಡುತ್ತಿದ್ದರು. ಯಾವುದೇ ಒಬ್ಬ ಆಟಗಾರ್ತಿಗಷ್ಟೇ ಪ್ರಾಮುಖ್ಯತೆ ಕೊಡುವ ಗುಣ ಅವರದ್ದಾಗಿರಲಿಲ್ಲ. ಇಡೀ ತಂಡವು ಒಬ್ಬ ಮಹಿಳೆಯ ಆಟದ ಮೇಲೆ ಅವಲಂಬಿತವಾಗಿರಬಾರದು ಎಂಬ ಯೋಚನೆ ಅವರದ್ದಾಗಿತ್ತೆಂಬುದನ್ನು ಪತ್ರದಲ್ಲಿ ರಾಮನ್ ಉಲ್ಲೇಖಿಸಿದ್ದಾರೆ' ಎಂದೂ ಅವರೂ ತಿಳಿಸಿದ್ದಾರೆ.

'ತಮ್ಮ ಕಾರ್ಯವೈಖರಿಯ ಬಗ್ಗೆ ಯಾವುದೇ ಆಕ್ಷೇಪ ಅಥವಾ ಆರೋಪಗಳಿದ್ದರೂ ಬಿಸಿಸಿಐ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರೊಂದಿಗೆ ಮಾತನಾಡಲು ಸಿದ್ಧವಿರುವುದಾಗಿ ರಾಮನ್ ತಿಳಿಸಿದ್ದಾರೆ. ಒಂದೊಮ್ಮೆ ಭಾರತದಲ್ಲಿ ಕೋಚಿಂಗ್ ಮಾದರಿಯ ಕುರಿತು ಮಾರ್ಗದರ್ಶಿ ಸೂತ್ರಗಳನ್ನು ಮಾಡುವುದಾದರೆ ಅದು ಎನ್‌ಸಿಎನಲ್ಲಿ ಆಗುವುದು ಸೂಕ್ತ. ಏಕೆಂದರೆ, ಅದಕ್ಕೆ ಅತ್ಯಂತ ಸೂಕ್ತ ವ್ಯಕ್ತಿ ರಾಹುಲ್ ದ್ರಾವಿಡ್ ಎಂದು ರಾಮನ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಚೆಸ್ ಪಂದ್ಯ: ₹ 37 ಲಕ್ಷ ಸಂಗ್ರಹ

ಚೆನ್ನೈ (ಪಿಟಿಐ): ಐದು ಬಾರಿಯ ವಿಶ್ವ ಚೆಸ್ ಚಾಂಪಿಯನ್ ವಿಶ್ವನಾಥನ್ ಆನಂದ್ ಸೇರಿದಂತೆ ಭಾರತದ ಐದು ಮಂದಿ ಗ್ರ್ಯಾಂಡ್‌ಮಾಸ್ಟರ್‌ಗಳು ಕೋವಿಡ್ ಪರಿಹಾರ ನಿಧಿಗೆ ₹ 37 ಲಕ್ಷ ಸಂಗ್ರಹಿಸಿದ್ದಾರೆ. ಗುರುವಾರ ಏಕಕಾಲಕ್ಕೆ ಆನ್‌ಲೈನ್‌ನಲ್ಲಿ ನಡೆದ ಪಂದ್ಯಗಳ ಮೂಲಕ ಅವರು ಈ ಮೊತ್ತ ಸಂಗ್ರಹಿಸಿದರು.

'ಚೆಸ್.ಕಾಮ್ ವೆಬ್‌ಸೈಟ್‌ನಲ್ಲಿ ನಡೆದ ಟೂರ್ನಿ ಮೂಲಕ ಸಂಗ್ರಹಿಸಿದ ಮೊತ್ತವನ್ನು ರೆಡ್‌ಕ್ರಾಸ್ ಸಂಸ್ಥೆ ಹಾಗೂ ಅಖಿಲ ಭಾರತ ಚೆಸ್ ಫೆಡರೇಷನ್‌ನ 'ಚೆಕ್‌ಮೇಟ್ ಕೋವಿಡ್' ಕಾರ್ಯಕ್ರಮಕ್ಕೆ ನೀಡಲಾಗುತ್ತದೆ' ಎಂದು ಅಧಿ ಕಾರಿಗಳು ತಿಳಿಸಿದ್ದಾರೆ.

ಆನಂದ್ ಜೊತೆಗೆ ಕೊನೇರು ಹಂಪಿ, ಹರಿಕಾ ದ್ರೋಣವಳ್ಳಿ, ನಿಹಾಲ್ ಸರಿನ್ ಮತ್ತು ಆರ್.ಪ್ರಗ್ಯಾನಂದ ಅವರು ಎದುರಾಳಿಗಳ ವಿರುದ್ಧ ಒಟ್ಟು 107 ಪಂದ್ಯಗಳನ್ನು ಆಡಿದರು.

ಒಲಿಂಪಿಕ್ಸ್‌ಗೆ ಹೆಚ್ಚಿದ ವಿರೋಧ

ಟೋಕಿಯೊ (ಎಪಿ): ಈ ಬಾರಿಯ ಒಲಿಂಪಿಕ್ಸ್‌ಅನ್ನು ರದ್ದುಗೊಳಿಸಲು ಆಗ್ರಹಿಸುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಕೂಟ ಆಯೋಜನೆಗೆ ವಿರೋಧ ವ್ಯಕ್ತಪಡಿಸಿ ಶುಕ್ರವಾರ ಮೂರುವರೆ ಲಕ್ಷಕ್ಕೂ ಅಧಿಕ ಮಂದಿ ಅರ್ಜಿಗೆ ಸಹಿ ಹಾಕಿದ್ದು, ಟೋಕಿಯೊ ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಹೊಸ ರೂಪದ ಕೊರೊನಾ ವೈರಸ್ ಹಾವಳಿ ಹೆಚ್ಚಾಗಿರುವ ಕಾರಣ ಟೋಕಿಯೊ, ಒಸಾಕಾ ಸೇರಿ ಕೆಲವು ಪ್ರದೇಶಗಳಲ್ಲಿ 31ರವರೆಗೆ ತುರ್ತು ಪರಿಸ್ಥಿತಿ ಹೇರಲಾಗಿದೆ. ಈಗ ಅದನ್ನು ಉತ್ತರ ಹೊಕ್ಕೈಡೊ, ಒಕಾಯಮಾ ಹಾಗೂ ಹೀರೋಶಿಮಾದಲ್ಲಿ ನಗರಗಳಿಗೆ ವಿಸ್ತರಿಸಲಾಗಿದೆ.

ಒಲಿಂಪಿಕ್ಸ್ ವಿರೋಧಿ ಪ್ರತಿಭಟನಾಕಾರರ ಸಹಿಗಳಿರುವ ಅರ್ಜಿಯನ್ನು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧ್ಯಕ್ಷ ಥಾಮಸ್ ಬ್ಯಾಚ್ ಮತ್ತು ಪ್ಯಾರಾಲಿಂಪಿಕ್ಸ್ ಸಮಿತಿಯ ಅಧ್ಯಕ್ಷ ಆ್ಯಂಡ್ರ್ಯೂ ಪಾರ್ಸನ್ಸ್ ಅವರಿಗೂ ಕಳುಹಿಸಲಾಗಿದೆ.

ಒಲಿಂಪಿಕ್ಸ್‌ಅನ್ನು ರದ್ದು ಅಥವಾ ಮುಂದೂಡಲು, ಜಪಾನ್‌ನ ಶೇಕಡ 70ರಿಂದ 80ರಷ್ಟು ಜನ ಜನಾಭಿಪ್ರಾಯ ಸಂಗ್ರಹದಲ್ಲಿ ಒತ್ತಾಯಿಸಿದ್ದಾರೆ. ಆದರೆ ಕೂಟವನ್ನು ರದ್ದುಗೊಳಿಸುವ ಯಾವುದೇ ಸೂಚನೆಗಳು ಕಂಡುಬರುತ್ತಿಲ್ಲ.

ಒಲಿಂಪಿಕ್ಸ್ ನಿಗದಿಯಂತೆ ನಡೆಯಲಿದೆ ಎಂದು ಜಪಾನ್ ಪ್ರಧಾನಿ ಯೋಶಿಹಿದೆ ಸುಗಾ, ಟೋಕಿಯೊ ಆಯೋಜನಾ ಸಮಿತಿ ಅಧ್ಯಕ್ಷೆ ಸೀಕೊ ಹಶಿಮೋಟೊ ಮತ್ತು ಬ್ಯಾಚ್ ಅವರು ಪುನರುಚ್ಚರಿಸುತ್ತಲೇ ಇದ್ದಾರೆ.

ಕೋವಿಡ್: ನೆರವಿಗೆ 'ಹನುಮ ಸೇತು'

ನವದೆಹಲಿ: ಕೋವಿಡ್–19ರಿಂದ ಬಳಲುತ್ತಿರುವವರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ, ಔಷಧಿ, ಪ್ಲಾಸ್ಮಾ ಮತ್ತು ಆಮ್ಲಜನಕದ ಸಿಲಿಂಡರ್ ಒದಗಿಸಲು ಭಾರತ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್ ಹನುಮ ವಿಹಾರಿ ಗೆಳೆಯರ ಬಳಗದ ಜಾಲವೊಂದನ್ನು ಸ್ಥಾಪಿಸಿದ್ದಾರೆ.

ಕೌಂಟಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವುದಕ್ಕಾಗಿ ಇಂಗ್ಲೆಂಡ್‌ಗೆ ತೆರಳಿದ್ದ ಹನುಮ ವಿಹಾರಿ ಟ್ವಿಟರ್ ಖಾತೆಯ ಮೂಲಕ ಕೋವಿಡ್ ಪೀಡಿತರ ನೆರವಿಗೆ ಮನವಿ ಮಾಡಿಕೊಂಡಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಗೆಳೆಯರನ್ನು ಒಳಗೊಂಡ ಗುಂಪೊಂದನ್ನು ರಚಿಸಿದ್ದಾರೆ. ಈ ಗುಂಪಿನವರು ರೋಗಿಗಳ ನೆರವಿಗೆ ಧಾವಿಸುತ್ತಿದ್ದಾರೆ.



ಹನುಮ ವಿಹಾರಿ –ಪಿಟಿಐ ಚಿತ್ರ

'ನನ್ನನ್ನು ನಾನು ವೈಭವೀಕರಿಸಿಕೊಳ್ಳಲು ಬಯಸುವುದಿಲ್ಲ. ತಳಮಟ್ಟದಲ್ಲಿರುವ ಜನರಿಗೆ ವೈದ್ಯಕೀಯ ಸೌಲಭ್ಯ ಮತ್ತು ನೆರವು ಸಿಗಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ಕೆ ಇಳಿದಿದ್ದೇನೆ. ಇದು ಆರಂಭವಷ್ಟೇ. ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಇನ್ನೂ ಪ್ರಯತ್ನಿಸುವೆ' ಎಂದು 27 ವರ್ಷದ ಹನುಮ ಹೇಳಿದರು.

ಏಪ್ರಿಲ್ ಆರಂಭದಲ್ಲಿ ಇಂಗ್ಲೆಂಡ್‌ಗೆ ತೆರಳಿದ್ದ ಹನುಮ, ಇಂಗ್ಲಿಷ್ ಕೌಂಟಿಯಲ್ಲಿ ವಾರ್ವಿಕ್‌ಶೈರ್ ಪರ ಆಡುತ್ತಿದ್ದಾರೆ. ಜೂನ್ 3ರಂದು ಭಾರತ ತಂಡ ಇಂಗ್ಲೆಂಡ್ ತಲುಪಲಿದ್ದು ಹನುಮ ಅಂದು ತಂಡವನ್ನು ಸೇರಿಕೊಳ್ಳಲಿದ್ದಾರೆ.

ಸಾಯ್ ಅಥ್ಲೀಟ್‌ಗಳು ಕೋವಿಡ್‌ನಿಂದ ಗುಣಮುಖ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ವೇಗ ನಡಿಗೆ ಕ್ರೀಡಾಪಟು ಕೆ.ಟಿ.ಇರ್ಫಾನ್ ಮತ್ತು ಇತರ ನಾಲ್ವರು ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳು ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿರುವ ಇವರನ್ನು ಮೇ ಏಳರಂದು ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ಇರುವುದು ದೃಢಪಟ್ಟಿತ್ತು. ಎರಡನೇ ಪರೀಕ್ಷೆಯ ವರದಿ ನೆಗೆಟಿವ್ ಆಗಿದೆ ಎಂದು ಸಾಯ್ ತಿಳಿಸಿದೆ.

ಸಾಯ್‌ನಲ್ಲಿರುವ ಒಟ್ಟು 22 ಮಂದಿ ಅಥ್ಲೀಟ್‌ಗಳ ಪೈಕಿ ಒಬ್ಬರಲ್ಲಿ ಇನ್ನೂ ಸೋಂಕು ಇದೆ ಎಂದು ಸಾಯ್ ತಿಳಿಸಿದೆ. ಆದರೆ ಅವರ ಮಾಹಿತಿ ಬಹಿರಂಗಗೊಳಿಸಿಲ್ಲ. ಎಲ್ಲ ಅಥ್ಲೀ ಟ್‌ಗಳು ಏಪ್ರಿಲ್ 29ರಂದು ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದಾರೆ. ದೇಶದ ವಿವಿಧ ಕಡೆ ಇರುವ ಕ್ರೀಡಾಪಟುಗಳನ್ನು ಒಂದು ವಾರದ ಅವಧಿಯಲ್ಲಿ ಪರೀಕ್ಷೆಗೆ ಒಳಪಡಿಸಲಾಗಿತ್ತು ಎಂದು ಅದು ಸ್ಪಷ್ಟಪಡಿಸಿದೆ.

ಏಳರಂದು ಒಟ್ಟು 16 ಮಂದಿಯ ಪರೀಕ್ಷೆ ನಡೆಸಲಾಗಿತ್ತು. ಇಬ್ಬರು ಸ್ಟೀಪಲ್ ಚೇಸ್ ಪಟುಗಳು, ಇಬ್ಬರು ಪುರುಷ ವೇಗದ ನಡಿಗೆ ಕ್ರೀಡಾಪಟುಗಳು, ಒಬ್ಬ ಮಧ್ಯಮ ಅಂತರದ ಓಟಗಾರ ಮತ್ತು ದೂರ ಅಂತರದ ಓಟಗಾರ ಇದರಲ್ಲಿ ಸೇರಿದ್ದಾರೆ

ನೆಗೆಟಿವ್ ವರದಿ ಬಂದಿರುವವರಲ್ಲಿ ಅಥ್ಲೀಟ್‌ಗಳಾದ ಪಿ.ಯು. ಚಿತ್ರಾ, ಸಂದೀಪ್ ಕುಮಾರ್ ಮತ್ತು ಮರಿಯಪ್ಪನ್ ತಂಗವೇಲು, ಹಾಕಿ ಆಟಗಾರರಾದ ಚಿಂಗ್ಲೆನ್ಸಾನಾ ಸಿಂಗ್, ವಿವೇಕ್ ಸಾಗರ್ ಇದ್ದಾರೆ ಎಂದು ತಿಳಿಸಲಾಗಿದೆ.

ನೇಪಾಳ: ಮತ್ತೆ ಪ್ರಧಾನಿಯಾಗಿ ಒಲಿ ಪ್ರಮಾಣ

ಕಠ್ಮಂಡು (ಪಿಟಿಐ): ನೇಪಾಳದ ಪ್ರಧಾನಿಯಾಗಿ ಕೆ.ಪಿ.ಶರ್ಮಾ ಒಲಿ ಅವರು ಶುಕ್ರವಾರ ಮೂರನೇ ಬಾರಿಗೆ ಅಧಿಕಾರ ಸ್ವೀಕರಿಸಿದರು.

ಇಲ್ಲಿನ ಶೀತಲ ನಿವಾಸದಲ್ಲಿ ನಡೆದ ಸಮಾರಂಭದಲ್ಲಿ ಅಧ್ಯಕ್ಷೆ ವಿದ್ಯಾದೇವಿ ಅವರು ಒಲಿ ಅವರಿಗೆ ಪ್ರಮಾಣವಚನ ಬೋಧಿಸಿದರು.

ಸೋಮವಾರವಷ್ಟೇ ಜನಪ್ರತಿನಿಧಿ ಸಭೆಯಲ್ಲಿ ನಡೆದ ವಿಶ್ವಾಸಮತದಲ್ಲಿ ಸಿಪಿಎನ್–ಯುಎಂಎಲ್ ಪಕ್ಷದ ಅಧ್ಯಕ್ಷ ಒಲಿ ಅವರು ಸೋಲು ಅನುಭವಿಸಿದ್ದರು. ಆದರೆ ಸಂಸತ್ತಿನಲ್ಲಿ ಬಹುಮತ ಗಳಿಸುವಷ್ಟು ಸ್ಥಾನಗಳನ್ನು ಪಡೆಯಲು ಇತರ ವಿರೋಧ ಪಕ್ಷಗಳು ವಿಫಲವಾದ ಕಾರಣ ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ಒಲಿ ಅವರನ್ನೇ ಪ್ರಧಾನಿಯನ್ನಾಗಿ ಗುರುವಾರ ರಾತ್ರಿ ಮರು ನೇಮಕ ಮಾಡಿದ್ದರು.



ಕೆ.ಪಿ.ಶರ್ಮಾ ಒಲಿ

ಒಲಿ, 30 ದಿನದೊಳಗೆ ವಿಶ್ವಾಸಮತ ಸಾಬೀತುಪಡಿಸಬೇಕಾಗುತ್ತದೆ. ಆ ಪ್ರಯತ್ನ ವಿಫಲವಾದಲ್ಲಿ, ಸಂವಿಧಾನದ 76(5) ವಿಧಿಯಡಿಯಲ್ಲಿ ಸರ್ಕಾರ ರಚನೆಯ ಪ್ರಕ್ರಿಯೆ ಆರಂಭಿಸಲಾಗುತ್ತದೆ.

ಒಲಿ ಅವರು 2015ರ ಅಕ್ಟೋಬರ್ 11ರಿಂದ 2016ರ ಆಗಸ್ಟ್ 3ರವರೆಗೆ ಹಾಗೂ 2018ರ ಫೆಬ್ರುವರಿ 15ರಿಂದ 2021ರ ಮೇ 13ರವರೆಗೆ ಪ್ರಧಾನಿ ಸ್ಥಾನದಲ್ಲಿದ್ದರು.